
ಗೌರಿ ಲಂಕೇಶರ

ಲಂಕೇಶ್

ಏಪ್ರಿಲ್ 5, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಬೋಧನೆ

ಂಡ ಮಗ
ಿಲ್ ಪುರಾಣ

ಸಿದ್ಧು ಬಲಿಗೆ
ವ್ಹಿಪ್









ಸ್ಯ
ಬಡ್ಡಿ ಬಾಬುಗೆ
ನ್‌ಕಂ ಟ್ಯಾಕ್ಸ್ ಲಾತ


ಜೋಕುಮಾರಸ್ವಾಮಿ

ಯಚೂರು : ಗುಳೆ ಹೋದವರ ಹೆಸರಲ್ಲಿ 15 ಕೋಟಿ ಗುಳುಂ



ಬಾಗಲಕೋಟೆಯನ್ನು ಮಾರಾಟಕ್ಕಿಟ್ಟಿರುವ ಡಿ.ಸಿ. ಪ್ರಭಾಕರ!

ವಮೊಗ್ಗ : ಬ್ಲೇಡ್ ಫಾಲಾಕ್ಷಿಗೆ ಸ್ತ್ರೀ ಶಕ್ತಿ ಗೂಸಾ!



ಬೆಂಗಳೂರು
ರಾಮೇಗೌಡ ಎಂಬ ರಸ್ತೆ ರೋಗ



2004ರ ಡಿಸೆಂಬರ್ 26 ರ ಬೆಳಗ್ಗೆ ಸುನಾಮಿಯ ಭೀಕರ ಅಲೆಗಳು ಭಾರತದ ತಮಿಳುನಾಡು, ಕೇರಳವನ್ನೂ ಒಳಗೊಂಡಂತೆ ಇಡೀ ದಕ್ಷಿಣ ಹಾಗೂ ದಕ್ಷಿಣ ಪೂರ್ವ ಏಷಿಯಾದ ದೇಶಗಳನ್ನು ತಲ್ಲಣಗೊಳಿಸಿತು. ಲಕ್ಷಾಂತರ ಜನ ಸ್ಥಳದಲ್ಲೇ ಪ್ರಾಣಬಿಟ್ಟರಲ್ಲದೇ ಬದುಕುಳಿದವರು ಜೀವನ ನಡೆಸುವುದೇ ದುಸ್ಸಾಧ್ಯವಾಗುವಂತೆ ತಮ್ಮ ಮನೆ, ಮಠ, ಆಸ್ತಿ-ಪಾಸ್ತಿಗಳನ್ನೆಲ್ಲಾ ಕಳೆದುಕೊಂಡು ಬೀದಿಪಾಲಾದರು.

ಮನುಕುಲದ ವಿರುದ್ಧ ಪ್ರಕೃತಿ ಹೂಡಿದ ಈ ಯುದ್ಧಕ್ಕೆ ಇಡೀ ಜಗತ್ತು ಒಂದಾಗಿ ಸ್ಪಂದಿಸಿತು. ಬದುಕುಳಿದವರಿಗೆ ಆಸರೆ ನೀಡಲು ಪ್ರಪಂಚದ ಮೂಲೆಮೂಲೆಯಿಂದ ಹಣಕಾಸು ಹಾಗೂ ಇತರ ಜೀವನಾವಶ್ಯಕ ಸಾಮಗ್ರಿಗಳು ಬಂದು ಬೀಳಲಾರಂಭಿಸಿದವು. ವಿಶ್ವಸಂಸ್ಥೆ ಇದರ ಮೇಲುಸ್ತುವಾರಿಗೆಂತಲೇ ಒಂದು ಇಲಾಖೆಯನ್ನೇ ತೆರೆಯಿತು.

ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ ಈವರೆಗೆ ಸುನಾಮಿ ಸಂತ್ರಸ್ತರಿಗೆಂದು 136 ಬಿಲಿಯನ್ ಡಾಲರ್‌ನಷ್ಟು ಹಣ ಹರಿದುಬಂದಿದೆ. ಅಂದರೆ ಸರಿ ಸುಮಾರು ಏಳು ಲಕ್ಷ ಕೋಟಿ ರೂಪಾಯಿಗಳಷ್ಟು!!. ಇದು ಕರ್ನಾಟಕದ ಈ ವರ್ಷದ ಬಜೆಟ್ಟಿನ 18 ಪಟ್ಟು. ಆದರೆ ಸುನಾಮಿಯಲ್ಲಿ ಬದುಕುಳಿದವರ ಸಂಖ್ಯೆ ಕರ್ನಾಟಕದ ಜನಸಂಖ್ಯೆಯ ಕಾಲು ಭಾಗದಷ್ಟು ಮಾತ್ರ. ಸುನಾಮಿ ಅಪ್ಪಳಿಸಿ ಎರಡು ವರ್ಷಗಳಾದ ನಂತರವೂ ಸಂತ್ರಸ್ತರ ಎರಡು ಪರ್ಸೆಂಟ್‌ನಷ್ಟು ಜನರೂ ಮೊದಲಿನ ಜೀವನಕ್ಕೆ ಮರಳಲಾಗಿಲ್ಲ. ಶೇ. 75ರಷ್ಟು ಜನರ ಪರಿಸ್ಥಿತಿ ಮೊದಲಿಗಿಂತ ಬಗಡಾಯಿಸಿದೆ.

ಒಂದು ಪ್ರಶ್ನೆ:

ಹಾಗಿದ್ದಲ್ಲಿ 7 ಲಕ್ಷ ಕೋಟಿ ರುಪಾಯಿ ಹೋಯಿತಲ್ಲಿಗೆ?

C.E.T-ಸೈಕಲ್ಲೋ, ರೈಲೋ..?:

ಯಡಿಯೂರಪ್ಪನವರ ಬಜೆಟ್ ಎಲ್ಲಾ ವರ್ಗಗಳಿಗೂ ಸಾಂತ್ವನ ತಂದ ಬಜೆಟ್ಟೆಂದು ಯಾರು ಹೇಳದೇ ಹೋಗಬಹುದೆಂದು ಈ ಬಾರಿ ಬಜೆಟ್ ಭಾಷಣದಲ್ಲೇ ಯಡಿಯೂರಪ್ಪನವರೇ ಅಚ್ಚು ಹಾಕಿಸಿಬಿಟ್ಟಿದ್ದಾರೆ. ಬಜೆಟ್ಟಿನಲ್ಲಿ ಅವರು ಹೆಣ್ಣು ಮಕ್ಕಳಿಗೆ ಸೈಕಲ್ ಹತ್ತಿಸಿಬಿಟ್ಟಿದ್ದರೆ ಸಿ.ಇ.ಟಿ. ವಿದ್ಯಾರ್ಥಿಗಳಿಗೆ ರೈಲನ್ನೆ ಹತ್ತಿಸಿಬಿಟ್ಟಿದ್ದಾರೆ!



ಬಜೆಟ್ಟಿನಲ್ಲಿ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ವೃತ್ತಿ ಶಿಕ್ಷಣದ ಶುಲ್ಕದ ಹೊರೆಯನ್ನು ಸರ್ಕಾರವೇ ಭರಿಸುವುದಾಗಿ ಹೊಸದಾಗಿ ಭರವಸೆಯನ್ನು ನೀಡಲಾಗಿದೆ. ಇದಕ್ಕೂ ಹಿಂದೆ ವೃತ್ತಿಶಿಕ್ಷಣ ಪಡೆದುಕೊಳ್ಳುತ್ತಿರುವ ದಲಿತ ಮಕ್ಕಳ ಶುಲ್ಕದ ಹೊರೆಯನ್ನು ಸರ್ಕಾರವೇ ಭರಿಸುವುದಾಗಿ ಹಿಂದಿನ ಸರ್ಕಾರಗಳು ಹೇಳಿದ್ದವು. ಆ ಮೂಲಕ ವೃತ್ತಿಶಿಕ್ಷಣ ಲಾಬಿಗೆ ಮಣಿದು ದಲಿತ ವಿದ್ಯಾರ್ಥಿಗಳಿಗೆ ರಿಯಾಯಿತಿ ಶಿಕ್ಷಣ ಕೊಡಬೇಕಾದ ಸಂವಿಧಾನಾತ್ಮಕ ಹೊರೆಯಿಂದ ಸರ್ಕಾರವೇ ಅವರನ್ನು "ಕಾಪಾಡಿತ್ತು." ಅದರಿಂದ ಉಂಟಾಗಬಹುದಾದ ರಾಜಕೀಯ ಅಂದರೆ ಚುನಾವಣಾ ಅಪಾಯಗಳನ್ನು ತಪ್ಪಿಸಿಕೊಳ್ಳಲು ಸರ್ಕಾರವೇ ದಲಿತರ ಶುಲ್ಕವನ್ನು ಭರಿಸುವುದಾಗಿ ಭರವಸೆಯನ್ನು ನೀಡಿತ್ತು. ಆದರೆ ಸರ್ಕಾರ ಇಷ್ಟು ಹಣ ನೀಡಬಹುದೇ ಎಂಬುದರ ಬಗ್ಗೆ ಸಿನಿಕರಾಗೆ ಇದ್ದ ಖಾಸಗೀ ಸಂಸ್ಥೆಗಳು ಒಂದು ವೇಳೆ ಸರ್ಕಾರ ಆ ಶುಲ್ಕವನ್ನು ಭರಿಸದಿದ್ದರೆ ತಾವು ಸರ್ಕಾರಿ ಸೀಟುಗಳನ್ನು ಅಡ್ಮಿಟ್ ಮಾಡಿಕೊಳ್ಳದೇ ಇರುವ ಸ್ವಾತಂತ್ರ್ಯ ಬೇಕೆಂದು ವಾದ ಹೂಡಿದ್ದವು. ಆದರೆ ಪ್ರಾರಂಭದಲ್ಲಿ ವೀರಾವೇಶದಿಂದ ತಾವು ದಲಿತರ ಶಿಕ್ಷಣಕ್ಕೆ ಆದ್ಯತೆ ಕೊಡುತ್ತೇವೆ ಎಂದೆಲ್ಲ ಬುರುಡೆ ಬಿಟ್ಟಿದ್ದ ಸರ್ಕಾರಗಳು ಮಾಡಿದ್ದೇನು?

ಇದೀಗ ಮತ್ತೊಂದು ಸಿ.ಇ.ಟಿ. ಪರ್ವ ಎದುರಾಗಿದೆ. ದಲಿತ ಮಕ್ಕಳ ಜೊತೆಗೆ ಬಡ ಮಕ್ಕಳ ಶುಲ್ಕವನ್ನು ಭರಿಸುವುದಾಗಿ ಉಚಿತ ಭರವಸೆಗಳನ್ನು ನೀಡಿದೆ. ಆದರೆ ವಾಸ್ತವದಲ್ಲಾಗಿರುವುದೇನು?

ಕಳೆದ ಎರಡು ವರ್ಷಗಳಿಂದ ದಲಿತ ಮಕ್ಕಳ ಶುಲ್ಕದ ಬಾಬತ್ತಿನಲ್ಲಿ ಸರ್ಕಾರ ಖಾಸಗಿ ಸಂಸ್ಥೆಗಳಿಗೆ ಕೊಡಬೇಕಾದ ಒಟ್ಟಾರೆ 5 ಕೋಟಿ ರೂ. ಬಾಕಿ ಇದೆ. ಈ ಹಣ ಬರದೆ ತಾವು ಈ ಬಾರಿ ಸರ್ಕಾರಿ ಕೋಟಾದ ದಲಿತ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳುವುದಿಲ್ಲವೆಂದು ಖಾಸಗೀ ಸಂಸ್ಥೆಗಳು ಬಹಿರಂಗವಾಗಿಯೇ ಘೋಷಿಸುತ್ತಿವೆ. ಬಡ ಮಕ್ಕಳಿಗೂ ಸರ್ಕಾರವೇ ಶುಲ್ಕ ಭರಿಸುತ್ತದೆಂದು ಹೊಸಹೊಸ ಯೋಜನೆಗಳನ್ನು ಘೋಷಿಸಿರುವ ಯಡ್ಡಿ ಬಜೆಟ್ ಹಳೇ ಬಾಕಿ ತೀರಿಸಲೆಂದು ಯಾವುದೇ ಹಣವನ್ನು ತೆಗೆದಿಟ್ಟಿಲ್ಲ. ಅಂದ ಮೇಲೆ ಖಾಸಗಿ ಸಂಸ್ಥೆಗಳು ದಲಿತ ಮಕ್ಕಳಿಗಾಗಲೀ, ಬಿ.ಪಿ.ಎಲ್. ಕುಟುಂಬದ ಬಡ ಹೆಣ್ಣು ಮಕ್ಕಳಿಗಾಗಲೀ ಸೀಟು ಕೊಡುವುದುಂಟೇ?

ಹೀಗಾಗಿ ಯಡ್ಡಿ ದರ್ಬಾರಿನಲ್ಲಿ ಹೆಣ್ಣು ಮಕ್ಕಳಿಗೆ ಸೈಕಲ್ಲು-ಬಡ ಹಾಗೂ ದಲಿತ ಮಕ್ಕಳಿಗೆ ರೈಲು!!



ಇದು ಬಜೆಟ್‌ಗಳ ಯುಗ. ಅದಕ್ಕೆ ತನ್ನಂತೆ ತಾನೆ ಏನೂ ವಿಶೇಷತೆ ಇಲ್ಲ ಎಂಬುದು ನಿಜವಾದರೂ ನಮ್ಮನ್ನು ಆಳುವವರು ಎಷ್ಟು ಜನವಿರೋಧಿಗಳು ಎಂಬ ಬಗ್ಗೆ ಅದರಲ್ಲಿ ಒಂದಷ್ಟು ಅಂಕಿಅಂಶಗಳ ಸಾಕ್ಷಿಯೂ ಸಿಗುವುದರಿಂದ ಜನಸಾಮಾನ್ಯರು ಬಜೆಟ್ಟಿನ ಬಗ್ಗೆ ಗಮನ ಕೊಡುವುದು ಮುಖ್ಯ. ಆದರೆ ಬಜೆಟ್ಟುಗಳಲ್ಲಿ ಅಂಕಿಅಂಶಗಳನ್ನು ಎಂತಹ ಮೋಡಿ ಭಾಷೆಯಲ್ಲಿ ಬರೆದಿರುತ್ತಾರೆಂದರೆ ಆ ಸಂಖ್ಯೆಗಳಿಗೆ ಅರ್ಥವೇನೆಂಬುದೇ ತಿಳಿಯುವುದಿಲ್ಲ. ಹೀಗಾಗಿ ತುಲನಾತ್ಮಕವಾಗಿ ಬಜೆಟ್ಟಿನಲ್ಲಿ ಮತ್ತು ಈವರೆಗಿನ ಪಂಚವಾರ್ಷಿಕ ಯೋಜನೆಗಳಲ್ಲಿ ಯಾವ್ಯಾವ ಬಾಬತ್ತಿಗೆ ಎಷ್ಟು ಖರ್ಚು ಮಾಡಲಾಗಿದೆ ಎಂಬುದನ್ನು ಕೆಳಗೆ ನೀಡಲಾಗಿದೆ.

ಒಂದು ಸತ್ಯ:

ದೇಶದ ನಾಗರೀಕರ ಗಮನಕ್ಕೆ:

-ಪ್ರತಿ ವರ್ಷ ನಮ್ಮ ದೇಶದ ಶೇ. 20ರಷ್ಟು ಆದಾಯವನ್ನು ಅಂದರೆ 65 ಬಿಲಿಯನ್ ಡಾಲರಿನಷ್ಟು ಎಂದರೆ ಸರಿ ಸುಮರು 3 ಲಕ್ಷ ಕೋಟಿಯಷ್ಟು ಹಣವನ್ನು ಲಾಭ, ಗೌರವ ಧನ, ಶುಲ್ಕ ಇನ್ನಿತ್ಯಾದಿ ಹೆಸರುಗಳಲ್ಲಿ ಬಹುರಾಷ್ಟ್ರಿಯ ಕಂಪನಿಗಳು ಸುಲಿಯುತ್ತಿವೆ.

-ಇಂದು ಈ ದೇಶದ ಪ್ರತಿ ಕುಟುಂಬದ ತಲೆಯ ಮೇಲೆ ತಲಾ 30000ರೂ. ಸಾಲವಿದೆ.

-ಶಿಕ್ಷಣ, ಆರೋಗ್ಯ ಇನ್ನಿತ್ಯಾದಿ ಸಮಾಜ ಕಲ್ಯಾಣ ಕಾರ್ಯಕ್ರಮಗಳ ಮೇಲೆ ವೆಚ್ಚ ಮಾಡುವ ಪ್ರತಿ 1 ರೂಪಾಯಿಗೆ ಪ್ರತಿಯಾಗಿ ರಕ್ಷಣೆ ಮತ್ತು ಬಡ್ಡಿಗಳಿಗಾಗಿ 170 ರೂ.ಗಳನ್ನು ವೆಚ್ಚ ಮಾಡಲಾಗುತ್ತಿದೆ.

-ಆರೋಗ್ಯಕ್ಕಾಗಿ ತಲಾವಾರು ವಾರ್ಷಿಕ ರೂ.1.2ನ್ನು ವೆಚ್ಚ ಮಾಡುತ್ತಿದ್ದರೆ ಜನರನ್ನು ದಮನಿಸುವ ಪೋಲೀಸ್ ಇಲಾಖೆಗೆ ತಲಾವಾರು ವಾರ್ಷಿಕ 2200 ರೂ.ಗಳನ್ನು ವೆಚ್ಚ ಮಾಡಲಾಗುತ್ತಿದೆ.

ಚಾರ್ವಾಕ

\- ಶಿವಸುಂದರ್-

ಉರುಗ್ವೆ ಭಾರತಕ್ಕೆ ಹೋಲಿಸಿದಲ್ಲಿ ಅತಿ ಸಣ್ಣ ದೇಶ. ಪ್ರಜಾಪ್ರಭುತ್ವ ಹೊಂದಿರುವ ದೇಶ. ಆದರೆ ಭಾರತದಷ್ಟು ಪ್ರಜಾಪ್ರಭುತ್ವಕ್ಕೆ ಸಂಬಂಧಪಟ್ಟಂತೆ ಪ್ರಚಾರ ಪಡೆದಿಲ್ಲ. ಆದರೆ ವ್ಯತ್ಯಾಸ ನೋಡಿ.

ಕಳೆದ ಕೆಲವು ವರ್ಷಗಳಿಂದ ಭಾರತ ಮತ್ತು ಉರುಗ್ವೆಗಳೆರಡರಲ್ಲೂ ಕುಡಿಯುವ ನೀರಿನ ಸರಬರಾಜನ್ನು ವಿದೇಶಿ ದೈತ್ಯ ಕಂಪನಿಗಳಿಗೆ ವಹಿಸಿಕೊಡುವ ಪ್ರಕ್ರಿಯೆ ಪ್ರಾರಂಭಗೊಂಡಿದೆ. ಆದರೆ ಸಾಕ್ಷರತೆ ಹಾಗೂ ಪ್ರಜ್ಞಾವಂತಿಕೆಯಲ್ಲಿ ದೊಡ್ಡಣ್ಣನಾಗಿರುವ ಭಾರತದಲ್ಲಿ ಇದರ ಬಗ್ಗೆ ಈಗಲೂ ಶೇ.90 ರಷ್ಟು ಜನತೆಗೆ ವಿಷಯವೇ ತಿಳಿದಿಲ್ಲ. ಪ್ರಜಾಸತ್ತೆ ಬೇರುಬಿಟ್ಟಿರುವ ಈ ದೇಶದಲ್ಲಿ ಅಸೆಂಬ್ಲಿ ಹಾಗೂ ಪಾರ್ಲಿಮೆಂಟುಗಳಲ್ಲಿ ಚರ್ಚೆಯೂ ಆಗದೆ ಈ ಯೋಜನೆಗಳು ಜಾರಿಯಾಗುತ್ತಿವೆ. ಆದರೆ ಉರುಗ್ವೆಯಲ್ಲಿ ಈ ಖಾಸಗೀಕರಣದ ಪರಿಣಾಮ ಜನರ ಅನುಭವಕ್ಕೆ ಬರುತ್ತಿದ್ದಂತೆ ದೊಡ್ಡ ರೀತಿಯ ಪ್ರತಿಭಟನೆಗಳು ಪ್ರಾರಂಭವಾದವು. ಪರಿಣಾಮವಾಗಿ ಮೊನ್ನೆ ಉರುಗ್ವೆಯಲ್ಲಿ ಕುಡಿಯುವ ನೀರು ಜೀವನಾವಶ್ಯಕ ಮೂಲಭೂತ ಹಕ್ಕೆಂದೂ ಅದನ್ನು ಖಾಸಗೀಕರಿಸಬಾರದೆಂದೂ, ಎಲ್ಲಾ ಕಾಲಕ್ಕೂ ಅದನ್ನು ಸರ್ಕಾರವೇ ನಿಭಾಯಿಸಬೇಕೆಂದೂ ಸಂವಿಧಾನಕ್ಕೆ ತಿದ್ದುಪಡಿ ತರಲಾಗಿದೆ. ನಮ್ಮ ದೇಶದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಕುಡಿಯುವ ನೀರಿನ ಖಾಸಗೀಕರಣ ಮುಂದುವರೆದಿದೆ. ನದಿಗಳನ್ನೇ ಖಾಸಗೀಕರಿಸಲಾಗುತ್ತಿದೆ.




ಕಿಡಿ-ಕಿಂಡಿ

ಉರುಗ್ವೆ ಭಾರತದ ನಾಗರಿಕ ಸಮಾಜಕ್ಕೂ ಹಾಗೂ ಪ್ರಭುತ್ವಕ್ಕೂ ಹಲವಾರು ಪಾಠಗಳನ್ನು ಕಲಿಸುತ್ತದೆ. ಕಲಿಯುವ ಮನಸ್ಸಿದ್ದರೆ!

No Comments

"ರಾಮಾಜೋಯಿಸ್‌ರಂತ ಉತ್ತಮರನ್ನು ಕಣಕ್ಕೆ ಇಳಿಸಿದ್ದರೆ ನಾನು ಚುನಾವಣೆಗೆ ನಿಲ್ಲುತ್ತಿದ್ದೆ?"

-ಜ್ಞಾನಪೀಠಿ ಅನಂತಮೂರ್ತಿ.



"ಬಿ.ಜೆ.ಪಿ.ಯನ್ನು ಅಸ್ಪೃಶ್ಯರಂತೆ ಕಾಣುವುದು ತಪ್ಪು. ಕೋಮುವಾದಿ ಶಕ್ತಿಗಳಿಗಿಂತ ಜಾತಿವಾದಿ ಶಕ್ತಿಗಳೇ ಹೆಚ್ಚು ಅಪಾಯಕಾರಿ"

-ಎಂ.ಪಿ.ಪ್ರಕಾಶ್.

"ನಾನು ಮಂತ್ರಿಯಾಗಿರೋದು ಲಾಟರಿ ನಡೆಸೋಕೆ. ಲಾಟರಿ ನಿಷೇಧಿಸಲೆಂದಲ್ಲ"

-ಲಾಟರಿ ಮಂತ್ರಿ ರಾಮಚಂದ್ರಗೌಡ

"ಕ್ರಿಕೆಟಿಗರ ಸಮಸ್ಯೆ ನೀಗಿಸಲು ಬಿ.ಸಿ.ಸಿ.ಐ. ಒಂದು ವಿಮಾನವನ್ನು ಕೊಂಡುಕೊಳ್ಳಬೇಕು"

-ಬಿ.ಸಿ.ಸಿ.ಐ.ಸದಸ್ಯ.

"ನನ್ನ ಪೀಳಿಗೆ ನಮ್ಮ ಮೇಲಿಟ್ಟ ನಿರೀಕ್ಷೆಗಳನ್ನು ಹುಸಿ ಮಾಡಿದೆ"

-ದೇವಕಿ ಜೈನ್.

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

"ನಾನು 2004 ರಲ್ಲಿ ಮಾಡಿದ ಯಾತ್ರೆಗೆ ಭಾರತ ಪ್ರಕಾಶಿಸುತ್ತಿದೆ ಎಂಬುದರ ಬದಲಾಗಿ ಭಾರತ ಉದಯಿಸುತ್ತಿದೆ ಎಂದು ಹೆಸರಿಟ್ಟಿದ್ದರೆ ನಾವು ಗೆಲ್ಲುತ್ತಿದ್ದೆವು"


-ಎಲ್.ಕೆ.ಅದ್ವಾನಿ.

"ನಾನು ರಾಜಕೀಯಕ್ಕೆ ಬಂದದ್ದು ಸ್ವಂತ ಲಾಭಕ್ಕಲ್ಲ, ದೇಶದ ಸೇವೆಗೆ"

-ಸೋನಿಯಾ ಗಾಂಧಿ.

"ಬಿ.ಜೆ.ಪಿ.ಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಕುಮಾರ ಒದ್ದಾಡುತ್ತಿದ್ದಾನೆ. ಅವನ ನೋವು ನನಗೆ ಅರ್ಥವಾಗುತ್ತದೆ"

-ದೇವೇಗೌಡ.



"ಅಮಿತಾಬ್ ಬಚ್ಚನ್ ಕೃಷಿಕ"

-ಪುಣೆಯ ಜಿಲ್ಲಾಧಿಕಾರಿ.

"ನಾನು ನೂರಕ್ಕೆ ನೂರರಷ್ಟು ಕನ್ನಡಿಗ"


-ರಾಜೀವ್ ಚಂದ್ರಶೇಖರ್, ರಾಜ್ಯಸಭಾ ಅಭ್ಯರ್ಥಿ.

"ಮನುಷ್ಯ ಹೇಗೆ ಸತ್ತ ಎಂಬುದಕ್ಕಿಂತಲೂ ಹೇಗೆ ಬದುಕಿದ್ದ ಎಂಬುದು ಮುಖ್ಯ" ಎಂದು ಶೇಕ್ಸ್‌ಪಿಯರ್ ಹೇಳಿದ್ದರು. ಈ ವಾರ ಮೇಟಿ ಕೊಟ್ರಪ್ಪನವರು ಕಳುಹಿಸಿರುವ ಮನುಷ್ಯನ ಬಗೆಗಿನ ಕೆಲವು ಸೂಕ್ತಿಗಳನ್ನು ಪ್ರಕಟಿಸುತ್ತಿದ್ದೇವೆ.

-ಗೌರು

ಖಾಸಗಿ ನೀರಿನಲ್ಲಿ ಮುಳುಗಿಸುವವರಿದ್ದಾರೆ ಎಚ್ಚರಿಕೆ!


ವಿಶ್ವ ನೀರು ದಿನಾಚರಣೆಯಾದ ಮಾರ್ಚ್ 22 ..ದು 'ದಿ ಹಿಂದೂ' ದಿನಪತ್ರಿಕೆಯಲ್ಲಿ ಎರಡು ವಿಶೇಷ ..ಖನಗಳು ಪ್ರಕಟಗೊಂಡಿದ್ದವು. ಮೊದಲನೆ ..ಖನದಲ್ಲಿ ಕುಡಿಯುವ ನೀರು ಅತ್ಯಗತ್ಯವಾಗಿರುವ ..ದರ್ಭದಲ್ಲಿ ಅದನ್ನು ಖಾಸಗೀಕರಿಸಬೇಕೆಂದು ..ದಿಸಲಾಗಿತ್ತು. ಹೀಗೆ ಖಾಸಗೀಕರಿಸಿದರೆ ನೀರಿನ .. ಹೆಚ್ಚಾಗುತ್ತದೆ ಎಂಬ ವಾದವಿರುವುದು ನಿಜವಾ..ೂ ಈಗ ಕುಡಿಯುವ ..ರಿಗೆ ಅತಿ ಕಡಿಮೆ ..ಚು ನಿಗದಿ ಮಾಡಿರುವು..ಂದ ಅದರ ಹೆಚ್ಚಳ ..ನಲ್ಲವೆಂದೂ ಲೇಖನ ..ದಿಸಿತ್ತು. ನಿತ್ಯ ಜೀವನಕ್ಕೆ ..ತ್ಯವಾದ ಕುಡಿಯುವ ..ನ ಸರಬರಾಜು, ಅದಕ್ಕೆ ..ುವ ವೆಚ್ಚ, ಆ ವೆಚ್ಚ .. ಸರಿದೂಗಿಸಲು ..ದಿಪಡಿಸಬೇಕಿರುವ ..… ಹೀಗೆ ನೀರನ್ನೂ ..ದು ಮಾರಾಟದ ಸಾಮಗ್ರಿ ಎಂಬಂತೆ ಸಮರ್ಥಿಸಿ ..ಂಡು, ನೀರಿನ ಬೇಡಿಕೆಯನ್ನೂ ಮಾರುಕಟ್ಟೆಯ ..ಗಳಾದ ಲಾಭ-ನಷ್ಟ ದೃಷ್ಟಿಕೋನದಿಂದಲೇ ವಿವರಿ.. ಆ ಲೇಖನವನ್ನು ಬರೆದಿದ್ದವರು ಬೇರೆ ಯಾರೂ ..: ಭಾರತಕ್ಕೆ ಅಮೆರಿಕಾದ ರಾಯಭಾರಿಯಾಗಿ ..ದಿರುವ ಡೇವಿಡ್ ಸಿ. ಮುಲ್‌ಫೋರ್ಡ್.



ಸಾಯಿನಾಥ್

ಅದೇ ದಿನ 'ದಿ ಹಿಂದೂ'ನಲ್ಲಿ ನೀರಿನ ಖಾಸಗೀ..ಣದ ಬಗ್ಗೆ ಮತ್ತೊಂದು ಲೇಖನವಿತ್ತು. ಅದನ್ನು ..ದಿದ್ದವರು 'ಅಭಿವೃದ್ಧಿ ಪತ್ರಿಕೋದ್ಯಮ'ಕ್ಕೆ ಹೆಸರುವಾಸಿ..ರುವ ಪಿ. ಸಾಯಿನಾಥ್‌ರವರು. ನೀರಿನ ಖಾಸಗೀಕರಣ..ದಾಗಿ ಸಂಭವಿಸಲಿರುವ ದುರಂತಗಳ ಬಗ್ಗೆ ಚರ್ಚಿಸಿ..ದ ಸಾಯಿನಾಥ್ ತಮ್ಮ ಲೇಖನದ ಆರಂಭದಲ್ಲೇ ..ನ ಖಾಸಗೀಕರಣ ಕುರಿತು ವಿಶ್ವಬ್ಯಾಂಕಿನ ಕುತಂತ್ರವನ್ನು ಬಯಲಿಗೆಳೆದಿದ್ದರು. ವಿಶ್ವಬ್ಯಾಂಕಿನ ಕುತಂತ್ರ ಎಷ್ಟು ಹಾಸ್ಯಾಸ್ಪದವಾಗಿದೆ ಎಂದರೆ ತನ್ನ ಇತ್ತೀಚಿನ ವರದಿಯೊಂದರಲ್ಲಿ "ಆಂಧ್ರ ಪ್ರದೇಶದ ಚಂದ್ರಬಾಬು ನಾಯ್ಡು ಮತ್ತು ಮಧ್ಯಪ್ರದೇಶದ ದಿಗ್ವಿಜಯ್‌ಸಿಂಗ್ ಎಂಬ ಮುಖ್ಯಮಂತ್ರಿಗಳು ನೀರನ್ನು ಖಾಸಗೀಕರಿಸುತ್ತಿರುವುದು ಜನರ ಮೆಚ್ಚುಗೆ ಗಳಿಸಿದೆ. ಆದ್ದರಿಂದ ಜನರೆಲ್ಲರೂ ನೀರಿನ ಖಾಸಗೀಕರಣ ಪರವಾಗಿರುವ ಈ ವೀರರನ್ನು ಚುನಾವಣೆಯಲ್ಲಿ ಮತ್ತೆ ಗೆಲ್ಲಿಸುತ್ತಾರೆ" ಎಂದು ದಾಖಲಿಸಲಾಗಿದೆ. ವಾಸ್ತವವಾಗಿ ವಿಶ್ವಬ್ಯಾಂಕ್ ಪ್ರಾಯೋಜಿತ 'ನೀರು ಬಳಕೆದಾರರ ಸಂಘ'ವನ್ನು ಹೈದ್ರಾಬಾದಿನಲ್ಲಿ ಉದ್ಘಾಟಿಸಲು ವಿಶ್ವಬ್ಯಾಂಕಿನ ಜೇಮ್ಸ್ ವುಲ್ಫಸಾನ್ ಬಂದಿದ್ದಾಗ ಜನ ಎಷ್ಟು ತೀವ್ರವಾಗಿ ಪ್ರತಿಭಟಿಸಿದ್ದರೆಂದರೆ ಕೊನೆಗೆ ಯಾರೂ ಇಲ್ಲದಿದ್ದ ಜಾಗದಲ್ಲಿ ಆ ಸಂಘವನ್ನು ಉದ್ಘಾಟಿಸಿ ಹೋಗಿದ್ದರು. ಅಷ್ಟೇ ಅಲ್ಲ, ವಿಶ್ವ ಬ್ಯಾಂಕಿನ ಯೋಜನೆಗಳ ಅನುಷ್ಠಾನಕ್ಕೆ ಈ ಮುಖ್ಯಮಂತ್ರಿಗಳಿಬ್ಬರೂ ಪ್ರಯತ್ನಿಸಿದ್ದು ಜನ ದ್ರೋಹಿ ಕಾರ್ಯಗಳಾಗಿ ಕಂಡುಬಂದಿದ್ದರಿಂದಲೇ ಅವರಿಬ್ಬರನ್ನು ಜನ ಅಧಿಕಾರದಿಂದ ಒದ್ದೋಡಿಸಿದ್ದರು.

ಇದು ನಿಜವಾದ ಸಂಗತಿಯಾದರೂ ಅಮೆರಿಕಾದ ರಾಯಭಾರಿ ಮುಲ್‌ಫೋರ್ಡ್ ಮತ್ತು ಅಮೆರಿಕಾದ ಕೀಲುಗೊಂಬೆ ವಿಶ್ವಬ್ಯಾಂಕ್ ನೀರಿನ ಖಾಸಗೀಕರಣ ಆಗಲೇಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಇದು ಸರಿಯಾದ ಕ್ರಮ ಅಲ್ಲ ಎಂಬ ಅರಿವೂ ಇಲ್ಲದ ನಮ್ಮ ಜನಪ್ರತಿನಿಧಿಗಳು, ತಮ್ಮ ಜೇಬಿಗೆ ಮಲ್ಟಿನ್ಯಾಷನಲ್ ಕಂಪನಿಗಳು ನೀಡುತ್ತಿರುವ ಲಂಚವನ್ನು ತುಂಬಿಕೊಂಡು ನೀರಿನ ಖಾಸಗೀಕರಣಕ್ಕೆ ಅನುಮತಿ ನೀಡುತ್ತಿದ್ದಾರೆ. ಎಲ್ಲಾ ಸರಿಯಾಗಿ ನಡೆದರೆ ಮುಂದಿನ ಎರಡು ವರ್ಷಗಳಲ್ಲಿ ದೇಶದ ಎಲ್ಲಾ ಪ್ರಮುಖ ನಗರಗಳಲ್ಲಿನ ಕುಡಿಯುವ ನೀರು ಸರಬರಾಜು ವ್ಯವಸ್ಥೆಯೊಂದಿಗೆ ದೇಶದ ಎಲ್ಲಾ ನದಿಗಳೂ ವಿದೇಶಿ ಕಂಪನಿಗಳ ಸ್ವತ್ತಾಗುತ್ತವೆ. ಇದರ ವಿರುದ್ಧ ಎಲ್ಲೆಡೆ ಪ್ರತಿಭಟನೆಗಳು ನಡೆಯುತ್ತಿದ್ದರೂ ಯಾವ ರಾಜಕೀಯ ಪಕ್ಷವಾಗಲಿ, ನಾಯಕರಾಗಲಿ ಕ್ಯಾರೆ ಅನ್ನುತ್ತಿಲ್ಲ.



ಮುಲ್‌ಫೋರ್ಡ್

ಕಂಡಹಾಗೆ



ಇವತ್ತು ಜರ್ಮನಿ, ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್ ದೇಶದ ಕಂಪನಿಗಳು ಭಾರತದಲ್ಲಿ ಕುಡಿಯುವ ನೀರು ಖಾಸಗೀಕರಣಗೊಳ್ಳಲಿ ಎಂದು ಒತ್ತಡ ಹೇರುತ್ತಿರುವುದಕ್ಕೆ ಕಾರಣವಿದೆ. ಈ ಕಂಪನಿಗಳು ಇಂತಹದ್ದನ್ನೇ ದಕ್ಷಿಣ ಅಮೆರಿಕಾ ಖಂಡದಲ್ಲಿನ ದೇಶಗಳಲ್ಲಿ ಮಾಡಲು ಹೋಗಿ ಅಲ್ಲಿ ಗೂಸಾ ತಿನ್ನಿಸಿಕೊಂಡು ಬಂದಿವೆ. ಇತ್ತೀಚೆಗೆ ಆ ಖಂಡದಲ್ಲಿನ ಪ್ರಜೆಗಳು ಎಡಪಂಥೀಯ ಪಕ್ಷಗಳನ್ನೇ ಅಧಿಕಾರಕ್ಕೇರಿಸುತ್ತಿರುವುದರಿಂದ ಮತ್ತು ಭಾರತದಲ್ಲಿ ನಾಯಕರಿಗೆ ಲಂಚ ನೀಡಿ ತಮ್ಮ ಉದ್ದೇಶ ಸಾಧಿಸಿಕೊಳ್ಳಬಹುದು ಎಂದು ಗೊತ್ತಿರುವುದರಿಂದ ಅವೆಲ್ಲಾ ಈಗ ನಮ್ಮ ದೇಶಕ್ಕೆ ಲಗ್ಗೆ ಇಟ್ಟಿವೆ. ವಿದೇಶಿ ಬಂಡವಾಳವೇ ನಮ್ಮ ರಾಜಕೀಯ ಪಕ್ಷಗಳ ನಿತ್ಯ ಜಪ ಆಗಿರುವುದರಿಂದ, ತಮ್ಮನ್ನೇ ಮಾರಾಟ ಮಾಡಿಕೊಳ್ಳಲು ಸಂಸದರೂ, ಶಾಸಕರೂ ತುದಿಗಾಲ ಮೇಲೆ ನಿಂತಿರುವುದರಿಂದ, ಇಲ್ಲಿ ನೀರಿನ ಖಾಸಗೀಕರಣದ ವಿರುದ್ಧದ ಜನಪ್ರತಿಭಟನೆಗೆ ಯಾರೂ ಕಿವಿಗೊಡುತ್ತಿಲ್ಲ.

ಆದರೆ ಇತ್ತೀಚೆಗೆ ಉರುಗ್ವೆಯಲ್ಲಿ ನಡೆದ ಜನಪ್ರತಿಭಟನೆ ಆಶಾದಾಯಕವಾಗಿದೆ. ಆ ದೇಶದಲ್ಲೂ ನೀರಿನ ಖಾಸಗೀಕರಣಕ್ಕೆ ಚಾಲನೆ ದೊರೆತು ಬಡವರಿಗೆ, ಕೊಳೆಗೇರಿಗಳಿಗೆ ಕುಡಿಯುವ ನೀರು ಸಿಗುವುದಿರಲಿ, ಮಧ್ಯಮ ವರ್ಗಕ್ಕೂ ಎಟುಕದಂತೆ ನೀರಿನ ದರ ಗಗನಕ್ಕೇರಿತು. ಇದರ ವಿರುದ್ಧ ಎಂತಹ ಪ್ರತಿಭಟನೆ ನಡೆಯಿತೆಂದರೆ, ಕಳೆದ ವರ್ಷ ನಡೆದ ಪ್ರಜಾ ನಿರ್ಧಾರ ಪ್ರಕ್ರಿಯೆಯಲ್ಲಿ ಮೂರರ ಎರಡನೇ ಭಾಗ ಖಾಸಗೀಕರಣವನ್ನು ವಿರೋಧಿಸಿ ಸಂವಿಧಾನದಲ್ಲಿ ತಿದ್ದುಪಡಿಯನ್ನು ತರಲಾಯಿತು.

ಆ ತಿದ್ದುಪಡಿಯ ಪ್ರಕಾರ ಮುಂದೆಂದೂ ಆ ದೇಶದ ನೀರನ್ನು ಖಾಸಗೀಕರಿಸುವಂತಿಲ್ಲ, ಹಾಗೆಯೇ ಸರ್ಕಾರವೇ ಅದನ್ನು ಸರಬರಾಜು ಮಾಡುವ ಜವಾಬ್ದಾರಿಯನ್ನು ಹೊರಬೇಕು.

ಇಂತಹ ಒಂದು ಜನ ಪ್ರತಿಭಟನೆ ಭಾರತದಲ್ಲೂ ನಡೆದು ಸಾರ್ವಜನಿಕರ ಸ್ವತ್ತಾದ, ನಿಸರ್ಗದ ಕೊಡುಗೆಯಾದ ನೀರು ಬಂಡವಾಳಶಾಹಿಗಳ ಕೈಗಳಿಗೆ ಸಿಗದಂತೆ ನೋಡಿಕೊಳ್ಳಬೇಕಿದೆ.

ಇಲ್ಲವೆಂದರೆ, ಇವತ್ತು ತಮ್ಮ ವೈಯಕ್ತಿಕ ಲಾಭಕ್ಕಾಗಿ ನೀರನ್ನು ವಿದೇಶಿ ಕಂಪನಿಗಳಿಗೆ ಮಾರುತ್ತಿರುವ ನಾಯಕರು ಮುಂದೆ ನಮ್ಮ ದೇಹದಲ್ಲಿನ ರಕ್ತವನ್ನೂ ಮಾರಲು ಹೇಸುವುದಿಲ್ಲ.

-ಗೌರಿ ಲಂಕೇಶ್

ಪೇಪರ್ ಬೆಲೆ, ಪ್ರಿಂಟಿಂಗ್ ರೇಟು, ಇನ್ನಿತರ ಖರ್ಚುಗಳು.... ಎಲ್ಲವೂ ಹೆಚ್ಚಾಗಿದೆ. ಆದ್ದರಿಂದ ನಾವೂ ವಿಧಿ ಇಲ್ಲದೆ ಈ ಪತ್ರಿಕೆಯ ದರವನ್ನು ಏರಿಸಲೇ ಬೇಕಾಗಿದೆ. ಆದರೆ ನಾವು ಬರೀ ಒಂದು ರೂಪಾಯಿ ಜಾಸ್ತಿ ಮಾಡುತ್ತಿದ್ದೇವೆ. ಏಜೆಂಟರು, ಓದುಗ ಮಿತ್ರರು ಸಹಕರಿಸಬೇಕೆಂದು ವಿನಂತಿ.

-ಸಂ

ನಡೆ ಮುಂದೆ, ನಡೆ ಮುಂದೆ ತಡೆಯುವವರಿದ್ದರೂ ಹಿಂದೆ....

ಕಾಲೇಜು ಬಿಟ್ಟಾಗಿನಿಂದ ನಾನು ಸಿಟಿ ಬಸ್ ..ನ್ನು ಹತ್ತಿರಲಿಲ್ಲ. ಮೊನ್ನೆ ಬೆಳಗ್ಗೆ ನನ್ನ ಸ್ಕೂಟಿ ..ಕೊಟ್ಟಿದ್ದರಿಂದ ಆಫೀಸಿಗೆ ಆಟೋದಲ್ಲಿ ಹೋಗುವು..ದು ನಿರ್ಧರಿಸಿದೆ. ಆದರೆ ಆಟೋ ಸ್ಟ್ಯಾಂಡ್ ..ಕ್ಕದಲ್ಲೇ ಇದ್ದ ಬಸ್ ಸ್ಟ್ಯಾಂಡ್‌ಗೆ ಬಸ್ ಬಂದು ..ತಿದ್ದರಿಂದ, ಅದರಲ್ಲಿ ಕೂರಲು ಜಾಗ ಕಂಡಿದ್ದರಿಂದ ..ಸ್ ಹತ್ತುವುದಾಗಿ ನಿರ್ಧರಿಸಿದೆ. ಖಾಕಿ ಸೀರೆ ಉಟ್ಟಿದ್ದ ..ೋಲೀಸ್ ಪೇದೆ ಆಗಿದ್ದ ಮಹಿಳೆಯ ಪಕ್ಕ ಖಾಲಿ ..ಗ ಇದ್ದಿದ್ದರಿಂದ ಅವರ ಪಕ್ಕದಲ್ಲೇ ಕೂತೆ.

ಆ ಮಹಿಳೆ ನನ್ನತ್ತ ಹಲವಾರು ಬಾರಿ ನೋಡಿ ..ಮ್ಮನಾಗುತ್ತಿದ್ದದ್ದು ನನಗೆ ವಿಚಿತ್ರವಾಗಿ ಕಂಡರೂ ..ನ್ನ ಪಾಡಿಗೆ ನಾನಿದ್ದೆ. ಕೊನೆಗೂ ಆಕೆಗೆ ಸುಮ್ಮನೆ ..ರಲಾಗದೆ "ನೀನು ಎಲ್ಲಿ ಓದುತ್ತಿದ್ದೀಯಮ್ಮಾ?" ..ದು ಕೇಳಿದರು. "ಇಲ್ಲ, ನಾನು ಕಾಲೇಜು ಬಿಟ್ಟು ..ಂಬಾ ದಿನ ಆಗಿದೆ. ನಾನು ಈಗ ವಕೀಲೆ ಆಗಿ ..ಸ ಮಾಡುತ್ತಿದ್ದೇನೆ," ಅಂದೆ.

"ಮದುವೆ ಆಗಿದೆಯಾ?"

"ಇಲ್ಲ."

"ಎಷ್ಟು ಸಂಬಳ?"

"ಐದಾರು ಸಾವಿರ...."

"ನಿನಗೆ ನಿನ್ನ ಕೆಲಸದಲ್ಲಿ ಸಂತೋಷ ಇದೆಯಾ?"

"ಇದೆ. ನಮ್ಮ ಕೈಲಾದಷ್ಟು ಜನರಿಗೆ ಸಹಾಯ ..ಡ್ತೀವಿ. ನಮ್ಮ ಬುದ್ಧಿ ಉಪಯೋಗಿಸಿ ..ಸ್ ಗೆಲ್ತೀವಿ ಅಂತ ನೆಮ್ಮದಿಯಾದರೂ ..ದೆ."

ಹೀಗೆ ಹೇಳುತ್ತಾ ಇದ್ದಾಗ ಆಕೆಯ ..ಣ್ಣುಗಳು ತುಂಬಿ ಬಂದವು. ತನ್ನ ಕೈಲಿದ್ದ .. ಬ್ಯಾಗಿನಿಂದ ಒಂದು ಕರ್ಚೀಫ್ ತೆಗೆದ.. ತನ್ನ ಕಣ್ಣನ್ನು ಒರೆಸಿಕೊಳ್ಳಲಾರಂಭಿಸಿದಳು. ಆಕೆ ಹೀಗೆ ಅಳಲು ನಾನು ಏನನ್ನು ..ದೆ ಎಂದು ಚಿಂತಿಸಲಾರಂಭಿಸಿದೆ. ಆಗ .. "ನಾನೆಂತಹ ದೊಡ್ಡ ತಪ್ಪು ಮಾಡಿದೆ" ..ದಳು. ನನಗೆ ಆಕೆ ಏನು ಹೇಳುತ್ತಿದ್ದಾರೆ ..ದು ತೋಚದೆ ಸುಮ್ಮನಿದ್ದೆ. ಆಕೆಯೇ .. ಮಾತು ಮುಂದುವರಿಸಿದರು.


"ನೀನು ಬಸ್ ಹತ್ತಿದ ಕೂಡಲೇ, ನಿನಗೂ ನನ್ನ ಮಗಳಿಗೂ ತುಂಬಾ ಹೋಲಿಕೆ ಇರುವುದನ್ನು ಗಮನಿಸಿದೆ. ಆದರೆ ನಿನ್ನ ಮುಖದಲ್ಲಿ ಎಷ್ಟು ಕಳೆ ಇದೆ, ನೀನು ಕೈತುಂಬಾ ದುಡಿಯುತ್ತೀಯಾ, ನೀನು ಒಬ್ಬಳೇ ಇದ್ದೀಯಾ. ಆದರೆ ನನ್ನ ಮಗಳು..... ಅವಳ ಜೀವನಾನ ನಾನೇ ನಾಶ ಮಾಡಿದೆ. ಅದಕ್ಕೆ ಅಳು ಬಂತು" ಎಂದರು.

"ಒಬ್ಬೊಬ್ಬರ ಜೀವನ ಒಂದೊಂದು ತರಹ ಇರುತ್ತೆ. ಏನು ಮಾಡಕ್ಕಾಗುತ್ತೆ" ಅಂದೆ ನಾನು.

ಇಲ್ಲ ಎಂಬಂತೆ ತಲೆ ದೂಗಿಸಿದ ಆಕೆ "ನನ್ನ ಮಗಳಿಗೆ ಓದಕ್ಕೆ ಆಸೆ ಇತ್ತು. ಚೆನ್ನಾಗಿ ಮಾರ್ಕ್ಸ್ ತಗೋತಿದ್ದಳು ಕೂಡ. ಆದರೆ ಆಕೆ ಓದಿ ಏನು ಮಾಡಬೇಕಿದೆ ಅಂತ ನಾನೇ ಅವಳನ್ನು ನನ್ನ ತಮ್ಮನಿಗೆ ಕೊಟ್ಟು ಮದುವೆ ಮಾಡಿದೆ. ಆದರೆ ಅವನು ಅವಳ ಜೀವನವನ್ನೇ ನರಕ ಮಾಡಿಟ್ಟಿದ್ದಾನೆ. ನಾನು ದುಡಿಯೋದರಲ್ಲಿ ಅವಳಿಗೂ ಒಂದಿಷ್ಟು ಕೊಟ್ಟು ಅವನನ್ನು ಸುಮ್ಮನಾಗಿಸುತ್ತೇನೆ. ನಾನು ಅವಳಿಗೆ ಬಲವಂತವಾಗಿ ಮದುವೆ ಮಾಡಿರದಿದ್ದರೆ ಇವತ್ತು ಅವಳು ನಿನ್ನಂಗೆ ಇರುತ್ತಿದ್ದಳು. ನಾನೇ ಅವಳ ಜೀವನ ನಾಶ ಮಾಡಿದೆ" ಎಂದರು ಆಕೆ ಮತ್ತೆ ಕಣ್ಣೀರು ಒರೆಸಿಕೊಳ್ಳುತ್ತಾ.



ಅವರ ಗಮನವನ್ನು ಬೇರೆ ವಿಷಯಗಳತ್ತ ಸೆಳೆದು ಸ್ವಲ್ಪ ಹೊತ್ತು ಮಾತನಾಡಿದೆ. ನನ್ನ ಸ್ಟಾಪ್ ಬಂದಾಗ ಅವರಿಗೆ ಬೈ ಹೇಳಿ ಹೊರಟೆ. ಆದರೆ ಆಕೆ ಹೇಳಿದ್ದು, ಕಣ್ಣೀರಿಟ್ಟಿದ್ದು ನನ್ನನ್ನು ದಿನವಿಡೀ ಕಾಡುತ್ತಲೇ ಇತ್ತು. ಹುಡುಗಿಯೊಬ್ಬಳ ಭವಿಷ್ಯ ಇರುವುದೇ ಆಕೆಯ ಮದುವೆಯಲ್ಲಿ ಎಂದು ಅದೆಷ್ಟೋ ತಂದೆ ತಾಯಂದಿರು ನಂಬಿರುವುದೇ ಇಂತಹ ದುರಂತಗಳಿಗೆ, ಕಣ್ಣೀರಿಗೆ ಕಾರಣ. ನೀವೂ ಗಮನಿಸಿರಬಹುದು, ತಂದೆ-ತಾಯಂದಿರಿಗೆ ತಮ್ಮ ಹೆಣ್ಣು ಮಗಳು ಚೆನ್ನಾಗಿ ಓದುವುದರ ಬಗ್ಗೆ ಹೆಮ್ಮೆ ಇದ್ದರೂ, ಆ ವಿದ್ಯೆಯೇ ಆಕೆಯ ಭವಿಷ್ಯ ಕೂಡ ಆಗಬಹುದು ಎಂದು ಅವರಿಗೆ ಅನ್ನಿಸುವುದೇ ಇಲ್ಲ. ಬದಲಾಗಿ "ಓದು ಮುಗಿಸುವಷ್ಟರಲ್ಲಿ ಅವಳಿಗೊಂದು ಮದುವೆ ಮಾಡಿಬಿಟ್ಟರೆ ನಾವು ನಮ್ಮ ಜವಾಬ್ದಾರಿಯಿಂದ ಮುಕ್ತರಾಗುತ್ತೇವೆ" ಎಂದೇ ಹೇಳುತ್ತಿರುತ್ತಾರೆ.



ಅಂದು ಸಂಜೆ ನಾನು ಕಬೀರನನ್ನು ಭೇಟಿ ಆದಾಗ, ಆ ತಾಯಿ ತನ್ನ ಮಗಳು ಏನೇನಾಗಬಹುದಿತ್ತು ಎಂಬುದನ್ನು ನನ್ನಲ್ಲಿ ಕಂಡಿದ್ದರ ಬಗ್ಗೆ ಹೇಳಿದೆ. "ಮಗಳ ಮದುವೆನೇ ಅವಳ ಜೀವನದಲ್ಲಿ ಅತಿಮುಖ್ಯವಾದದ್ದು ಅಂತ ಎಲ್ಲಿಯವರೆಗೂ ಭಾವಿಸುತ್ತಾರೋ, ಅಲ್ಲಿಯವರೆಗೂ ಇಂತಹದ್ದು ನಡೆಯುತ್ತಲೇ ಇರುತ್ತೆ" ಅಂತ ನಾನು ಹೇಳಿದೆ.

ಆದರೆ ಕಬೀರ್ ಇದಕ್ಕೆ ಒಪ್ಪಲಿಲ್ಲ. "ಇವತ್ತಿನ ಪೇಪರ್‌ನಲ್ಲಿ ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಚಿನ್ನದ ಪದಕ ಗೆದ್ದಿರುವ ಸರೋಜಾ ಕುಮಾರಿಯ ಬಗ್ಗೆ ಓದಿದೆಯಾ?" ಅಂದ. ನನಗೆ ಕ್ರೀಡೆಯಲ್ಲಿ ಅಷ್ಟು ಆಸಕ್ತಿ ಇಲ್ಲದಿರುವುದರಿಂದ ನಾನು ಆಕೆಯ ಬಗ್ಗೆ ಓದಿರಲಿಲ್ಲ. "ಇಲ್ಲ," ಅಂದೆ. "ಆ ಪೊಲೀಸ್ ಪೇದೆಯ ಮಗಳ ಭವಿಷ್ಯವನ್ನು ಮದುವೆ ಎಂಬುದು ತಡೆದು ಹಾಕಿತು. ಆದರೆ ಸರೋಜಾ ಕುಮಾರಿ ಜೀವನದಲ್ಲಿ ಆಕೆಯ ದಾಂಪತ್ಯ ಜೀವನವೇ ಅವಳ ಯಶಸ್ಸಿಗೆ ಅಡ್ಡಿಯಾಗಿದೆ" ಅಂದ ಕಬೀರ್.

"ಹೇಗೆ?"

"ಅವಳು ಮೆಲ್ಬೋರ್ನ್‌ಗೆ ಹೋಗಿ ಕಾಮನ್‌ವೆಲ್ತ್ ಕ್ರೀಡೆಯಲ್ಲಿ ಸ್ಪರ್ಧಿಸುವುದು ಅವಳ ಗಂಡನಿಗೆ ಇಷ್ಟವಿರಲಿಲ್ಲವಂತೆ. ಅದಕ್ಕೆ, ಅವಳು ಶೂಟಿಂಗ್‌ನಲ್ಲಿ ಚಿನ್ನದ ಪದಕ ಪಡೆದಿದ್ದನ್ನು ಕೇಳಿ ಸಂತೋಷ ಪಡುವ ಬದಲಾಗಿ ಕೋಪಗೊಂಡು ತಮ್ಮ ಮಕ್ಕಳಿಗೆ ಬಡಿದಿದ್ದಾನೆ, ಮನೆಯಲ್ಲಿನ ಸಾಮಾನುಗಳನ್ನು ನಾಶ ಮಾಡಿದ್ದಾನೆ, ಹೆಂಡತಿಯ ತಾಯಿಯ ಮೇಲೆ ಕೆಂಡ ಕಾರಿದ್ದಾನೆ."

"ಇದಕ್ಕೆ ಸರೋಜಾ ಕುಮಾರಿ ಹೇಗೆ ಪ್ರತಿಕ್ರಿಯಿಸಿದ್ದಾಳೆ?" ಎಂದೆ ಅಚ್ಚರಿಗೊಂಡ ನಾನು.

"ಇನ್ನು ಮುಂದೆ ತಾನು ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸುವುದಿಲ್ಲ ಎಂದು ನಿರ್ಧರಿಸಿದ್ದಾಳೆ" ಅಂದ ಕಬೀರ್.

"ನೋಡು, ಮದುವೆ ಅನ್ನೋದು ಹೇಗೆ ಹಲವೊಮ್ಮೆ ಮಹಿಳೆಯರ ಬದುಕಿಗೇ ಕಂಟಕವಾಗುತ್ತದೆ. ಅದಕ್ಕೆ ಅನ್ನೋದು ಮಹಿಳೆಯರು ತಮ್ಮ ಕಾಲ ಮೇಲೆ ನಿಂತು, ಸ್ವಾಭಿಮಾನಿ ಮತ್ತು ಸ್ವಾವಲಂಬಿಗಳಾದಾಗ ಮಾತ್ರ ಅವರು ನಿಜವಾಗಲೂ ಸ್ವತಂತ್ರರಾಗುವುದು" ಅಂದ.

"ಶಾರು, ನೀನು ಈಗ ಸ್ವಾಭಿಮಾನಿ, ಸ್ವಾವಲಂಬಿ. ಹೇಳು, ನೀನು ಯಾವಾಗ ಮದುವೆ ಆಗುತ್ತೀಯಾ?" ಎಂದು ಕಬೀರ್ ಚುಡಾಯಿಸಿದ.


"ತಲೆ ಹರಟೆ ಬೇಡ" ಎಂದ ನಾನು ಆ ಇಬ್ಬರು ಮಹಿಳೆಯರ ಬಗ್ಗೆ ಚಿಂತಿಸುತ್ತಾ ಕೂತೆ....

-ಶಾರದೆ

ರಾಮೇಗೌಡ ಎಂಬ ರಸ್ತೆ ರೋಗ

ಕಳೆದ ಹನ್ನೆರಡು ವರ್ಷಗಳಿಂದ ಪಾಲಿಕೆಯ ಮುಖ್ಯ ಇಂಜಿನಿಯರ್ ಗಾದಿಯನ್ನಾಳುತ್ತಾ ರಸ್ತೆ ರಿಪೇರಿಯ ಹೆಸರಲ್ಲಿ ಸಾವಿರದ ಇನ್ನೂರು ಕೋಟಿಯಷ್ಟು ಮುಂಡಾಮೋಚಿದ್ದ, ನೂರಾರು ಕೋಟಿಗಳ ಬೋಗಸ್ ಬಿಲ್ ಸೃಷ್ಟಿಸಿದ್ದ, ಖದೀಮ ಕಂಟ್ರಾಕ್ಟರುಗಳ ಸಂತತಿಯನ್ನೇ ಹುಟ್ಟು ಹಾಕಿದ್ದ, ತನ್ನ ಕರ್ಮಕಾಂಡಗಳನ್ನು ಪ್ರಶ್ನಿಸಿದ ಪ್ರತಿಯೊಬ್ಬ ಪಾಲಿಕೆ ಕಮೀಷನರ್‌ರನ್ನೂ ಕೌನ್ಸಿಲರ್‌ಗಳನ್ನು ಛೂ ಬಿಟ್ಟು ಎತ್ತಂಗಡಿ ಮಾಡಿಸಿದ್ದ, ನೂರಾರು ಕೋಟಿ ಮೊತ್ತದ ಪಾಲಿಕೆ ಆಸ್ತಿಯನ್ನು ಮಾರಿಕೊಂಡಿದ್ದ ಮತ್ತು ತನ್ನದೇ ಭ್ರಷ್ಟ ಇಂಜಿನಿಯರ್ ಶಿಷ್ಯರ ಪಡೆಯನ್ನು ಹುಟ್ಟು ಹಾಕಿದ್ದ ಇಂಜಿನಿಯರ್ ಇನ್ ಚೀಫ್ ರಾಮೇಗೌಡ ಎಂಬ ದೈತ್ಯ ಹೆಗ್ಗಣದ ಸಂಕ್ಷಿಪ್ತ ಪರಿಚಯ.....

ಬೆಂಗಳೂರಿನ ರಸ್ತೆ ದುರವಸ್ಥೆ ಕಂಡು ಮುಖ್ಯಮಂತ್ರಿ ಕುಮಾರಸ್ವಾಮಿ ಪತ್ರಕರ್ತರ ಮುಂದೆ ಎದೆ ಬಡಿದುಕೊಂಡಿದ್ದೇನೋ ಓಕೆ. ಆದರೆ ರಾಮೇಗೌಡ ಎಂಬ ಹುಟ್ಟಾ ಭ್ರಷ್ಟನ ಜೊತೆ ಕೂತು ರಸ್ತೆ ಸುಧಾರಣೆ ಬಗ್ಗೆ ಚರ್ಚಿಸುತ್ತಿದ್ದಾರಲ್ಲ, ಯಾಕೆ?



ಸದ್ಯ ಬೆಂಗಳೂರು ಸಿಟಿ ಕಾರ್ಪೋರೇಷನ್ನಿನ ಯಾವ ಸಂದಿ ಹೊಕ್ಕರೂ ಇದೇ ಮಾತು. ಅದು ಇಂಜಿನಿಯರ್ ಇನ್ ಚೀಫ್ ರಾಮೇಗೌಡ ಎಂಬ ದೈತ್ಯ ಹೆಗ್ಗಣದ ಸಂಕ್ಷಿಪ್ತ ಪರಿಚಯ ಕೂಡ. ಯಾವ ವೈರಸ್ ರೋಗಕ್ಕೆ ಕಾರಣವೋ ಅದನ್ನೇ ಕೇಳಿ ಔಷಧಿ ಕೊಡಲು ಹೊರಟ ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ಏನೆನ್ನಬೇಕು?

ಫೆಬ್ರುವರಿ ಹದಿನೈದರ ಬುಧವಾರ ಬೆಂಗಳೂರಿನ ರಸ್ತೆ ದುರವಸ್ಥೆಯ ವಿರುದ್ಧ ಪಾಲಿಕೆ ಆಯುಕ್ತ ಜ್ಯೋತಿ ರಾಮಲಿಂಗಮ್, ಪ್ರಧಾನ ಕಾರ್ಯದರ್ಶಿ ಎಸ್.ವಿ. ರಂಗನಾಥ್, ಹಿರಿಯ ಅಧಿಕಾರಿಗಳಾದ ಗೋಕುಲರಾಮ್ ಮತ್ತು ರಾಮಸ್ವಾಮಿಯವರೊಂದಿಗೆ ಮುಖ್ಯಮಂತ್ರಿ ಕುಮಾರಸ್ವಾಮಿ ಚರ್ಚಿಸುತ್ತಿದ್ದ ಫೋಟೋ ಪ್ರಜಾವಾಣಿಯ ಮುಖಪುಟದಲ್ಲೇ ಪ್ರಕಟವಾಗಿತ್ತು. ಹಾಗೇ ಅಚ್ಚಾಗಿದ್ದ ಫೋಟೋದಲ್ಲಿ ಮಿಕ್ಕೆಲ್ಲರಿಗಿಂತಲೂ ರಾಮೇಗೌಡನೇ ಹೆಚ್ಚು ಮಿಂಚುತ್ತಿದ್ದ!

ವಿಪರ್ಯಾಸ ಹೇಗಿತ್ತೆಂದರೆ ಕಳೆದ ಹನ್ನೆರಡು ವರ್ಷಗಳಿಂದ ಪಾಲಿಕೆಯ ಮುಖ್ಯ ಇಂಜಿನಿಯರ್ ಗಾದಿಯನ್ನಾಳುತ್ತಾ ರಸ್ತೆ ರಿಪೇರಿಯ ಹೆಸರಲ್ಲಿ ಸಾವಿರದ ಇನ್ನೂರು ಕೋಟಿಯಷ್ಟು ಮುಂಡಾಮೋಚಿದ್ದು, ನೂರಾರು ಕೋಟಿಗಳ ಬೋಗಸ್ ಬಿಲ್ ಸೃಷ್ಟಿಸಿದ್ದು, ಖದೀಮ ಕಂಟ್ರಾಕ್ಟರುಗಳ ಸಂತತಿಯನ್ನೇ ಹುಟ್ಟು ಹಾಕಿದ್ದು, ತನ್ನ ಕರ್ಮಕಾಂಡಗಳನ್ನು ಪ್ರಶ್ನಿಸಿದ ಪ್ರತಿಯೊಬ್ಬ ಪಾಲಿಕೆ ಕಮೀಷನರ್‌ರನ್ನೂ ಕೌನ್ಸಿಲರ್‌ಗಳನ್ನು ಛೂ ಬಿಟ್ಟು ಎತ್ತಂಗಡಿ ಮಾಡಿಸಿದ್ದು, ನೂರಾರು ಕೋಟಿ ಮೊತ್ತದ ಪಾಲಿಕೆ ಆಸ್ತಿಯನ್ನು ಜಾಯಿಂಟ್ ವೆಂಚರ್ ನೆಪದಲ್ಲಿ ಮಾರಿಕೊಂಡಿದ್ದು ಮತ್ತು ಪಾಲಿಕೆಯಲ್ಲಿ ತನ್ನದೇ ಭ್ರಷ್ಟ ಇಂಜಿನಿಯರ್ ಶಿಷ್ಯರ ಪಡೆಯನ್ನು ಹುಟ್ಟು ಹಾಕಿದ್ದೇ ಈ ರಾಮೇಗೌಡ.

ಪಾಲಿಕೆಯ ಸರ್ವರೋಗಕ್ಕೂ ಕಾರಣನಾದ ಈತನ ಜೊತೆ ಕೂತು ಮುಖ್ಯಮಂತ್ರಿ ಕುಮಾರಸ್ವಾಮಿ ರಸ್ತೆ ಸುಧಾರಣೆ ಬಗ್ಗೆ ಚರ್ಚಿಸುತ್ತಾರೆಂದರೆ ತಾಯಿ ಅಣ್ಣಮ್ಮ ಕೂಡ ಬೆಂಗಳೂರನ್ನು ಹೇಗೆ ಕಾಪಾಡಿಯಾಳು?

ಇಲ್ಲಿಗೆ ಐದು ವರ್ಷಗಳ ಹಿಂದಿನ ಮಾತು. ರಾಮೇಗೌಡ ಆಗ ಮೂವರು ಚೀಫ್ ಇಂಜಿನಿಯರ್‌ಗಳ ಪೈಕಿ ಒಬ್ಬನಾಗಿದ್ದ. ಆ ಹೊತ್ತಿಗಾಗಲೇ ಮುನ್ನೂರು ಕೋಟಿಯ ಬಾಂಡ್ ಕಾಮಗಾರಿಗಳ ಬಗ್ಗೆ ಎಲ್ಲೆಂದರಲ್ಲಿ ಚರ್ಚೆಯಾಗುತ್ತಿತ್ತು. ಒಮ್ಮೆ ಬಾಂಡ್ ಕಾಮಗಾರಿಯೇನಾದರೂ ಪೂರ್ಣಗೊಂಡರೆ ಬೆಂಗಳೂರಿನ ರಸ್ತೆಗಳಿಗೆ ಇನ್ನಾವತ್ತೂ ಡಾಂಬರ್ ಹಾಕಲೇ ಬೇಕಿಲ್ಲ ಎಂದು ಮೇಯರ್ ಹುಚ್ಚಪ್ಪ ಕಂಡಕಂಡಲ್ಲಿ ಭಾಷಣ ಕುಟ್ಟುತ್ತಿದ್ದ. ಮುನ್ನೂರು ಕೋಟಿಯೂ ಖರ್ಚಾಯಿತು. ಬಾಂಡ್ ಕಾಮಗಾರಿಗಳೆಲ್ಲ ಶಾಸ್ತ್ರೋಕ್ತವಾಗಿ ಪೂರ್ಣಗೊಂಡಾಗಿತ್ತು. ಆದರೆ ಟಾರ್ ಹಾಕಿದ ಆರೇ ತಿಂಗಳಿಗೆ ರಸ್ತೆಗಳೆಲ್ಲ ಕಿತ್ತು ಹೋದವು.

ಇಡೀ ಬಾಂಡ್ ಕರ್ಮಕಾಂಡದ ರೂವಾರಿಯೇ ಈ ರಾಮೇಗೌಡ. ಆ ಬಗ್ಗೆ ಒಂದೆರಡು ಪತ್ರಿಕೆಗಳಲ್ಲಿ ವರದಿಯಾಗಿದ್ದು ಬಿಟ್ಟರೆ ಬೆಂಗಳೂರಿನ ಯಾವೊಬ್ಬ ಕೌನ್ಸಿಲರ್ ಕೂಡ ಚಕಾರವೆತ್ತಲಿಲ್ಲ. ಆ ಹೊತ್ತಿಗೆ ಇಡೀ ಪಾಲಿಕೆಯ ಇಂಜಿನಿಯರ್‌ಗಳ ಪೈಕಿ ಆಯಕಟ್ಟಿನಲ್ಲಿದ್ದವರೆಲ್ಲ ಈ ರಾಮೇಗೌಡನ ಬಂಟರೆ. ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್‌ನಲ್ಲಿದ್ದ ಅನಂತಸ್ವಾಮಿ, ಚಂದ್ರಾ ಲೇಔಟ್ ವಿಭಾಗದ ಕೆ.ಟಿ. ನಾಗರಾಜ್, ವಿಶ್ವಬ್ಯಾಂಕ್ ಪ್ರಾಜೆಕ್ಟ್‌ನಲ್ಲಿದ್ದ ಸಿದ್ದೇಗೌಡ, ಶಿವಾಜಿನಗರದ ಪದ್ಮನಾಭಾಚಾರಿ, ಬನ್ನಿಪೇಟೆಯ ಮಂಜುನಾಥ ರೆಡ್ಡಿ, ಈಗ ಗೋವಿಂದರಾಜ ನಗರಕ್ಕೆ ಎಇಇ ಆಗಿರುವ ಎ.ಎಸ್. ರಮೇಶ, ಬಿ.ಟಿ. ಮೋಹನ ಕೃಷ್ಣ ಅಲ್ತಾಫ್ ಅಹ್ಮದ್, ನರಸಿಂಹ ಶಾಸ್ತ್ರಿಯಂಥ ಎಇಇಗಳು ಸೇರಿಕೊಂಡು ಇಡೀ ಬಾಂಡ್ ಯೋಜನೆಯ ದುಡ್ಡನ್ನು ಮುಂಡಾಮೋಚಿಬಿಟ್ಟರು.



ರಾಮೇಗೌಡ ಎಂಬ ತೋಳದೊಂದಿಗೆ ಮುಖ್ಯಮಂತ್ರಿ

ಬಾಂಡ್ ಕಾಮಗಾರಿಗಳ ಬಗ್ಗೆ ಲೋಕಾಯುಕ್ತ ಏನಾದರೂ ತಲೆ ಕೆಡಿಸಿಕೊಂಡಿದ್ದರೆ ರಾಮೇಗೌಡ ಅವತ್ತೇ ಕಂಬಿ ಎಣಿಸಬೇಕಿತ್ತು. ಬಾಂಡ್ ಹಗರಣದ ವಿರುದ್ಧ ಜನ ಲೋಕಾಯುಕ್ತ, ಅಂದಿನ ಮುಖ್ಯಮಂತ್ರಿ ಕೃಷ್ಣ ಪಾಲಿಕೆ ಕಮೀಷನರ್ ಹೀಗೆ ಪ್ರತಿಯೊಬ್ಬರಿಗೂ ದೂರು ಕೊಟ್ಟರು. ಶಿಕ್ಷೆಗೆ ಬದಲಾಗಿ 2000ನೇ ಇಸವಿಯ ಹೊತ್ತಿಗೆ ರಾಮೇಗೌಡ ಪಾಲಿಕೆಯ ಇಂಜಿನಿಯರ್ ಇನ್ ಚೀಫ್ ಹುದ್ದೆಗೇರಿದ್ದ!

ವಿಚಿತ್ರವೆಂದರೆ ಪಾಲಿಕೆಯಲ್ಲಿ ಅಂಥದ್ದೊಂದು ಹುದ್ದೆಯೇ ಇರಲಿಲ್ಲ, ಇಡೀ ಪಾಲಿಕೆಯ ಕಾಮಗಾರಿಗಳ ಮೇಲೆ ನಿಯಂತ್ರಣ ಸಾಧಿಸಲು ರಾಮೇಗೌಡ ಅಂಥಾದ್ದೊಂದು ಹುದ್ದೆ ಸೃಷ್ಟಿಸಿಕೊಂಡಿದ್ದ. ತನ್ನ ಕೊಳ್ಳೆಯ ವಿರುದ್ಧ ಕ್ರಮ ಕೈಗೊಂಡ ಕಮೀಷನರ್ ರವೀಂದ್ರರ ವಿರುದ್ಧ ಪಾಲಿಕೆಯ ಅಷ್ಟೂ ಮಂದಿ ಕೌನ್ಸಿಲರ್‌ಗಳನ್ನು ಎತ್ತಿ ಕಟ್ಟಿದ್ದ. ಮುಂದೆ ಶಂತನು ಕಾನ್ಸುಲ್ ಬಂದರು. ಆನಂತರ ಶ್ರೀನಿವಾಸಮೂರ್ತಿ ಪಾಲಿಕೆಯ ಕಮೀಷನರ್ ಆದರು. ಹೀಗೆ ಯಾರೆಲ್ಲ ಐಎಎಸ್‌ಗಳು ಕಮೀಷನರ್ ಆಗಿ ಬರುತ್ತಾರೋ ಅವರೆಲ್ಲರ ವಿರುದ್ಧ ಪಾಲಿಕೆಯ ಮೇಯರ್ ಆದಿಯಾಗಿ ಕೌನ್ಸಿಲರ್‌ಗಳೆಲ್ಲ ತಿರುಗಿಬಿದ್ದರೆಂದರೆ, ಅದರ ಹಿಂದಿರುತ್ತಿದ್ದದ್ದು ಇದೇ ರಾಮೇಗೌಡ.



ರಾಮೇಗೌಡನ ಮಗಳ ಮದುವೆಯಲ್ಲಿ ದೇವೇಗೌಡರು

ಕಾಲಾನುಕಾಲಕ್ಕೆ ಒಂದಲ್ಲಾ ಒಂದು ರಸ್ತೆ ಕಾಮಗಾರಿ ಯೋಜನೆಗಳನ್ನು ರೂಪಿಸುವುದು, ತನಗೆ ಬೇಕಾದ ಕಂಟ್ರಾಕ್ಟರುಗಳಿಗೇ ಪ್ಯಾಕೇಜ್ ಟೆಂಡರ್ ಹೋಗುವಂತೆ ನೋಡಿಕೊಳ್ಳುವುದು, ಮೇಯರ್-ಕೌನ್ಸಿಲರ್‌ಗಳಿಗೆಲ್ಲ ಮೂಳೆ ತಿನ್ನಿಸಿ ತಾನು ಖಂಡ ನುಂಗುವುದು ಈತನ ಚಾಳಿ. ಬಾಂಡ್ ಹಗರಣದ ನಂತರ ಫ್ಲೈಓವರ್‌ಗಳ ಮತ್ತೊಂದು ಪ್ರಾಜೆಕ್ಟ್ ರೂಪಿಸಿದ್ದ ಮೂಲ ಪುರುಷನೇ ಈತ.

ಬೆಂಗಳೂರು ಸಮುದ್ರ ತೀರದ ನಗರವಲ್ಲವಾದ್ದರಿಂದ ಬೇಕಾಬಿಟ್ಟಿ ಫ್ಲೈಓವರ್‌ಗಳ ಅಗತ್ಯವಿರಲಿಲ್ಲ. ರಸ್ತೆಗಳನ್ನು ಅಗಲ ಮಾಡಬಹುದಿತ್ತು. ಕೆಲ ಸರ್ಕಲ್‌ಗಳ ಹೊರತಾಗಿ ಬೇರೆಲ್ಲೂ ಫ್ಲೈಓವರ್‌ಗಳು ಬೇಕಿರಲಿಲ್ಲ. ರಸ್ತೆ ಅಗಲ ಮಾಡಿದರೆ ದುಡ್ಡೆಲ್ಲ ಪರಿಹಾರಾರ್ಥವಾಗಿ ಕಟ್ಟಡ ಮಾಲೀಕರ ಪಾಲಾಗುತ್ತದೆ. ಅದೇ ಫ್ಲೈಓವರ್ ಮಾಡಿಬಿಟ್ಟರೆ ಯಥೇಚ್ಛ ನುಂಗಬಹುದಲ್ಲ? ಇವತ್ತು ನ್ಯಾಷನಲ್ ಕಾಲೇಜ್ ವೃತ್ತ ಮತ್ತು ರಾಮಕೃಷ್ಣಾಶ್ರಮ ಸರ್ಕಲ್‌ಗಳಲ್ಲಿ ಅನಗತ್ಯ ಫ್ಲೈಓವರ್ ಯೋಜನೆಗಳಿವೆಯೆಂದರೆ ಅದರ ಹಿಂದಿರುವುದು ಇದೇ ರಾಮೇಗೌಡನ ತಲೆ.

2004ರ ಹೊತ್ತಿಗೆ ಕೇವಲ ಐದು ವರ್ಷಗಳಲ್ಲಿ ರಸ್ತೆಗೆಂದೇ ಪಾಲಿಕೆ ಸಾವಿರದ ಇನ್ನೂರು ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿತ್ತು. ಒಂದೇ ಒಂದು ರಸ್ತೆ ನೆಟ್ಟಗಿರಲಿಲ್ಲ. ತಾನು ದೇವೇಗೌಡರ ಸಂಬಂಧಿ ಎಂದುಕೊಂಡೇ ಬಹುಪಾಲು ಕೌನ್ಸಿಲರ್‌ಗಳನ್ನು ನಂಬಿಸಿದ್ದ ರಾಮೇಗೌಡ, ತನ್ನ ಮಗಳು ಶ್ರೇಯಸ್ ಎಂಬಾಕೆಯನ್ನು



ಯಾರಿಗೂ ಬೇಡವಾದ ಫ್ಲೈ ಓವರ್

ಐಪಿಎಸ್ ಅಧಿಕಾರಿ ಹಿತೇಂದ್ರರಿಗೆ ಕೊಟ್ಟು ನೆಂಟಸ್ತಿಕೆ ಮಾಡಿಕೊಂಡ. ಈ ಹಿತೇಂದ್ರ ನಕ್ಸಲೀಯರಿಂದ ಹತನಾದ ಆಂಧ್ರದ ಮಾಜಿ ಗೃಹ ಮಂತ್ರಿ ಮಾಧವರೆಡ್ಡಿಯ ಮಗ. ಬೆಂಗಳೂರಿನ ಮತ್ತೊಬ್ಬ ಖದೀಮ ಕಂಟ್ರಾಕ್ಟರ್ ಎಸ್. ಜೈರಾಮ್ ರೆಡ್ಡಿಯ ಹತ್ತಿರದ ಸಂಬಂಧಿ ಕೂಡ. ಮದುವೆಗೆಂದೇ ಹತ್ತು ಕೋಟಿ ಖರ್ಚಾಗಿತ್ತು. ಸಾಕ್ಷಾತ್ ದೇವೇಗೌಡರೇ ಬಂದು ವಧುವರರನ್ನು ಆಶೀರ್ವದಿಸಿದ್ದರು. ತನ್ನ ಮಗನಿಗೆ ವಿಜಯನಗರದಲ್ಲೊಂದು ಐಷಾರಾಮಿ ಡೆಂಟಲ್ ಕ್ಲಿನಿಕ್ ಕಟ್ಟಿಸಿಕೊಟ್ಟ ರಾಮೇಗೌಡ ಮಗಳು-ಅಳಿಯನಿಗೆಂದು ಜೆ.ಪಿ. ನಗರದಲ್ಲಿ ಮೂ... ಕೋಟಿಯ ಬಂಗಲೆ ಖರೀದಿಸಿ ಕೊಟ್ಟ. ಕೃಷ್ಣ ಮುಖ್ಯಮಂತ್ರಿ... ಯಾದದ್ದೇ ತಡ ಪ್ರೇಮಾ ಕೃಷ್ಣರ ಕಾಲಿಗೆ ಬಿದ್ದು... ಸದಾಶಿವನಗರದ ಹೊಚ್ಚಹೊಸ ಬಂಗಲೆಯೊಂದರ... ಕೀಲಿಕೈಯನ್ನೇ ಕಾಣಿಕೆಯಾಗಿ ಅರ್ಪಿಸಿದ್ದ.

ಧರ್ಮಸಿಂಗ್ ಮುಖ್ಯಮಂತ್ರಿಯಾಗುವ ಹೊತ್ತಿಗೆ... ಗೌಡನ ನೌಕರಿಯೇ ಮುಗಿದು ಹೋಗಿತ್ತು. ಆದರೇನಂತೆ... ಧರ್ಮಸಿಂಗರನ್ನೇ ರಾಮೇಗೌಡ ಖರೀದಿಸಿಬಿಟ್ಟ. 200...ರ ಮೇ 21ಕ್ಕೆ ರಾಮೇಗೌಡನ ನಿವೃತ್ತಿಯಾಗಿತ್ತು... ಧರ್ಮಸಿಂಗ್ ಜೂನ್ ಹದಿಮೂರನೇ ತಾರೀಖಿಗೆ ಆತನನ್ನು... ಗುತ್ತಿಗೆ ಆಧಾರದ ಮೇಲೆ ಮತ್ತೆ ಅದೇ ಹುದ್ದೆಯಲ್ಲಿ... ಮುಂದುವರೆಸುವಂತೆ ಆದೇಶ ಹೊರಡಿಸಿದ್ದರು!

ಹೇಳಿಕೇಳಿ ಇದು ಕಾಯ್ದೆಬಾಹಿರ ಆದೇಶವಾಗಿತ್ತು... ಅದಕ್ಕೆಂದು ಸಚಿವ ಸಂಪುಟದ ತೀರ್ಮಾನವಾಗಬೇಕಿತ್ತು... ರಾಜ್ಯಪಾಲರು ಅಂಕಿತ ಹಾಕಬೇಕಿತ್ತು. ಇದ್ಯಾವುದೂ ಇಲ್ಲದೇ... ಹುಚ್ಚಾಪಟ್ಟೆ ಆದೇಶ ಹೊರಡಿಸಿದ್ದನ್ನೇ ಬಂಡವಾಳ... ಮಾಡಿಕೊಂಡ ರಾಮೇಗೌಡ ಮತ್ತೆ ಕಾರ್ಪೋರೇಷನ್ನಿಗೆ... ವಕ್ಕರಿಸಿದ. ಇದರ ವಿರುದ್ಧ ಕೋರ್ಟ್ ಮೊರೆ ಹೊಕ್ಕ... ಮತ್ತೊಬ್ಬ ಚೀಫ್ ಇಂಜಿನಿಯರ್ ರಂಗಸ್ವಾಮಿಯವರ... ಮನೆ ಮೇಲೆ ಲೋಕಾಯುಕ್ತರನ್ನು ಛೂ ಬಿಟ್ಟು ದಾಳಿ... ಮಾಡಿಸಿದ್ದ.

ಅದು ಆತನ ತಾಕತ್ತು. ಹಾಗಂಥ ತಾನೆಸಗಿದ... ಪಾಪದಿಂದ ರಾಮೇಗೌಡ ಸಲೀಸಾಗಿ ಬಚಾವಾಗು...ವಂತಿರಲಿಲ್ಲ. ಬಸವನಗುಡಿಯ ಮಾಜಿ ಶಾಸಕ ಸುಬ್ಬಾರೆಡ್ಡಿ... ಕಳೆದ ಐದು ವರ್ಷದ ಬೆಂಗಳೂರಿನ ಅಷ್ಟೂ ರಸ್ತೆ... ಕಾಮಗಾರಿ ಹಗರಣಗಳನ್ನು ಪಟ್ಟಿ ಮಾಡಿ ಹೈಕೋರ್ಟಿನಲ್ಲಿ... ಕೇಸು ಹಾಕಿದ್ದರು. ಅದರ ತನಿಖೆಗೆಂದೇ ಹೈಕೋರ್ಟ್... ನಿವೃತ್ತ ಇಂಜಿನಿಯರ್ ಕ್ಯಾಪ್ಟನ್ ರಾಜಾರಾವ್‌ರನ್ನು ನೇಮಕ... ಮಾಡಿತ್ತು. ರಾಜಾರಾವ್ ಬೆಂಗಳೂರಿನ ಅಷ್ಟೂ ರಸ್ತೆ... ಕಾಮಗಾರಿಗಳನ್ನು ಪರಿಶೀಲಿಸಿ ಆರುನೂರು ಕೋಟಿ... ರೂಪಾಯಿಗಳಷ್ಟು ದುರುಪಯೋಗವನ್ನು ಪತ್ತೆ ಹಚ್ಚಿ... ಕೋರ್ಟಿಗೆ ವರದಿ ಕೊಟ್ಟರು. ತಮ್ಮ ವರದಿಯಲ್ಲಿ... ರಾಮೇಗೌಡನನ್ನೇ ಮುಖ್ಯ ಆರೋಪಿಯನ್ನಾಗಿಸಿದ್ದರು... ಕ್ಯಾಪ್ಟನ್ ರಾಜಾರಾವ್.

ಸಂಬಂಧಪಟ್ಟ ಎಲ್ಲ ಪಾಲಿಕೆ ಹೆಗ್ಗಣಗಳ ಮೇಲೂ... ಕ್ರಮ ಕೈಗೊಳ್ಳುವಂತೆ ಹೈಕೋರ್ಟ್ ಪಾಲಿಕೆ ಕಮೀಷನರ್‌ಗೆ... ಆದೇಶ ಕೊಟ್ಟಿತ್ತು. ಕಮೀಷನರ್ ಜ್ಯೋತಿರಾಮಲಿಂಗಮ್... ಮನಸ್ಸು ಮಾಡಿದ್ದರೆ ಇಡೀ ರಾಮೇಗೌಡನ ಪಟಾಲಮ್ಮನ್ನು... ಜೈಲಿಗೆ ಹಾಕಬಹುದಿತ್ತು. ದುರಂತವೆಂದರೆ ಮುಖ್ಯಮಂತ್ರಿ... ಕುಮಾರಸ್ವಾಮಿಯೇ ರಾಮೇಗೌಡನನ್ನು ಕರೆದು... ಬೆಂಗಳೂರಿನ ರಸ್ತೆ ಸುಧಾರಣೆ ಬಗ್ಗೆ ಸಲಹೆ ಕೇಳುತ್ತಿದ್ದಾರೆ! ಸಾಲದ್ದಕ್ಕೆ ಮತ್ತೆ ಐನೂರು ಕೋಟಿಯ ಪ್ಯಾಕೇಜ್ ಕೂಡ... ಘೋಷಿಸಿದ್ದಾರೆ.


ತೋಳದ ಕೈಗೆ ಕುರಿಮಂದೆ ಕೊಟ್ಟರೆ ಉಳಿಯುತ್ತಾ?

ಐನೂರು ಕೋಟಿ ಅಲ್ಲ ಸಾವಿರ ಕೋಟಿಯ ಪ್ಯಾಕೇಜ್... ಕೊಟ್ಟರೂ ಬೆಂಗಳೂರಿನ ರಸ್ತೆ ನೆಟ್ಟಗಾಗುತ್ತಾ?

–ರಾ.ಸೋ.

ಗರುಡಾಮಾಲ್ ಗೋಲ್‌ಮಾಲ್

ಕ್ಯಾಪ್ಟನ್ ರಾಜಾರಾವ್ ವರದಿಯ ಪ್ರಕಾರ ಬಾಂಡ್ ಹಗರಣವೊಂದೇ ಅಲ್ಲ, ಆನಂತರ ತಲಾ ಇಪ್ಪತ್ತು ಕೋಟಿಯ ಎರಡು, ನೂರಾ ಐದು ಕೋಟಿಯ ಒಂದು, ನೂರೈವತ್ತು ಕೋಟಿಯ ಇನ್ನೆರಡು ಪ್ಯಾಕೇಜ್ ಕಾಮಗಾರಿಗಳನ್ನೂ ಬೋಗಸ್ ಬಿಲ್ ಮಾಡಿ ದೋಚಿದ್ದಾರೆ. ವಿಶ್ವ ಬ್ಯಾಂಕ್ ಪ್ರಾಯೋಜಿತ 130 ಕೋಟಿಯ ಫುಟ್‌ಪಾತ್ ಕಾಮಗಾರಿ ಕೂಡ ಕಳಪೆಯೇ. ಬೆಂಗಳೂರಿನ ನೂರು ವಾರ್ಡುಗಳ 1052 ಕಿ.ಮೀ. ರಸ್ತೆ ಕಾಮಗಾರಿಯ ನೂರಾಮೂವತ್ತು ಕೋಟಿ, ಮತ್ತೆ 238. 27 ಕಿ.ಮೀ. ದುರಸ್ತಿಗೆಂದು 13.06 ಕೋಟಿಯ ಪ್ಯಾಕೇಜ್ ಕೂಡ ಕೊಳ್ಳೆಯಾಗಿದೆ.




ರಾಮೇಗೌಡ ಇದರ ಸೂತ್ರಧಾರಿಯಾದರೂ ಮೇಯರ್‌ಗಳಾದ ಪಿ.ಆರ್. ರಮೇಶ್, ನಾರಾಯಣ ಸ್ವಾಮಿ, ಚಂದ್ರಶೇಖರ್, ಹುಚ್ಚಪ್ಪ ಮುಂತಾದವರೂ ಪಾಲು ಪಡೆದಿದ್ದಾರೆ. ಅನೇಕ ಕೌನ್ಸಿಲರ್‌ಗಳೂ ಇದಕ್ಕೆ ಕೈಜೋಡಿಸಿದ್ದಾರೆ. ರಸ್ತೆಗಳ ಹೆಸರಲ್ಲಿ ದೋಚಿದ್ದು ಸಾಲದೆಂಬಂತೆ ರಾಮೇಗೌಡನ ಪಟಾಲಂ ನೂರು ಕೋಟಿಗೂ ಅಧಿಕ ಮೊತ್ತದ ಪಾಲಿಕೆ ಆಸ್ತಿಪಾಸ್ತಿಗಳನ್ನು ಜಾಯಿಂಟ್ ವೆಂಚರ್ ನೆಪದಲ್ಲಿ ಮಾರಿಕೊಂಡಿದೆ. ಈ ವಿಷಯದಲ್ಲಿ ರಾಮೇಗೌಡನ ಲೂಟಿಗೆ ನೆರವಾದವನು ಪಾಲಿಕೆಯ ಲೀಗಲ್ ಸೆಲ್‌ನ ಅಡಿಷನಲ್ ಲಾ ಆಫೀಸರ್ ಮಾದಯ್ಯ.

ಕೃಷ್ಣರ ಅಳಿಯ ಸಿದ್ಧಾರ್ಥನಿಗೆ ಗರುಡಾ ಮಾಲ್, ಮೆಜೆಸ್ಟಿಕ್‌ನ ಸಾಗರ್ ಟಾಕೀಸ್ ಎದುರಿಗೆ ಮಾರ್ವಾಡಿ ತೇಜರಾಜ್ ಗುಲೇಚಾನಿಗೆ ಕೆಂಪೇಗೌಡ ಮಹಾರಾಜಾ ಕಾಂಪ್ಲೆಕ್ಸ್, ಖದೀಮ ಕಂಟ್ರಾಕ್ಟರ್ ಚಂದ್ರಪ್ಪನಿಗೆ ಗುಪ್ತಾ ಮಾರ್ಕೆಟ್, ದೇವಿಗೆ ಶಿವಾಜಿ ಟಾಕೀಸ್ ಎದುರಿನ ಚಂದ್ರಿಕಾ ಕಾಂಪ್ಲೆಕ್ಸ್; ನೂರಾರು ಕೋಟಿ ಬೆಲೆ ಬಾಳುವ ಪಾಲಿಕೆ ಆಸ್ತಿಗಳನ್ನು ಜಾಯಿಂಟ್ ವೆಂಚರ್ ನೆಪದಲ್ಲಿ ಪ್ರಭಾವಿಗಳ ಬಾಯಿಗೆ ಹಾಕಿದ್ದರಲ್ಲಿ ರಾಮೇಗೌಡನ ಪಾತ್ರವೇ ದೊಡ್ಡದು.

ಇಂಥ ದರೋಡೆಕೋರನನ್ನು ಆತ ನಿವೃತ್ತಿಯಾದ ನಂತರವೂ ಕಾನೂನುಬಾಹಿರವಾಗಿ ಮತ್ತೆ ಪಾಲಿಕೆಗೇ ನೇಮಿಸುತ್ತಾರೆಂದರೆ, ಬೆಂಗಳೂರಿನ ನೂರು ಮಂದಿ ಕೌನ್ಸಿಲರ್‌ಗಳೂ, ಹನ್ನೆರಡು ಮಂದಿ ಶಾಸಕರೂ ಆ ಬಗ್ಗೆ ಗಪ್‌ಚುಪ್ ಆಗಿರುತ್ತಾರೆಂದರೆ ಬೆಂಗಳೂರಿಗಿನ್ನು ಭವಿಷ್ಯವೆಂತಿ?

ಇದೆಲ್ಲ ಗೊತ್ತಿದ್ದೂ ಮುಖ್ಯಮಂತ್ರಿ ಕುಮಾರಸ್ವಾಮಿ ರಾಮೇಗೌಡನಿಗೇ ಮಣೆ ಹಾಕುತ್ತಾರೆಂದರೆ ಏನರ್ಥ?

ಸಿದ್ಧು ಬಲಿಗೆ ವ್ಹಿಪ್



ಮಾರ್ಚ್ 28ರಂದು ನಡೆಯಲಿರುವ ರಾಜ್ಯಸಭಾ ಎಲೆಕ್ಷನ್‌ನಲ್ಲಿ ಯಾವ ಪಾರ್ಟಿಯ ಶಾಸಕರ ಓಟುಗಳು ಯಾವ ಅಭ್ಯರ್ಥಿಗೆಂದು ಈಗಾಗಲೇ ನಿರ್ಧರಿಸಲಾಗಿದೆ. ಅದರಂತೆ ಕಾಂಗ್ರೆಸ್ ಶಾಸಕರು ಮೊದಲು ತಮ್ಮ ಪಾರ್ಟಿಯ ಅಧಿಕೃತ ಅಭ್ಯರ್ಥಿ ರೆಹಮಾನ್ ಖಾನ್‌ರಿಗೆ ಗೆಲ್ಲುವಷ್ಟು ಓಟು ಹಾಕಿ ಉಳಿದ ಎಕ್ಸ್‌ಟ್ರಾ ಮತಗಳನ್ನು ಸಾಹಿತಿ ಯು.ಆರ್. ಅನಂತಮೂರ್ತಿಯವರಿಗೆ ಕೊಡಲಿದ್ದಾರೆ. ಇನ್ನು ಜೆಡಿಎಸ್‌ನವರು ರಾಜಶೇಖರಮೂರ್ತಿಗೂ ಬಿಜೆಪಿಗಳು ಹಣಪ್ಪನವರಿಗೆ ಓಟು ಹಾಕಲಿದ್ದು, ಉಳಿದಿರುವ ಎಕ್ಸ್‌ಟ್ರಾ ಮತಗಳನ್ನು ವ್ಯಾಪಾರಿ ರಾಜೀವ ಚಂದ್ರಶೇಖರನಿಗೆ ಮಾರಿ ಕೊಂಡಿದ್ದಾರೆ.

ಅನಂತಮೂರ್ತಿಯವರು ಕನ್ನಡಿಗ, ರಾಜೀವ ಚಂದ್ರಶೇಖರ ಹೊರಗಿನವನು ಎಂಬಿತ್ಯಾದಿ ವಿವಾದಗಳೂ, ರಾಜ್ಯಸಭಾ ಸ್ಥಾನವನ್ನು ಮಾರಾಟಕ್ಕಿಟ್ಟ ಪಕ್ಷಗಳ ಮಾನಗೇಡಿ ಕೆಲಸಗಳೂ ಈಗಾಗಲೇ ಚರ್ಚೆಗೊಳಗಾಗಿವೆ. ಆದರೆ ಇದೇ ಎಲೆಕ್ಷನ್ ನೆಪ ಬಳಸಿಕೊಂಡು ಇನ್ನೊಂದು ಬ್ರಹ್ಮಾಸ್ತ್ರ ಬಿಡಲು ರೆಡಿಯಾಗಿದ್ದಾರೆ ದೇವೇಗೌಡ ಹಾಗೂ ಕುಮಾರಸ್ವಾಮಿ.

ಅದು ವ್ಹಿಪ್ ಬ್ರಹ್ಮಾಸ್ತ್ರ!

ಜೆಡಿಎಸ್ ಅಭ್ಯರ್ಥಿ ರಾಜಶೇಖರಮೂರ್ತಿ ಹಾಗೂ ದುಡ್ಡಿಗಾಗಿ ಬೆಂಬಲಿಸುತ್ತಿರುವ ರಾಜೀವ್ ಚಂದ್ರಶೇಖರನಿಗೆ ತಮ್ಮ ಪಾರ್ಟಿಯ ಎಲ್ಲಾ 58 ಶಾಸಕರು ಮತ ಹಾಕಲೇಬೇಕೆಂಬ ನಿರ್ಬಂಧ ವಿಧಿಸುವ ಈ ವ್ಹಿಪ್ ಜಾರಿಯ ಉದ್ದೇಶದ ಹಿಂದೆ ಅಪ್ಪ-ಮಕ್ಕಳ ಲೆಕ್ಕಾಚಾರಗಳು ಬೇರೆಯೇ ಇರುವಂತಿದೆ.

ಅದು ಸಿದ್ಧರಾಮಯ್ಯ ಮತ್ತವರ ಬಣದ ಒಟ್ಟು 10 ಶಾಸಕರನ್ನು ವಿಧಾನಸೌಧದಿಂದ ಉಚ್ಚಾಟಿಸುವ ಪಿತೂರಿಯಲ್ಲದೇ ಬೇರೇನೂ ಅಲ್ಲ. ಏಕೆಂದರೆ ಸಿದ್ಧರಾಮಯ್ಯ ಈಗಾಗಲೇ ತಾವು ಅನಂತಮೂರ್ತಿಯವರಿಗೆ ಮತ ಹಾಕುವುದಾಗಿ ಘೋಷಿಸಿಬಿಟ್ಟಿದ್ದಾರೆ.

ಇನ್ನೂ ಬಿ.ಆರ್. ಪಾಟೀಲರೇ ಅನಂತಮೂರ್ತಿಗೆ ಒಪ್ಪಿಸಿ ನಾಮಪತ್ರ ಹಾಕಿಸಿದವರು. ನಾಮಪತ್ರ ಅನುಮೋದನೆಗೆ ಅವರೂ ಸಹಿ ಮಾಡಿದ್ದಾರೆ.

ಇನ್ನು ಡಾ. ಎಚ್.ಸಿ. ಮಹಾದೇವಪ್ಪ, ಜಾರಕೀಹೊಳಿ ಮುಂತಾದವರೆಲ್ಲಾ ಸಿದ್ಧರಾಮಯ್ಯ ಹೇಳಿದಂತೆ ಕೇಳುತ್ತಾರೆಯೇ ಹೊರತು ದೇವೇಗೌಡರ ವ್ಹಿಪ್‌ಗೆ ಮರ್ಯಾದೆ ಕೊಡುವವರಲ್ಲ.

ಈ ಅವಕಾಶವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಸಿದ್ದು ಬಣದವರನ್ನು ಶಾಸನಸಭೆಯಿಂದ ಅನರ್ಹಗೊಳಿಸುವ ಉದ್ದೇಶದಿಂದಲೇ ಜೆಡಿಎಸ್ ಈಗ ವ್ಹಿಪ್ ಜಾರಿ ಮಾಡಲು ಹೊರಟಿದೆ.


ಕುಮಾರಸ್ವಾಮಿಗೆ ಸಿದ್ಧು ಭೀತಿ

ಜೆಡಿಎಸ್‌ಗೆ ಈಗ ವ್ಹಿಪ್ ಜಾರಿ ಮಾಡುವಂತ ಅನಿವಾರ್ಯ ಸಂದರ್ಭ ಒದಗಿತ್ತೇ ಎಂದು ಪರಿಶೀಲಿಸಿ ನೋಡಿದರೆ ಅಂತಾದ್ದೇನೂ ಕಾಣುವುದಿಲ್ಲ. ಸರ್ಕಾರದ ಅಳಿವು-ಉಳಿವು ನಿರ್ಧರಿಸುವಂತ ನಿರ್ಣಾಯಕ ಚುನಾವಣೆಯೂ ಇದಲ್ಲ. ಅಷ್ಟೇ ಏಕೆ ಕೋ-ಜಾ ಸರ್ಕಾರ ಫೆಬ್ರವರಿ 8 ರಂದು ವಿಶ್ವಾಸಮತ ಕೋರುವಾಗಲೂ ಜೆಡಿಎಸ್ ತನ್ನ ಶಾಸಕರಿಗೆ ವ್ಹಿಪ್ ನೀಡಿರಲಿಲ್ಲ. ಹೀಗಿರುವಾಗ ಈಗ್ಯಾಕೆ ವ್ಹಿಪ್ ನೀಡಲಾಗುತ್ತಿದೆ?

ಸಿದ್ಧರಾಮಯ್ಯ ಬಣದ ಬಹುಪಾಲು ಶಾಸಕರು ಈ ವ್ಹಿಪ್ ಉಲ್ಲಂಘಿಸುವುದು ಗ್ಯಾರಂಟಿಯಾದ್ದರಿಂದ ಅಷ್ಟೆ. ಅದೇ ಆರೋಪದ ಮೇಲೆ ಅವರನ್ನೆಲ್ಲಾ ಶಾಸಕತ್ವದಿಂದ ಅನರ್ಹಗೊಳಿಸಿದರೂ ಕೋ-ಜಾ ಸರ್ಕಾರಕ್ಕೆ ಸರಳ ಬಹುಮತ ಉಳಿದೇ ಇರುತ್ತದೆ. ಆದರೆ ಇದರಿಂದಾಗುವ ಅನುಕೂಲವೇನೆಂದರೆ ಸಿದ್ಧರಾಮಯ್ಯ ಮತ್ತವರ ಶಾಸಕರಿಂದ ಶಾಸನ ಸಭೆಯಲ್ಲಿ ಪ್ರತಿನಿತ್ಯ ಎದುರಿಸಬೇಕಾಗಿ ಬರುವ ಅಡ್ಡಿ ಆತಂಕ, ಪ್ರತಿಭಟನೆಗಳು, ಕಿರುಕುಳಗಳಿಂದ ಶಾಶ್ವತವಾಗಿ ಪಾರಾಗಬಹುದೆಂಬುದೇ ಕುಮಾರಸ್ವಾಮಿಯ ಲೆಕ್ಕಾಚಾರ. ಒಂದೇ ಪಾರ್ಟಿಯೊಳಗೆ ಒಂದು ಗುಂಪು ಭಿನ್ನಮತೀಯರಾಗಿ ಮುಂದುವರೆದರೆ, ಅಂತಹವರಿಗೆ ಶಾಸಕರೆಂಬ ಮಾನ್ಯತೆಯೂ ಇದ್ದಾಗ ಅವರು ಮಗ್ಗುಲ ಮುಳ್ಳಿನಷ್ಟೇ ಅಪಾಯಕಾರಿ ಎಂಬುದನ್ನು ಧೃತರಾಷ್ಟ್ರ ದೇವೇಗೌಡರಿಗೆ ಯಾರೂ ಹೇಳಿಕೊಡಬೇಕಾಗಿಲ್ಲ. ಶಾಸಕತ್ವದ ಬಲ ಹೊಂದಿರುವ ಸಿದ್ಧರಾಮಯ್ಯ ಮತ್ತವರ ಜೊತೆಗಿರುವ ಶಾಸಕರನ್ನು ಇನ್ನಷ್ಟು ನಿಶ್ಶಕ್ತಗೊಳಿಸಲು ಗೌಡರಿಗೆ ಇದಕ್ಕಿಂತಾ ಸುವರ್ಣಾವಕಾಶ ಮುಂದೆ ಸಿಗಲಾರದು.

ನಾಳೆ ಸಿದ್ಧರಾಮಯ್ಯ ಪಾರ್ಟಿ ವ್ಹಿಪ್ ಮೀರಿ ಅನಂತಮೂರ್ತಿಗೆ ಓಟು ಹಾಕಿದಲ್ಲಿ ಶಾಸಕತ್ವ ಕಳೆದುಕೊಂಡರೆ ಅವರಿಗುಳಿಯುವುದು ಬೀದಿ ಹೋರಾಟ ಮತ್ತು ಅಲ್ಲಿ ಉಳಿಯುವುದು- ಬೆಳೆಯುವುದು ಅವರ ಶಕ್ತಿ-ಸಾಮರ್ಥ್ಯಕ್ಕೆ ಬಿಟ್ಟ ವಿಚಾರ.

ಬಹುಶಃ ಇದನ್ನೆಲ್ಲಾ ಲೆಕ್ಕಾ ಹಾಕಿಯೇ ದೇವೇಗೌಡ ಹಾಗೂ ಕುಮಾರಸ್ವಾಮಿ ವ್ಹಿಪ್ ನೀಡುವ ನಿರ್ಧಾರಕ್ಕೆ ಬಂದಿದ್ದಾರೆ.



ಸಿದ್ಧರಾಮಯ್ಯ ಆ ವ್ಹಿಪ್ ಅನ್ನು ಉಲ್ಲಂಘಿಸಲೇಬೇಕಾದ ಸಂದರ್ಭದಲ್ಲಿರುವುದರಿಂದ ವಿಧಾನಸೌಧದಲ್ಲಿ ತಮ್ಮ ಮುಂದಿನ ದಾರಿ ಸಲೀಸೆಂಬುದೇ ಗೌಡರ ಕಲ್ಪನೆ.

ಈಗ ಸಿದ್ಧರಾಮಯ್ಯ ಈ ಸವಾಲನ್ನು ಹೇಗೆ ಎದುರಿಸುತ್ತಾರೆಂಬುದೂ ಮುಖ್ಯ. ಕಳೆದ ವಾರದ ವಿಧಾನಸಭಾ ಬಜೆಟ್ ಅಧಿವೇಶನದಲ್ಲಿ ಸಿದ್ದು ಬಣದ ಶಾಸಕರು ಹಾಗೂ ಜಿ.ಟಿ. ದೇವೇಗೌಡ ಮತ್ತಿತರರು ಕೈ ಕೈ ಮಿಲಾಯಿಸುವಷ್ಟರ ಮಟ್ಟಿಗೆ ಜಗಳವಾಡಿದ್ದನ್ನು ರಾಜ್ಯದ ಜನ ನೋಡಿದ್ದಾರೆ. ಸಿದ್ಧರಾಮಯ್ಯ ಮುಂದೆಯೂ ಸದನದಲ್ಲಿದ್ದರೆ ಕುಮಾರಸ್ವಾಮಿಯ ನಿದ್ದೆ ಗೆಡಿಸುವುದಂತೂ ಖಚಿತ. ಸದನದಲ್ಲಿದ್ದರೆ ಸಿದ್ಧರಾಮಯ್ಯ ಆಡುವ ಪ್ರತಿ ಮಾತು, ನಿಲುವುಗಳೂ ಜನರ ಗಮನಕ್ಕೆ ಬರುತ್ತವೆ. ಪತ್ರಿಕೆ-ಟಿವಿಗಳಲ್ಲಿ ಪ್ರಚಾರ ಪಡೆದುಕೊಳ್ಳುತ್ತಿರುತ್ತವೆ. ಬಹುಶಃ 64 ಶಾಸಕ ಬಲದ ಅಧಿಕೃತ ವಿರೋಧಿ ಪಕ್ಷವಾದ ಕಾಂಗ್ರೆಸ್‌ಗೆ ಸಿಕ್ಕಷ್ಟೇ ಆದ್ಯತೆ ಆಡಳಿತ ಪಕ್ಷದ 10 ಭಿನ್ನಮತೀಯ ಶಾಸಕರ ನಾಯಕ ಸಿದ್ಧರಾಮಯ್ಯನವರಿಗೂ ಸಿಗುತ್ತದೆ. ಸಿದ್ಧರಾಮಯ್ಯ ಒಟ್ಟಾರೆ ಜನರ ಮನಸ್ಸಿನಲ್ಲಿ ಉಳಿದೇ ಬಿಡುತ್ತಾರೆ. ನಾಳೆ ಬಹುಶಃ ಕುಮಾರಸ್ವಾಮಿಯ ವಿರೋಧಿಗಳಿಗೆ, ಅತೃಪ್ತ ಪಾರ್ಟಿ ಕಾರ್ಯಕರ್ತರುಗಳಿಗೆ ಸಿದ್ಧರಾಮಯ್ಯನವರೆ ಆಶ್ರಯತಾಣವಾಗಿ ಬಿಟ್ಟರೆ?

ಈ ಎಲ್ಲಾ ಸಾಧ್ಯತೆಗಳನ್ನು ಯೋಚಿಸಿಯೇ ಕೋ-ಜಾ ಸರ್ಕಾರದ ಅಸಲೀ ಸೂತ್ರಧಾರಿಗಳಾದ ದೇವೇಗೌಡ-ಕುಮಾರಸ್ವಾಮಿ ಈಗ ಪಾರ್ಟಿ ಶಾಸಕರಿಗೆ ವ್ಹಿಪ್ ನೀಡಲು ಹೊರಟಿದ್ದಾರೆ.

ಶಾಸಕತ್ವ ಹೋದರೇನಂತೆ ಮುಂದೆ ಹೊಸ ಸರ್ಕಾರವನ್ನೇ ರಚಿಸುತ್ತೇವೆಂಬ ಛಲ ಸಿದ್ಧರಾಮಯ್ಯನವರಲ್ಲಿ ಈಗಲಾದರೂ ಬರಬಹುದಾ?

-ಈಶ

ಜೆಡಿಎಸ್‌ನ ಜೋಕುಮಾರಸ್ವಾಮಿ!

ಗಣೇಶ ಚೌತಿಯ ನಂತರ ಜೋಕುಮಾರನ ಹುಣ್ಣಿಮೆ... ಗಣಪತಿಗೆ ಕಡುಬು ತಿನ್ನಿಸಿ ಪಟ್ಟಾಭಿಷೇಕ ಮಾಡಿದ ನಂತರ ಜೋಗಮ್ಮನ ತಲೆಯ ಮೇಲೆ ಬಿದಿರಿನ ಬುಟ್ಟಿಯಲ್ಲಿ ಕೂತು ಬರುವ ಜೋಕುಮಾರನ ಬಾಯಿಗೆ ಬೆಣ್ಣೆ ನೈವೇದ್ಯ! ಇದು ಮುಂಬೈ ಕರ್ನಾಟಕದ ಜಾನಪದ ಹಬ್ಬ....

ಇದೀಗ ಜಾತ್ಯತೀತ ಜನತಾದಳದ ರಾಜ್ಯಾಧ್ಯಕ್ಷತೆಗೂ ಒಬ್ಬ ಜೋಕುಮಾರಸ್ವಾಮಿಯನ್ನು ಪ್ರತಿಷ್ಠಾಪಿಸಿದ್ದಾರೆ ದಳಾಧಿಪತಿ ದೇವೇಗೌಡರು.

ಎರಡು ತಿಂಗಳುದ್ದಕ್ಕೂ ಸ್ವಯಂಶಿಕ್ಷೆ ವಿಧಿಸಿಕೊಂಡು ಚಿಕ್ಕುಲರಿಸಮ್ಮಿಗೆ ಎಳ್ಳು ನೀರು ಬಿಟ್ಟ ತಮ್ಮ ಪುತ್ರ ಕುಮಾರಸ್ವಾಮಿಯ ಸಿಂಹಾಸನಾರೋಹಣವನ್ನು ಬಹಿರಂಗವಾಗಿ ಖಂಡಿಸುತ್ತ, ಅಂತರಂಗದಲ್ಲಿ ಸಂಭ್ರಮಿಸುತ್ತ ಬಂದ ಗೌಡರಿಗೆ ಏಕಾಏಕಿ ಜ್ಞಾನೋದಯ.....

ತಾವೇ ಉಚ್ಚಾಟಿಸಿದ್ದ ತಿಪ್ಪಣ್ಣ ಎಂಬ ಡಮ್ಮಿ ರಾಜ್ಯಾಧ್ಯಕ್ಷರ ಖಾಲಿಯಾದ ಪದವಿಯಲ್ಲಿ ಮಾಜಿ ಉಪಮುಖ್ಯಮಂತ್ರಿ ಎಂ.ಪಿ. ಪ್ರಕಾಶರನ್ನ ವಿದ್ಯುಕ್ತವಾಗಿ ಕೂಡಿಸಿ ಅವರ ಕೈಯಲ್ಲೊಂದು ಹೊರೆಹೊತ್ತ ಮಹಿಳೆಯ ನಿಶಾನೆಯುಳ್ಳ ಹಸಿರು ಬಾವುಟವನ್ನು ಕೊಟ್ಟು ಆಶೀರ್ವದಿಸಿಬಿಟ್ಟರು.

ಇತ್ತೀಚೆಗೆ ಪ್ರತಿ ಆರು ತಿಂಗಳಿಗೊಂದು ಸಾರಿ ಬಯಸಿದ ಭಾಗ್ಯದ ಬದಲು ಬಯಸದೆಯೇ ಬಂದ ಭಾಗ್ಯಲಕ್ಷ್ಮಿಯನ್ನೇ ಪಡೆಯುತ್ತ ಬಂದಿರುವ ಹಿರಿಯ ನಾಯಕ, ಸಮಾಜವಾದಿ ಚಿಂತಕ, ಬುದ್ಧಿಜೀವಿ ರಾಜಕಾರಣಿ, ಸಂಕೋಚ ಪ್ರವೃತ್ತಿಯ ಸಂಭಾವಿತ ಮುಖಂಡ ಪ್ರಕಾಶರಿಗೆ ಮತ್ತೊಮ್ಮೆ ಬಲವಂತದ ಶರಣಾಗತಿಯ ಸಡಗರ... ಶರಣ ಪ್ರಕಾಶರೀಗ ಶರಣಾಗತಿ ಪ್ರಕಾಶ್!


"ಹೆಬ್ಬೆಟ್ಟೊತ್ತುವ ಪ್ರೆಸಿಡೆಂಟ್ ಅಲ್ಲ"

ಅಂದು ಜನವರಿ 28ರ ವಿಶ್ವಾಸಮತ ಯಾಚನೆಯ ಚರ್ಚೆಯಲ್ಲಿ ಮಧ್ಯೆ ಅಸೆಂಬ್ಲಿಯಿಂದ ದೇವೇಗೌಡರ ಬಳಿ ಧಾವಿಸಿದ್ದ ಗಳಿಗೆಯಲ್ಲೇ ಅತ್ತ ಹಠಾತ್ತನೇ ಸ್ಪೀಕರ್ ಕೃಷ್ಣ ನೀಡಿದ ರೂಲಿಂಗ್‌ಗೆ ಬಲಿಪಶುವಾದ ಪ್ರಕಾಶ್ ಸಾಚಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕನ ಸ್ಥಾನದಿಂದ ಕೆಳಗಿಳಿಯಲ್ಪಟ್ಟಿದ್ದರು....

ಕುಮಾರಸ್ವಾಮಿಯ ಪರ ಕ್ರೋಢೀಕರಿಸಲ್ಪಟ್ಟ ಶಾಸಕ ಬಲದಿಂದಾಗಿ ಅಂದಿನ ಉಪಮುಖ್ಯಮಂತ್ರಿ ಪ್ರಕಾಶ್ ಹಾಗೂ ಮತ್ತೊಬ್ಬ ಹಿರಿಯ ಸಚಿವ ಪಿ.ಜಿ.ಆರ್. ಸಿಂಧ್ಯಾ ದಿಢೀರನೇ ಜೆಡಿಎಸ್ ದರ್ಬಾರಿನಲ್ಲಿ ನಿರಾಶ್ರಿತರಾಗಿಬಿಟ್ಟರು...

ಇದನ್ನು ಮುಂದೆ ಫೆ.8ರಂದು ನಡೆದ ಮತ್ತೊಂದು ವಿಶ್ವಾಸಮತ ಚರ್ಚೆಯಲ್ಲಿ (ಕುಮಾರಣ್ಣನ ಪರ) ಸಿಂಧ್ಯಾ ಏಕಾಂಗಿಯಾಗಿ ನಿಂತು ಪ್ರತಿಭಟಿಸಿದರು...ಆದರೆ ಪ್ರಕಾಶ್ ತಮ್ಮ ಅಮೋಘ ಭಾಷಣದಲ್ಲಿ ನೈತಿಕ ಪ್ರತಿಭಟನೆಯನ್ನು ಮಾತ್ರ ದಾಖಲಿಸಿ ಪಕ್ಷಾಂತರ ನಿಷೇಧ ಮಸೂದೆಯ ದಿಗ್ಬಂಧನದ ಕಟ್ಟುಪಾಡಿನಿಂದಾಗಿ ಕುಮಾರಣ್ಣನ ನಾಯಕತ್ವದ ಪರ ಮತ ಚಲಾಯಿಸಿದರು.

ಸಿಂಧ್ಯಾರ ಬಂಡಾಯ ಅವರ ರಾಜಕೀಯ ಒಂಟಿತನವನ್ನು ಧೃಡೀಕರಿಸಿಬಿಟ್ಟಿತು. ಪ್ರಕಾಶರ ಅಸಹಾಯಕ ರಾಜನಿಷ್ಠೆ ಅವರನ್ನೀಗ ಜೆಡಿಎಸ್ ಪಾರ್ಟಿಯ ರಾಜ್ಯಾಧ್ಯಕ್ಷತೆಗೇರಿಸಿಬಿಟ್ಟಿದೆ.



ಪಾರ್ಟಿ ಪ್ರೆಸಿಡೆಂಟರಾಗಿ ಸಹಕರಿಸಿ ಎಂದು ದೇವೇಗೌಡರು ಪ್ರಸ್ತಾವನೆ ಇಟ್ಟಾಕ್ಷಣವೇ ಪ್ರಕಾಶರು ಕಡೆಗೂ ಧೈರ್ಯ ತಂದುಕೊಂಡು "ನಾನು ಹೆಬ್ಬೆಟ್ಟೊತ್ತುವ ಪ್ರೆಸಿಡೆಂಟ್ ಆಗಲಾರೆ" ಎಂದು ಶರತ್ತು ವಿಧಿಸಿದರು... "ಸರಕಾರದ ಕೆಲಸಗಳಲ್ಲಿ ನಾನು ಹಸ್ತಕ್ಷೇಪ ಮಾಡೋದಿಲ್ಲ, ಆದರೆ ಪಾರ್ಟಿ ಬಲವರ್ಧನೆಯ ವಿಚಾರದಲ್ಲಿ ನನ್ನ ಅಭಿಪ್ರಾಯಕ್ಕೆ ಗೌರವ ದೊರೆಯಲೇಬೇಕು.... ಎಮ್ಮೆಲ್ಸಿಗಳ ನಾಮಕರಣದಲ್ಲಿ ನಿಗಮ-ಮಂಡಲಿ ಅಧ್ಯಕ್ಷರುಗಳ ನೇಮಕಾತಿಯಲ್ಲಿ ಪಾರ್ಟಿ ಪದಾಧಿಕಾರಿಗಳ ಆಯ್ಕೆಯಲ್ಲಿ ನನ್ನ ಮಾತಿಗೂ ಬೆಲೆಯಿರಬೇಕು.." ಎಂಬಿತ್ಯಾದಿ ಕಂಡೀಶನ್‌ಗಳನ್ನು ಮುಂದಿಸಿದರು...

ಪಾರ್ಟಿಯಲ್ಲಿ ಯಾವ ಹುದ್ದೆಯಾದರೇನೂ ತಮ್ಮ ಮಗನ ಸರಕಾರದಲ್ಲಿ ಈ ಸೀನಿಯರ್ ಲೀಡರುಗಳ್ಯಾರೂ ಪ್ರವೇಶ ಮಾಡದಿದ್ದರಾಯಿತು ಎಂಬ ಲೆಕ್ಕಾಚಾರವನ್ನೇ ಅವಲಂಬಿಸಿದ್ದ ದೇವೇಗೌಡರಿಗೆ ಪ್ರಕಾಶರ ಅಧ್ಯಕ್ಷ ಪದಗ್ರಹಣ ಅಷ್ಟರ ಮಟ್ಟಿಗೆ ನೆಮ್ಮದಿಯ ನಿಟ್ಟುಸಿರು ನೀಡಿತು... ಪ್ರಕಾಶರ ಆರಂಭಿಕ ಕಂಡೀಶನ್‌ಗಳಿಗೆ ತಥಾಸ್ತು ಎಂದುಬಿಟ್ಟರು.

ನಾನ್ಯಾವತ್ತೂ 58 ಪರ್ಸೆಂಟ್ ಮಾರ್ಕ್ಸ್ ಪಡೆಯೋ ವಿದ್ಯಾರ್ಥಿ

ಕಳೆದೆರಡು ತಿಂಗಳಲ್ಲಿ ಶಾಸಕಾಂಗವಿಲ್ಲದ ಅಂಗಪಕ್ಷ, ಅಂಗಪಕ್ಷವಿಲ್ಲದ ಶಾಸಕಾಂಗ ಎಂಬ ಅಭಾಸಕರ ಸ್ಥಿತಿಯಿದ್ದಾಗ ಮಂತ್ರಿ ಮಂಡಲ ಸೇರುವಂತೆ ಪ್ರಕಾಶರನ್ನು ನಾಲ್ಕೈದು ಬಾರಿ ಸ್ವತಃ ಕುಮಾರಸ್ವಾಮಿಯೇ ಆಹ್ವಾನಿಸಿದರು... ಅವರ ಮಿತ್ರರು, ಹಿತೈಷಿಗಳು ಸಹ ಅದೇ ಧಾಟಿಯಲ್ಲಿ ಮನವೊಲಿಕೆ ಯತ್ನ ಮಾಡಿದರು.. ಪ್ರಕಾಶರು ಮೊದಮೊದಲು "ದೇವೇಗೌಡರ ಸಮ್ಮತಿಯಿಲ್ಲದೆ ಮಂತ್ರಿಯಾಗುವ ಪ್ರಶ್ನೆಯೇ ಏಳದು" ಎಂದು ತಾತ್ವಿಕ ನಿಲುವು ತಾಳಿದರು..

ಕ್ರಮೇಣ "ಹೋಮ್ ಮಿನಿಸ್ಟರ್ ರಾದ್ರೆ ಒಪ್ಪಿಕೊಂಡುಬಿಡಿ" ಎಂಬ ಸಲಹೆಗಳು ಸ್ನೇಹಿತರಿಂದ ಬಂದಾಗ "ಆಗಲಿ ನೋಡೋಣವಂತೆ" ಎಂಬ ಸಿಗ್ನಲ್ ರವಾನಿಸಿದರು. ತದನಂತರ ತಂದೆ-ಮಗನ ಆಸ್ಥಾನದಿಂದ ಮಂತ್ರಿ ಪದವಿಯ ಪ್ರಸ್ತಾವನೇ ನಿಂತು ಹೋಯಿತು. ಒಮ್ಮೆಲೇ ಪಾರ್ಟಿ ಅಧ್ಯಕ್ಷರಾಗಿ ಎಂಬ ಆದೇಶವನ್ನೇ ಆಹ್ವಾನ ಎಂದು ಭಾವಿಸಿ ಒಪ್ಪಿಕೊಳ್ಳುವಂತಾಯಿತು.

ಪ್ರಕಾಶರಿಂದ ಸೈದ್ಧಾಂತಿಕ ಪ್ರತಿಭಟನೆಯನ್ನು ನಿರೀಕ್ಷಿಸಿದವರಿಗೆ, ರಾಜಕೀಯ ಬಂಡಾಯವನ್ನು ಅಪೇಕ್ಷಿಸಿದ್ದವರಿಗೆ, ಅವರ ಪ್ರತಿಕ್ರಿಯೆ ಒಂದೇ ತೆರನಾಗಿತ್ತು.

"ನೋಡಿ, ನನ್ನಿಂದಲೇ ಎಲ್ಲವನ್ನೂ ನೀವುಗಳು ಯಾತಕ್ಕೆ ನಿರೀಕ್ಷೆ ಮಾಡ್ತೀರಿ? ನನ್ನಲ್ಲಿ ಕೊಲ್ಲುವ ಸ್ಪೈರ್ಯ (ಕಿಲ್ಲರ್ ಇನ್‌ಸ್ಟಿಂಕ್ಟ್!) ಇಲ್ಲ. ನಾನ್ಯಾವತ್ತಿದ್ರೂ 58 ಪರ್ಸೆಂಟ್ ಮಾರ್ಕ್ಸ್ ಪಡೆಯೋ ವಿದ್ಯಾರ್ಥಿ. ನನ್ನಿಂದ ನೀವೆಲ್ಲ ಫಸ್ಟ್ ಕ್ಲಾಸು, ಡಿಸ್ಟಿಂಕ್ಷನ್ ಅಂತೆಲ್ಲ ನಿರೀಕ್ಷಿಸಲೇಬೇಡಿ" ಎಂಬ ವಿವರಣೆ ಪ್ರಕಾಶರ ವಿನಯವಂತಿಕೆಯೂ ಆಗಿತ್ತು, ಅವರ ಬಲಹೀನತೆಯ ಸಂಕೇತದಂತೆಯೂ ಇತ್ತು...

ಪವರ್‌ಗೆ ಕುಮಾರಸ್ವಾಮಿ! ಪವರ್‌ಯಿಲ್ಲದ ಪಾರ್ಟಿಗೆ ಜೋಕುಮಾರಸ್ವಾಮಿ!!

ಕುಮಾರಣ್ಣನ ಬಂಡಾಯ, ದೇವೇಗೌಡರ ಅರ್ಭಟಭರಿತ ಆಕ್ರೋಶ... ಇವೆಲ್ಲವನ್ನು ಡ್ರಾಮಾ, ಮೇಲೋಡ್ರಾಮಾ ಎಂದು ಯಾರು ಎಷ್ಟೇ ತೀಕ್ಷ್ಣವಾಗಿ ಗೇಲಿ ಮಾಡಿದರೂ ಇವತ್ತು ಮುಖ್ಯಮಂತ್ರಿ ಕುಮಾರ ಸ್ವಾಮಿಯೇ ರಾಜ್ಯದ ಅಧಿಕಾರ-ರಾಜಕಾರಣದ ಕೇಂದ್ರ ಬಿಂದು. ಅಭಿವೃದ್ಧಿ ರಂಗ ಮೈತ್ರಿಕೂಟದ ಅನಭಿಷಕ್ತ ಸಾಮ್ರಾಟ.....

ಅಧಿಕಾರವಿದ್ದಲ್ಲೇ ಪಕ್ಷ, ಪದವಿಯಿದ್ದಲ್ಲೇ ಪಾರ್ಟಿ ಎಂಬ ರಾಜಕೀಯ ಸಂಸ್ಕೃತಿಯಲ್ಲಿ ಕುಮಾರಣ್ಣನ ಪವರ್ ಪಾಲಿಟಿಕ್ಸ್ ಜೆಡಿಎಸ್‌ನ ಪ್ರಣಾಳಿಕೆ... ದೇವೇಗೌಡರ ಚಾಣಾಕ್ಷ ತಂತ್ರಗಾರಿಕೆಯೆ ಅವರ ಪಾರ್ಟಿಯ ರಾಜಕೀಯ ಸಿದ್ಧಾಂತ... ಕುಮಾರಣ್ಣನ ಅನುಯಾಯಿ ಎಮ್ಮೆಲ್ಲೆಗಳ ಸಾಮೂಹಿಕ ಆಕಾಂಕ್ಷೆಗಳೇ ಜೆಡಿಎಸ್‌ನ ಕಾಮನ್ ಮಿನಿಮಮ್ ಪ್ರೋಗ್ರಾಂ!!!

ಇಂತಹ ಸನ್ನಿವೇಶದಲ್ಲಿ ಪಾಪ, ಎಂ.ಪಿ. ಪ್ರಕಾಶ್ ರೇಸ್‌ಕೋರ್ಸ್ ರಸ್ತೆಯ ಜಾತ್ಯತೀತ ಜನತಾದಳ ಕಚೇರಿಯ ಅಧಿಪತ್ಯ ಪಡೆದುಕೊಂಡಿದ್ದಾರೆ. (ಗಿಟ್ಟಿಸಿದ್ದಾರೆ ಎನ್ನುವುದು ಸತ್ಯಕ್ಕೆ ದೂರವಾದೀತು)... ಮೊದಲು ಪಾರ್ಟಿ ಆಫೀಸನ್ನು ಸ್ವಚ್ಛಗೊಳಿಸುತ್ತಾರಂತೆ... ಅಲ್ಲಿ ಅತ್ಯಾಧುನಿಕವಾದ ಲೈಬ್ರರಿ, ಕಂಪ್ಯೂಟರ್‌ಗಳನ್ನು ಸ್ಥಾಪಿಸುತ್ತಾರಂತೆ... ಅಲ್ಲಿನ ಸಭಾಂಗಣ, ಕೊಠಡಿಗಳನ್ನು ಕಲಾತ್ಮಕವಾಗಿ ಸಿಂಗರಿಸುತ್ತಾರಂತೆ. ಪಾರ್ಟಿ ಕಾರ್ಯಕರ್ತರುಗಳಿಗಾಗಿ ಅಧ್ಯಯನ ಶಿಬಿರಗಳನ್ನು ನಡೆಸುತ್ತಾರಂತೆ.

ಇದೆಲ್ಲವೂ ಸರಿ...ಕೌಟುಂಬಿಕ ರಾಜಕಾರಣದಿಂದ ಬೆಂದುಹೋಗಿರುವ ಜೆಡಿಎಸ್ ಪಾರ್ಟಿಯಲ್ಲಿ ಆಂತರಿಕ ಪ್ರಜಾಪ್ರಭುತ್ವ, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಕ್ರಿಯಾಶೀಲತೆ ತುಂಬುವುದಕ್ಕೇನು ಮಾಡಬಲ್ಲರು ಸಂಪನ್ನ ಪ್ರಕಾಶ್ ಸಾಹೇಬ್ರು?

-ರವೀಂದ್ರ ರೇಶ್ಮೆ

ಎಡೂರಪ್ಪನ ಬಜೆಟ್ಟಲ್ಲಿ ಒಂದು ಮ್ಯಾಟ್ರು ಸೇರಿಸ ಬೇಕಿತ್ತು

ಬಯಲು ಸೀಮೆಯ **ಕಟ್ಟೆ ಪುರಾಣ**

ಬಿ. ಚಂದ್ರೇಗೌಡ

ರೇಣುಕಾಚಾರ್ಯರಿಂದ ಯಾರು ಎಲ್ಲೂ ಹೋಗದೆ ಕೋರು ಭರ್ತಿಯಾಗಿತ್ತು. ವಾರದ ವಿಶೇಷ ಘಟನೆಯಾದ ಎಡೂರಪ್ಪನ ಬಜೆಟ್ ಮಂಡನೆ ವಿಷಯವನ್ನು ಚರ್ಚಿಸಲೆಂದು ತವಕಿಸುತ್ತಿದ್ದ ಕಾಳಮಾವ.

"ಎಡೂರಪ್ಪ ಬಡಜೆಟ್ನಲ್ಲಿ ನಮಿಗೇನು ಮಾಡಿದ್ದನ್ಲ ಉಗ್ರಿ?" ಎಂದ.

"ವಳ್ಳೆ ಅನುಕೂಲನೆ ಮಾಡ್ಯವುನೆ ಕಣಮಾವ."

"ಏನು ಮಾಡಿದ್ದನೂ?"

"ರೈತರಿಗೆ ನಾಲುಕ್ನು ಪರಸೆಂಟ್ ಬಡ್ಡಿ ಮೇಲೆ ಸಾಲ ಕೊಟ್ಟನಂತೆ."

"ಮತ್ತೆ ಇರೋದ ಪಕ್ಷದಲ್ಲಿದ್ದಾಗ ರೈತರ ಬಡ್ಡಿ ಮನ್ನಾ ಮಾಡಿ. ಸಾಲನೆ ವಜ ಮಾಡಿ ಅಂತ ಮುಕಳರಿಯ ಕೂಗ್ತಿದ್ದ?"

"ಇರೋದ ಪಕ್ಷದಲ್ಲಿದ್ದಾಗ ಅಂಗೆ ಮತ್ತೆ ಕೂಗದು. ಅದೇ ಅವುನ ಕೈಗೆ ಬಜೆಟ್ ಕೊಟ್ಯಾಗ, ಅಂಗೆಲ್ಲಿ ಮಾಡಕ್ಯಾದತೂ ಅನ್ನಂಗಾಯ್ತದೆ. ಅದ್ಕೆ ಹೋಗ್ಲಿ ಅಂತ ನಾಕು ಪರಸೆಂಟಾಕ್ಯವುನೆ."

"ದ್ಯಾವೇಗೌಡ ಹೇಳಿರಬೇಕು, ಇಲ್ದೆ ಇದ್ರೆ ಆಟೊಂತರ ಕಡಮೆ ಬಡ್ಡಿಲಿ ಯಾರು ಸಾಲ ಕೊಟ್ಟರೂ?"

"ಇರಬವುದು ಕಣ ಮಾವ. ರೈತರಿಗೆ ಏನೇನು ಅನುಕೂಲ ಮಾಡ್ಯವುನೊ ಅದ್ಯಲ್ಲ ದ್ಯಾವೇಗೌಡ ಬರದು ಕಳಿಸಿರೊದೆಯ."

"ಎತ್ತಿನ ಲಾಳದ ಮ್ಯಾಲೆ ಟ್ಯಾಕ್ಸಾ ಲವಂತೆ?" ಎಂದ ಸೀರ.

"ಅಂಗರೆ ಎತ್ತಿನ ಲಾಳದ ಮ್ಯಾಲೂ ಟಾಕ್ಸ್ತೆ?" ಎಂದಳು ಜುಮ್ಮಿ.

"ಊ ಕಣೆ. ಮಂಗಸೂಳೆಮಕ್ಕಳು ಯಾವುದ್ನೂ ಬುಡದಿಲ್ಲ."

"ಎತ್ತಗಳೇ ಇಲ್ಲ ಅಂದ ಮ್ಯಾಲೆ ಆ ಲಾಳತ ಗಂಡೇನು ಮಾಡದ್ನ?"

"ದನ ಉಳಿಸಿಗಳಕ್ಕೂ ಒಂದು ಪ್ರೋಗ್ರಾಂ ಕೊಟ್ಟವುನೆ."

"ಯಂಗುಳಿಸಿಕೊಂಡನಂತೆ."

"ಯಂಗೆ ಅಂದ್ರೆ ದ್ವಡಪ್ಪ, ಇದು ಹಂಡ್ರೆಡ್ ಪರಸೆಂಟ್ ಬಜೆಪಿ ಪ್ರೋಗ್ರಾಂ. ಈಗಾಗ್ಲೆ ಸಾಬ್ರು ದನಸಾಗುಸ್ತಯಿರಬೇಕಾದ್ರೆ ಬಜೆಪಿಗಳು ಅಟ್ಯಾಕ್ ಮಾಡಿ ಹಿಡಿತಾ ಅವುರೆ. ಅದನ್ನ ಇನ್ನು ಮುಂದೆ ಜಾಸ್ತಿ ಮಾಡ್ತರೆ ಅಷ್ಟೆ" ಎಂದ ವಾಟಿಸ್ಸೆ.

"ಅಂಗಲ್ಲ ಕಣೊ. ಒಂದು ಜಿಲ್ಲೆಲ್ಲಿ ಇಪ್ಪತ್ತೆಕರೆ ಜಮೀನು ತಗಂಡು ಅದರಲ್ಲಿ ನೂರು ಹಸ ಸಾಕಬೇಕಂತೆ."

"ಸಾಕಿ?"

"ಸಾಕಿ ಎಡೂರಪ್ಪನಿಗೆ ಕೊಡದು."

"ಅಲ್ಲಾ ಕಣೊ ಉಗ್ರಿ. ದೇಸಿ ತಳಿ ದನ ತಗಂಡು ಸಾಕಕ್ಕೆ ಅದೇನು ಕುರಿಪಾರಮ್ಮೆ. ದನ ಕಣೊ ಅವು ದನ. ಅದಕಿಂತ ಈಗಾಗ್ಲೆ ಹಾಳಾಯ್ತಯಿರೊ ಅಮೃತ್‌ಮಹಲ್ ಕಾವಲ ಬುಡಿಸಿಗಂಡು ಆ ಪಾರಂಗೆ ಜೀವ ಕೊಟ್ಟದ್ರಾಯ್ತಿತ್ತು."

"ಅಮೃತ್ ಮಹಲ್, ಪಾರಮ್ಮು, ದನ, ಎಡೂರಪ್ಪನಿಗೆ ಗೊತ್ತಿರಬೇಕಲ್ಲ?"

"ಗೊತ್ತಾಗದೇನು? ತಲೆ ಮ್ಯಾಲ್ಕರಡು ಕೋಡು ಮಡಗಿದ್ರೆ ಎಡೂರಪ್ಪನೆ ಅಮೃತ್ ಮಹಲ್ ಎತ್ತಿದ್ದಂಗವುನೆ. ಅದಿರ್ಲಿ ಅಧಿಕಾರಿಗಳ ಕೇಳಿದ್ರೆ ಹೇಳೋರು."



"ನೂರ ಹಸ ಸಾಕಿ ಅವಿಂದ ಏನು ವಲ ಉಳಬೇಕೊ, ಅಥವಾ ಹಾಲ ಮಾರಬೇಕ್ಲ?" ಎಂದ ಸೀರ.

"ಗಂಜಲ ಸಂಗ್ರಹ ಮಾಡಬೇಕಂತೆ."

"ಮಾಡಿ?"

"ಮಾಡಿ ಬಾಯಾರಿದೋರಿಗೆ ಕೊಡದು, ಕಬ್ಬಿನಾಲು ಕೊಟ್ಟಂಗೆ."

"ಅಣಕ ವಡಿಬ್ಯಾಡ ಸರಿಯಾಗೇಳ್ಳ" ಎಂದಳು ಜುಮ್ಮಿ.

"ಇನ್ನೇನೆ ಮತ್ತೆ. ಆ ಎಡೂರಪ್ಪ ನೂರಸಕಟ್ಟಿ ಗಂಜಲ ಹಿಡಕಂಡು ಯೂನಿವರ್ಸಿಟಿಗೆ ಕಳಿಸಿ ಚೆಕ್ ಮಾಡಿ ಅಂದವುನೆ. ಇನ್ನೇನೂ ಹೇಳಿಲ್ಲ."

"ಮಿಸ್ಟರ್ ಉಗ್ರಿ, ಹಿಂಗಿರಬೇಕು ಕಣೊ: ಶುಭಾಷ್ ಪಾಳೇಕರ್ ಹತ್ತು ಕೆ.ಜಿ. ಸಗಣಿ, ಹತ್ತು ಲೀಟರು ನಾಟಿ ಹಸಿನ ಗಂಜಲದಲ್ಲಿ ಹತ್ತೆಕರೆ ನೆಲ ಬ್ಯಳಿಬವುದು ಅಂತ ಹೇಳ್ಯವುನೆ. ಹೇಳದೇನು ಈಗಾಗ್ಲೆ ಕರ್ನಾಟಕದಲ್ಲಿ ಭಾಸಣ ಮಾಡಿಕಂಡು ತಿರುಗ್ತಾ ಅವುನೆ. ಈ ಎಡೂರಪ್ಪನಿಗೆ ಯಾವೊ ಬಜೆಪಿಗಳು ಸಗಣಿಬುಟ್ಟು ಬರಿ ನಾಟಿಹಸಿನ ಗಂಜಲದ ವಿಸಿಯನೇ ಹೇಳಿರಬೇಕು" ಎಂದ ವಾಟಿಸ್ಸೆ.

"ಇರಬವುದು ಬುಡು."

"ಅಲ್ಲಾ ಕಂಡ್ಲ, ಇಪ್ಪತ್ತೆಕರೆ ಜಮೀನಲ್ಲಿ ನೂರಸ ಮೇಸಕ್ಯಾದತೆ, ಅವೇನು ಕುರಿ ಕೆಟ್ಟೊದವೆ?" ಎಂಧ ಕಾಳಮಾವ.

"ಆರೆಸ್ಸೆಸ್ ಬೈಟಕ್ ತರನೇ ದನಗಳೂ ನಿಂತಗತ್ತವೆ ಅಂತ ತಿಳಕಂಡಿರಬೇಕು ದ್ವಡಪ್ಪ."

"ಕಟ್ಟರತ ಹುಲ್ಲಾಕಿ ಮೇಸಕ್ಕೆ ಅಷ್ಟು ಜಾಗ ಸಾಕು ಅನ್ನಕಂಡಿರಬವುದು ಬುಡ್ರೊ" ಎಂದ ಸೀರ.

"ಅಷ್ಟಕೂ ಅವ್ನಲ್ಲ ಆಗದ ಕ್ಯಲಸ ಚಿಗಪ್ಪ. ಹಿಂದೊಂದು ಸತಿ ಸಿದರಾಮಯ್ಯ ಬಜೆಟ್ ಮಾಡಿದಾಗ 'ಊರು ಸುತ್ತ ಕಸ ಚೆಲ್ಲಬ್ಯಾಡಿ ಊರತ್ರದಲ್ಲೇ ಜಾಗ ತಕ್ಕೊಡತಿವಿ ಅಲ್ಲಿಗಾಕಿ' ಅಂದಿದ್ದ. ಅಂಗಾಯ್ತು ಇದುವೆ. ಮುಂದಕೇಳೊ ಉಗ್ರಿ."

"ಬಡುವ್ರುರು ಸತ್ರೆ ದಫನ್ ಮಾಡಕ್ಕೆ ಸಾವುರುಪಾಯಿ ಕೊಡ್ತನಂತೆ."

"ನಿಜುವೇನ್ಲ ಉಗ್ರಿ?" ಎಂದು ಜುಮ್ಮಿ ಅಚ್ಚರಿಯಿಂದ ಕೇಳಿದಳು.

"ಊ ಕಣೆ."

"ಅಂಗರೆ ಪೂಜಾರಮ್ಮ ಸತ್ಯಾಗ ಹೇಳಿದ್ರೆ ಸೌದಿಗಾರ ದುಡ್ಡಾಗವು ಕಂಡ್ಯ."

"ಯಕ್ಕಾ ನೀನು ಸರಾಕಾರದಣ ತಗಂಡು ಸತ್ತೋರ ದಫನ್ ಮಾಡೋವತ್ತಿಗೆ ನಿನ್ನ ಹ್ಯಣವೇ ಬದ್ದೊಯ್ತದೆ. ಅಷ್ಟಕ್ಕೂ ನಮ್ಮ ಜನ ಸರ್ಕಾರಿ ಹಣದಲ್ಲಿ ದಫನ್ ಮಾಡಿಸಿಗಳಕ್ಕೆ ತಯಾರಾಗಿದ್ದರೇನಕ್ಕ? ಹೋಗ್ಲಿ ಯಾರಾರ ಹೋಗಿ ಈಸಗಳಕ್ಯಾದತೆ?"

"ಅದೋಗ್ಲಿ ಕಂಡ್ಯ, ಜನೇಟಾಡಿಕತ್ತರೆ ಇದ್ಯಂತ ಗತಿಲ್ದವು ಅಂತ. ಹೋಗ್ಲಿ ಸತ್ತೊನು ಸಿಟ್ಟು ಮಾಡಿಕಂಡು ಗಾಳ್ಯಾದ್ರೆ ಅನುಭವಸೊರ್‍ಯಾರೂ" ಎಂದಳು ಜುಮ್ಮಿ.

"ಎಡೂರಪ್ಪ ಇಂತ ಬಜೆಟ್ ತಯಾರಿ ಮಾಡುವಾಗ ಇನ್ನೊಂದು ವಿಷಯ ಸೇರಸಬೇಕಿತ್ತು ಕಣಕ್ಕ."

"ಅದ್ಯಾವುದ್ಲ?"

"ಪ್ರತಿ ಮನೆಲಿರೊ ನೀರು ಟ್ಯಾಂಕಿಗೆ ಸರ್ಕಾರವೇ ಮುಚ್ಚಳ ಮಾಡಿ ಬೀಗನೂ ತಕ್ಕೊಡತದೆ ಅಂತ ಸೇರಸ ಬೇಕಾಗಿತ್ತು ಕಣಕ್ಕ."

"ಅದ್ಯಾಕ್ಲ ಅಂಗಂತಿ?"

"ಊ ಕಣಕ್ಕ, ಎಡೂರಪ್ಪನ ಮನೆಯಿರೊ ನೀರು ಟ್ಯಾಂಕಿಗೆ ಅವುನೆಡ್ತಿ ಬಿದ್ದು ಸತ್ತೋದ್ಳು. ಆ ನೀರು ಟ್ಯಾಂಕಿಗೊಂದು ಮುಚ್ಚಳ ಇದ್ದು, ಅದಕೊಂದು ಬೀಗನೂ ಇದ್ದು, ಅದರ ಕೀ ಎಡೂರಪ್ಪನ ಕೈಲಿದ್ರೆ, ಪಾಪ ಅವುನೆಡ್ತಿ ಉಳಕತಿದ್ಲು ಕಣಕ್ಕ. ದೇವರಂತ ಹೆಂಗಸು, ನೀರುಟ್ಯಾಂಕಿ ಪಾಲಾದ್ಲು, ಈ ಎಡೂರಪ್ಪ "ಅವುಳ ನೆನಪಿಗಾದ್ರು" ಅಂತದೊಂದು ಪ್ರೊಗ್ರಾಮು ಈ ಬಜೆಟ್ ವಳಿಕೆ ಸೇರಸಬೇಕಾಗಿತ್ತು."

"ಲೆ ಅಣಕ ವಡಿಬ್ಯಾಡ. ಸಾಯರು ಎಲ್ಲಿದ್ರು ಸಾಯ್ತರೆ. ಅವುರ ಹಿಡಕಳಕ್ಯಾದತೇನ್ಲ? ನೋಡು ವಳಗೆರೆ ಹಳ್ಳಿ ಮೇಟ್ರು ಹೋಗ್ಯತ್ತಗೆ ನ್ಯಾಣಾಯ್ಕಂಡನಂತೆ"

"ವಳ್ಳೆ ಪನಿಷ್‌ಮೆಂಟು ಕಣಕ್ಕ, ನಾನು ಮೆಚ್ಚಗಂಡೆ."

"ಅಲ್ಲಾ ಪಾಠ ಹೇಳೊ ಮೇಟ್ರೆ ಹಿಂಗಾದ್ರೆ ಮಕ್ಕಳ ಇಸುಗೂಲಿಗ್ಯಂಗೆ ಕಳಸದೂ?" ಎಂದ ಕಾಳಮಾವ.

"ಬರೀ ಹೆಂಗಸರನೇ ಮೇಸ್ಟ್ರು ಕ್ಯಲಸಕ್ಕೆ ತುಂಬಿದ್ರೆ ಯಂಗೇ?" ಎಂದಳು ಜುಮ್ಮಿ.

"ಅಯ್ಯೋ ಈಗಿರೊ ಹೆಂಗಸರ ಜಗಳನೆ ನೋಡಕ್ಯಾಯ್ತಾಯಿಲ್ಲ. ಇನ್ನ ಬರಿ ಅವುರೆ ಆದ್ರೆ ಇಸ್ಕೂಲುಳದವೇನೆ, ಅದಕಿಂತ್ಲುವೆ ಮೇಸ್ಟ್ರುಗಳ್ಯಲ್ಲ ಮದಿವಾಗಿರಬೇಕು. ಊರ ಜನ ಹೋಗಿ ಆಗಾಗ್ಗೆ ಇಸುಗೂಲುದ್ರ ಇಚಾರಿಸಬೇಕು. ಅಂಗಾದ್ರೆ ಇದು ಒಂದು ಲ್ಯವೆಲ್ಲಿಗೆ ಬರಬವುದು."

"ಉಗ್ರಿ ಒಂದು ತಮಾಸಿ ಕಣೊ, ಇಸುಗೂಲ್ ಮೇಸ್ಟ್ರು ಹೆಣ್ಣಮಕ್ಕಳ ಕೆಣಕದ ನೋಡಿ ಒಬ್ಬ ರಾಜಕಾರಣಿ ಏನಂದವುನೆ ಗೊತ್ತೆ?"

"ಮೇಸ್ಟ್ರುಗಳ ವಜಮಾಡಿ ಅಂದಿದ್ದನೆ?"

"ಥೂ ಅಂಗಂದಿಲ್ಲ ಕಣೊ, ನಮ್ಮ ಜಿಲ್ಲೆಲ್ಲಿ ಇಂತ ಕೆಲಸ ಮಾಡಿ ಮಂಡ್ಯ ಜಿಲ್ಗೆಗೆ ಕೆಟ್ಟ ಹೆಸರು ತತ್ತಿರಲ್ಲ, ಬೇರೆ ಜಿಲ್ಲೆಗಳಿಗೆ ಹೋಗಿ ಅಂಗೆ ಮಾಡಿ ಅಂದವುನೆ."

"ಅವುನಪ್ಪ ರಾಜಕಾರಣಿ, ಯಾರ್ಲ ಅವುನು?"

"ಅವುನು ಮುಂದೆ ಕುಮಾರನ ಸಂಪುಟಕ್ಕೆ ಸೇರತನಂತೆ."

"!?"


–ಬಿ. ಚಂದ್ರೇಗೌಡ

ಯುಜಿ ಎಂಬ ತಿಕ್ಕಲು ಚಿಂತಕ

ಒಂದು ಪತ್ರ

ಇತ್ತೀಚೆಗೆ ದಿನಪತ್ರಿಕೆಯೊಂದರ ಮುಖಪುಟದಲ್ಲಿ 'ಭಾರತ ಭವಿಷ್ಯವಿಲ್ಲದ ದೇಶ' ಎಂಬ ಶೀರ್ಷಿಕೆಯಡಿಯಲ್ಲಿ ಯುಜಿ ಎಂಬ ತಿಕ್ಕಲು ಚಿಂತಕನ ವಿಶೇಷ ಸಂದರ್ಶನ ಪ್ರಕಟವಾಯಿತು. ನ್ಯೂಟನ್, ಐನ್‌ಸ್ಟೈನ್, ಗೆಲಿಲಿಯೋ, ಡಾರ್ವಿನ್‌ರವರ ಸಾಲಿನಲ್ಲಿ ಯುಜಿ ನಿಲ್ಲುತ್ತಾರೆಂದು ಆ ಪತ್ರಿಕೆಯಲ್ಲಿ ಹೇಳಲಾಗಿತ್ತು, ಆಂಧ್ರದ ಉಪ್ಪಲೂರಿ ಗೋಪಾಲಕೃಷ್ಣ ಕೃಷ್ಣಮೂರ್ತಿ ಎಂಬ ಈ ವ್ಯಕ್ತಿ ಯುಜಿ ಎಂದೇ ಪರಿಚಿತರಾಗಿದ್ದಾರೆ. "ಜ್ಞಾನೋದಯ ಸಂಪಾದಿಸಲು ನನ್ನೆಲ್ಲ ಆಸ್ತಿಪಾಸ್ತಿ ಹೆಂಡತಿ, ಮಕ್ಕಳನ್ನು ತೊರೆದೆ, ಕೊನೆಗೆ ಗೊತ್ತಾಗಿದ್ದೇನೆಂದರೆ ಜ್ಞಾನೋದಯ (enlightment) ಎಂಬುದು ಶುದ್ಧ ಬೋಗಸ್" ಎಂದು ತಮ್ಮ ಬೋಗಸ್ ವಿಚಾರವನ್ನು ಪ್ರಾರಂಭಿಸುವ ಈ ವ್ಯಕ್ತಿ ತಮ್ಮ ತಿಕ್ಕಲು (ಹುಚ್ಚು) ವಿಚಾರಧಾರೆಯನ್ನು ಹರಿಯಬಿಡುತ್ತಾರೆ. ನಾವು ಯಾವಾಗಲೂ ಸಹಜವಾಗಿರುವುದಿಲ್ಲ, ಬೇರೆ ಪೋಸನ್ನು ಕೊಡುತ್ತೇವೆ. ಈ ಕಾರಣಕ್ಕಾಗಿಯೇ ನಾವು ಸಂಕಟ ಅನುಭವಿಸುತ್ತೇವೆ. ಈ ಜಗತ್ತಿನಲ್ಲಿ ಯಾರೂ ಜೀನಿಯಸ್ ಅಲ್ಲ, ಎಲ್ಲರೂ ಬೋಗಸ್ ಎಂದು ಹೇಳುವ ಯುಜಿಯವರು ನ್ಯೂಟನ್, ಐನ್‌ಸ್ಟೈನ್, ಗೆಲಿಲಿಯೋ, ಡಾರ್ವಿನ್‌ರವರನ್ನು ಜೀನಿಯಸ್ ಅಲ್ಲವೆಂದು ಸಾಬೀತು ಪಡಿಸುತ್ತಾರೆಯೇ? ಅಂಥವರ ಸಾಲಿನಲ್ಲಿ ಯುಜಿ ನಿಲ್ಲುತ್ತಾರೆನ್ನುವವರಿಗೆ ಏನೆನ್ನಬೇಕು?

ನಮ್ಮೆಲ್ಲ ಸಮಸ್ಯೆಗಳಿಗೆ ನಮ್ಮ ವಿಚಾರವೇ ಕಾರಣ. ನಮ್ಮ ಅವನತಿಗೂ ವಿಚಾರ ಮಾಡುವಂತಹ ಅಪಾಯಕಾರಿ ಕ್ರಿಯೆ ಮತ್ತೊಂದಿಲ್ಲ, ಎಂದೂ ವಿಚಾರ ಮಾಡಬಾರದು. ವಿಚಾರ ನಿಮ್ಮನ್ನೆಂದೂ ಸಂತಸ, ನೆಮ್ಮದಿಯಿಂದಿರಲು ಬಿಡುವುದಿಲ್ಲ, ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳಲು ಅಡ್ಡಿಯಾಗುವುದು ವಿಚಾರವೇ ಎಂದು ಬೊಗಳೆ ಬಿಡುವ ಯುಜಿಯವರು ವಿಚಾರಗಳೇ ಪ್ರಪಂಚವನ್ನು ಆಳುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ವಿಚಾರದಿಂದಲೇ ಪ್ರಗತಿ. ವಿಚಾರ ಮಾಡುವುದರಿಂದಲೇ ಸಮಸ್ಯೆಗಳನ್ನು ಪರಿಹಾರ ಮಾಡಲು ಸಾಧ್ಯ ಎಂಬ ಪ್ರಾಥಮಿಕ ತಿಳುವಳಿಕೆಯನ್ನು ಸಹ ಅಂತರರಾಷ್ಟ್ರೀಯ ಖ್ಯಾತಿಯ ಯುಜಿಯವರು ಹೊಂದಿಲ್ಲದಿರುವುದು ಆಶ್ಚರ್ಯದ ಸಂಗತಿಯಾಗಿದೆ.



ಎಲ್ಲಿಯವರೆಗೆ ಮಹಿಳೆಯರು ಲೈಂಗಿಕ ಅವಶ್ಯಕತೆಗಾಗಿ ಗಂಡಸರನ್ನು ಅವಲಂಬಿಸುತ್ತಾರೋ ಅಲ್ಲಿಯವರೆಗೆ ಮಹಿಳಾವಾದಿ ಹೋರಾಟ ಯಶಸ್ವಿಯಾಗುವುದಿಲ್ಲ, ಸೆಕ್ಸ್‌ಗಾಗಿ ಗಂಡಸರೇ ಬೇಕಾಗಿಲ್ಲ, ವೈಬ್ರೇಟರ್‌ಗಳನ್ನು ಬಳಸಬಹುದು ಎನ್ನುವ ಯುಜಿಯವರ ಮೂರ್ಖತನಕ್ಕೆ ಏನೆನ್ನಬೇಕು. ಹಸಿವು, ನಿದ್ರೆ ಮತ್ತು ಕಾಮ ಇವುಗಳು ಪ್ರತಿಯೊಂದು ಜೀವಿಯ ಸಹಜ ಪ್ರವೃತ್ತಿಗಳು, ಮಾನವನೂ ಇದಕ್ಕೆ ಹೊರತಲ್ಲ, ಪ್ರಕೃತಿಯ ಈ ನಿಯಮವನ್ನು ಅಲ್ಲಗಳೆಯುವ ಈತನಿಗೆ ಮತಿಭ್ರಮಣೆಯಾಗಿದೆ

ಈ ದೇಶದಲ್ಲಿ ಎಲ್ಲವುಗಳಿಗೂ ಗಾಂಧಿ ಹೆಸರೇಕೆ ಬೇಕು? ಗಾಂಧಿ ಚಿತ್ರವಿರುವ ನೋಟುಗಳನ್ನು ಕಂಡರೆ ನನಗೆ ವಾಕರಿಕೆ ಬರುತ್ತದೆ ಎನ್ನುತ್ತಾರೆ. ಗಾಂಧಿ, ನೆಹರು ಬಗ್ಗೆ ಇಷ್ಟೊಂದು ಕೀಳಾಗಿ ಮಾತನಾಡುವ ಯುಜಿಯವರ ಮನಸ್ಸು ಎಂಥದು! ರೂಪಾಯಿ ನೋಟುಗಳಿಗೆ ಗಾಂಧೀಜಿಯವರ ಚಿತ್ರದ ಬದಲು ಈ ಹುಚ್ಚ ಯುಜಿಯ ಚಿತ್ರವನ್ನು ಮುದ್ರಿಸಬೇಕಿತ್ತೇ?

ಜೀವನದಲ್ಲಿ ಹಣವೇ ಮುಖ್ಯ ಪ್ರೀತಿಸುವುದಿದ್ದರೆ ಹಣವೊಂದನ್ನೇ ಪ್ರೀತಿಸಿ. ಪರಮಸ್ವಾರ್ಥಿಗಳಾದರೆ ಅಗಾಧವಾದುದನ್ನು ಸಾಧಿಸುತ್ತೀರಿ. ಪವಿತ್ರ ಮೀನು ಆಗುವುದಕ್ಕಿಂತ ನಾಯಿಯಾಗುವುದೇ ಲೇಸು. ಮೆಡಿಟೇಶನ್‌ಗಿಂತ ಮಾಸ್ಟರ್‌ಬೇಶನ್ (ಹಸ್ತ ಮೈಥುನ) ಒಳ್ಳೆಯದು ಎಂದು ಹೇಳಿರುವ ಯುಜಿಯವರ ಮಾತುಗಳನ್ನು ಕೇಳಿದರೆ ಖಂಡಿತವಾಗಿಯೂ ಅವರಿಗೆ ಬುದ್ಧಿ ಭ್ರಮಣೆಯಾಗಿದೆ ಎನ್ನಿಸುತ್ತದೆ. ಟಿಬೆಟ್ಟಿನ ಧರ್ಮಗುರು ದಲೈಲಾಮಾ ಅವರನ್ನು ಭೇಟಿ ಮಾಡಿದಾಗ, ಆನೆಯೊಂದು ಮಹಿಳೆಯನ್ನು ಸಂಭೋಗಿಸುವ ಚಿತ್ರವನ್ನು ಉಡುಗೊರೆಯಾಗಿ ನೀಡಿದೆ ಎಂದು ಹೇಳಿಕೊಂಡಿರುವ ಯುಜಿಯವರ ಮನಸ್ಥಿತಿಯಾದರೂ ಎಂಥದು? ಸ್ವಿಟ್ಜರ್‌ಲ್ಯಾಂಡಿನಲ್ಲಿ ದನಗಳಿಗೆ ಕೃತಕ ಗರ್ಭಧಾರಣೆ ಮಾಡುತ್ತಾರೆ. ಅಲ್ಲಿನ ದನಗಳು ಸಂಭೋಗಿಸದೇ ಕರುಗಳನ್ನು ಹೆರುತ್ತವೆ. ಹಾಗಾಗಿ ಅವು ಸಲಿಂಗ ಕಾಮಿಗಳಾಗಿವೆ. ಮನುಷ್ಯರೂ ಸಹ ಇದೇ ಹಾದಿ ಹಿಡಿಯಿರಿ ಎಂದು ಅದ್ಭುತವಾಗಿ ತಮ್ಮ ಪಶು ನೀತಿಯನ್ನು ಬೋಧಿಸಿದ್ದಾರೆ ಯುಜಿ. ಯುಜಿಯವರ ಈ ಎಲ್ಲಾ ವಿಚಾರಗಳನ್ನು ಕೇಳಿದರೆ ಅವರನ್ನು ಆದಷ್ಟು ಬೇಗ ಮಾನಸಿಕ ರೋಗಿಗಳ ಆಸ್ಪತ್ರೆಗೆ ಅಡ್ಮಿಟ್ ಮಾಡಬೇಕೆನಿಸುತ್ತದೆ.

ಆದರೆ ಹುಚ್ಚಾಸ್ಪತ್ರೆಯಲ್ಲಿರಬೇಕಾದ ಈ ವ್ಯಕ್ತಿಯನ್ನು ವಿಶೇಷವಾಗಿ ಸಂದರ್ಶಿಸಿ, ಪತ್ರಿಕೆಯ ಮುಖಪುಟದಲ್ಲಿ ಪ್ರಕಟಿಸಿದ ಆ ಪತ್ರಿಕೆಯ ಸಂಪಾದಕರ ಈ ಘನಂದಾರಿ ಕೆಲಸವನ್ನು ಯಾವ ಪದಗಳಿಂದ ಹೊಗಳಬೇಕೋ ಅರ್ಥವಾಗುತ್ತಿಲ್ಲ.

–ಹುಲಿಕಟ್ಟಿ ಚೆನ್ನಬಸಪ್ಪ

ಸತ್ತವನೊಬ್ಬ ಮತ್ತು ಇನ್ನೂ ಜನಿಸದವನೊಬ್ಬ ಇವರೇ ನಿಜವಾದ ಮನುಷ್ಯರು -ಚೀನಿ ನಾಣ್ಣುಡಿ



ಮನುಷ್ಯನೊಬ್ಬ ಕತೆಯಾದ.

ಅವನು ಬದುಕಿದ್ದು ಕೇವಲ ಮೂವತ್ತೊಂಭತ್ತು ವರ್ಷ. ಅಷ್ಟರಲ್ಲಿ ಅನೇಕ ಪುಸ್ತಕ ಓದಿದ್ದ. ಬಂಡಾಯದಲ್ಲಿ ಭಾಗವಹಿಸಿದ್ದ. ಒಮ್ಮೆ ಕುಷ್ಠ ರೋಗಿಯೊಬ್ಬನನ್ನು ನೋಡಿ ಮಾನವರ ನೋವು ಕಡಿಮೆ ಮಾಡುವ ಉದ್ದೇಶದಿಂದ ...ದ್ಯನಾದ. ಕೇವಲ ವೈದ್ಯನಾದರೆ ಕೆಲವೇ ರೋಗಿಗಳ ಆರೈಕೆ ...ಡಬಹುದು ಅನ್ನಿಸಿದ್ದರಿಂದ ಈ ವ್ಯವಸ್ಥೆಯನ್ನೇ ಬದಲಿಸಿ ರೋಗಗಳೇ ...ರದಂಥ ಪರಿಸ್ಥಿತಿ ಉಂಟು ಮಾಡಲು ರಾಜಕೀಯಕ್ಕಿಳಿದ. ...ಜಕೀಯ ಮಾಡಲು ಜನರನ್ನು ನೋಡಬೇಕು, ಅವರ ...ಗತಿಯನ್ನು ತಿಳಿದುಕೊಳ್ಳಬೇಕು. ಹೀಗನ್ನಿಸಿದ್ದರಿಂದ ಈತ ... ಅರ್ಜೆಂಟೈನಾ ಮತ್ತು ದಕ್ಷಿಣ ಅಮೆರಿಕಾದ ಎಲ್ಲ ...ಷ್ಟ್ರಗಳನ್ನೂ ಸುತ್ತಿದ. ಜನರ ಬಡತನ, ಅಸಹಾಯಕತೆ ...ನ ಮನಕರಗಿಸಿದವು. ಆ ದೇಶಗಳಿಗೆ ಹೋರಾಟದಿಂದ ...ತ್ರ ಬದಲಾವಣೆ ತರುವುದು ಸಾಧ್ಯ ಅನ್ನಿಸಿತು. ಹಿಂಸೆ ಅನಿವಾರ್ಯ ...ನ್ನಿಸಿತು. ಒಮ್ಮೆ ಗ್ವಾಟೆಮಾಲಾದ ಸಮಾಜವಾದಿ ಸ್ನೇಹಿತರೊಂದಿಗೆ ...ಗಿದ್ದ. ಆ ಸ್ನೇಹಿತ ಜೆಕಾಬೋ ಅರ್ಬೆಂಜ್‌ನನ್ನು ಅಮೆರಿಕಾ ಕಿತ್ತು ...ಕಿ ತನ್ನ ಕೈಗೊಂಬೆ ಸರ್ಕಾರವನ್ನು ಸ್ಥಾಪಿಸಿತು. ಅಮೆರಿಕಾದ ...ಷ್ಟತನವನ್ನು ಅಭ್ಯಸಿಸುತ್ತಾ ಹೋದ. ಎಲ್ಲ ಕ್ರಾಂತಿಗಳ ಶತ್ರು ಅಮೆರಿಕಾ ...ನ್ನುವುದು ಖಾತ್ರಿಯಾಯಿತು.

ಆಗ ಆತನಿಗೆ ತುಂಬು ಪ್ರಾಯ. ಒಮ್ಮೆ ಮೆಕ್ಸಿಕೋದಲ್ಲಿ ಫಿಡೆಲ್ ...ಸ್ಟ್ರೋನನ್ನು ನೋಡಿದ. ಗೆರಿಲ್ಲಾ ಯುದ್ಧ ಕಲಿತ. 81 ಜನ ಸೈನಿಕರೊಂದಿಗೆ ...ಬಾವನ್ನು ಮುತ್ತಿಗೆ ಹಾಕಿದ. ಕೇವಲ 81 ಜನ.... 1956 ರಲ್ಲಿ ಈ ...ಲ್ಲಾ ಯುದ್ಧ ಆರಂಭವಾಗಿ ಮೂರು ವರ್ಷ ನಡೆಯಿತು. ಕ್ಯೂಬಾದ ...ಟಿಸ್ಟಾನ ಭ್ರಷ್ಟ ಆಡಳಿತ ಮುರಿದುಬಿತ್ತು. ಈತ ಕ್ಯೂಬಾದಲ್ಲಿ ...ಯಕನಾಗಿ ಅಧಿಕಾರ ವಹಿಸಿಕೊಂಡ. ಕ್ಯಾಸ್ಟ್ರೋನ ಸಹಾಯಕನಾಗಿ ...ು ವರ್ಷ ದುಡಿದ. ಅಷ್ಟರಲ್ಲಿ ಎರಡು ಮದುವೆ, ಐವರು ಮಕ್ಕಳು, ...ೇಕ ಪ್ರೇಮ ಪ್ರಕರಣ ಎಲ್ಲ ಆಗಿದ್ದರೂ ಈತ ಸರಳನೂ ಬಡವನೂ ...ದ್ದ. ತಾನು ಉದ್ಧಾರ ಮಾಡಲು ಯತ್ನಿಸುತ್ತಿದ್ದ ಜನರಂತೆಯೇ ...ವಿಸುತ್ತಿದ್ದ. ಇದ್ದಕ್ಕಿದ್ದಂತೆ ಒಂದು ದಿನ ಈತ ಸರ್ಕಾರ, ಅಧಿಕಾರ ...ಲ್ಲವನ್ನೂ ಬಿಟ್ಟು ಕಣ್ಮರೆಯಾದ. ಎಲ್ಲಿದ್ದಾನೆಂದು ಯಾರಿಗೂ ...ತ್ತಾಗಲಿಲ್ಲ. ವಿಯಟ್ನಾಂ, ಕಾಂಗೊ, ಬೊಲಿವಿಯಾ ಮುಂತಾದ ಕಡೆ ಗೆರಿಲ್ಲಾ ಯುದ್ಧದ ಕಲೆ ಕಲಿಸಿದ. ಇಡೀ ಜಗತ್ತಿನಲ್ಲಿ ಕಮ್ಯೂನಿಸ್ಟ್ ಕ್ರಾಂತಿಯಾಗದೆ ಕೇವಲ ಕ್ಯೂಬಾದ ಕ್ರಾಂತಿ ಅರ್ಥಪೂರ್ಣವಾಗಲಾರದು ಎಂದು ನಂಬಿದ್ದ ಈತ. ಬೊಲಿವಿಯಾದಲ್ಲಿ ಒಂದು ದಿನ ಬಿಯರ್ ಕುಡಿಯುತ್ತಾ ಕೂತಿದ್ದಾಗ ಸಣ್ಣ ವಿವಾದದಲ್ಲಿ ಈತನನ್ನು ಒಬ್ಬ ಗುಂಡಿಕ್ಕಿ ಕೊಂದನಂತೆ; ಅಥವಾ ಈತನನ್ನು ಸೆರೆಹಿಡಿದು ಗುಂಡಿಟ್ಟರಂತೆ; ಅಥವಾ ಈತನನ್ನು ಅಮೆರಿಕಾದ ಏಜಂಟರು ಮುಗಿಸಿದರಂತೆ.

ಈತ ಗೆವೆರಾ. ಪೂರ್ಣ ಹೆಸರು ಅರ್ನೆಸ್ಟೊ ಗೆವೆರಾ. ಇನ್ನೂ ಪೂರ್ಣ ಹೆಸರು ಅರ್ನೆಸ್ಟೊ ಗೆವೆರಾ ಡಿ ಲಾ ಸೆರ್ನಾ.


ಈತ ಪ್ರಖ್ಯಾತ ಛೆ ಗೆವೆರಾ....

ಛೆ!

ಯಾಕೆ ಹೇಳಿದ್ದೆಂದರೆ, ಈ 'ಛೆ' ಹೇಗೆ ಬಂತು ಎಂಬುದನ್ನು ಬಹಳ ಚೆನ್ನಾಗಿ ವರ್ಣಿಸುತ್ತಾರೆ. ಗೆವೆರಾನ ತಾಯ್ನಾಡಾದ ಅರ್ಜೆಂಟೈನಾದ ಜನ ಮಾತುಮಾತಿಗೆ 'ಛೆ!' ಅನ್ನುತ್ತಾರಂತೆ. ಗೆವೆರಾ ಕೂಡ "ಛೆ! ಛೆ!" ಎಂದು ತಾಯ್ನಾಡಿಗಿಂತಲೂ ಹೆಚ್ಚಾಗಿಯೇ ಅನ್ನುತ್ತಿದ್ದಿರಬೇಕು. ಹೀಗಾಗಿ ಅರ್ನೆಸ್ಟೊ ಗೆವೆರಾ ಛಗೆವೆರಾ ಆದ. ಈ ಛೆಗೆವೇರಾನ ಬದುಕಿನಲ್ಲಿ "ಛೆ!" ಅನ್ನುವಂಥ ಸಂದರ್ಭಗಳು ಅನೇಕ ಸಲ ಬಂದಿರಬೇಕು... ಏಕೆಂದರೆ ಕೇವಲ 81 ಜನ ಗೆರಿಲ್ಲಾಗಳೊಂದಿಗೆ ಕ್ಯೂಬಾ ನೆಲಕ್ಕೆ ಕಾಲಿಟ್ಟು ಹೋರಾಟ ನಡೆಸಿದಾಗ ಇದನ್ನು ಕಂಡ ಬ್ಯಾಟಿಸ್ಟಾ ಸೈನ್ಯ ಇಡೀ ಗೆವೆರಾ ತಂಡವನ್ನು ಧ್ವಂಸ ಮಾಡುವುದರಲ್ಲಿತ್ತು. ಗಾಯಗೊಂಡು ಹೇಗೋ ತಪ್ಪಿಸಿಕೊಂಡ ಗೆವೆರಾ ತನ್ನ ಸಹಚರರೊಂದಿಗೆ ಕಣಿವೆಯೊಂದನ್ನು ಹೊಕ್ಕು ಬಂಡೆಸಂದುಗಳಲ್ಲಿ ಗುಣಮುಖನಾಗಿ ರೈತರು, ಬುದ್ಧಿಜೀವಿಗಳು, ಅಸಹಾಯಕರನ್ನೆಲ್ಲ ಸೇರಿಸಿ ದೊಡ್ಡ ಸೈನ್ಯ ಕಟ್ಟಿದ. ಇವರು 1959 ರಲ್ಲಿ ಬ್ಯಾಟಿಸ್ಟಾ ಸೈನ್ಯಕ್ಕೆ ಮಣ್ಣುಮುಕ್ಕಿಸಿ ಕ್ಯೂಬಾದ ರಾಜಧಾನಿಯಾದ ಹವಾನಾ ನಗರವನ್ನು ಹೊಕ್ಕು ಸರ್ಕಾರ ರಚಿಸಿ ಅದರಲ್ಲಿ ಮಂತ್ರಿಯಾದಾಗ ಗೆವೆರಾ "ಛೆ! ಇಷ್ಟಕ್ಕಾಗಿ ಇಷ್ಟೆಲ್ಲ ಹೋರಾಡಬೇಕಾಯಿತೆ, ಛೆ!" ಅಂದಿರಬೇಕು. ಹುಟ್ಟು ಹೋರಾಟಗಾರ ಗೆವೆರಾ ಕ್ಯೂಬಾ ಕ್ರಾಂತಿಪೂರ್ವದ ತನ್ನ ಹೆಂಡತಿಯನ್ನು ಬಿಟ್ಟು ಸೈನಿಕಳಾದ ಹುಡುಗಿಯನ್ನು ಮದುವೆಯಾಗಿ ನಾಲ್ಕು ಮಕ್ಕಳು ಮಾಡಿ ಸಭ್ಯ ಸಂಸಾರಿಗನೇ ಆಗಿಹೋಗಲಿದ್ದಾಗ 'ಛೆ!' ಅಂದುಕೊಂಡಿರಬೇಕು.

ಬೌದ್ಧಿಕ ಕುತೂಹಲ, ದೈಹಿಕ ಪರಿಶ್ರಮ, ಜೀವನವನ್ನು ಸವಿಯುವ ರಸಿಕತೆ, ಅದಮ್ಯ ಕ್ರಿಯಾಶೀಲ ಚೇತನ, ಕ್ರಾಂತಿಯ ದಾಹ ಎಲ್ಲವೂ ಒಟ್ಟುಗೂಡಿದ ಈ ಛೆಗೆವೇರಾನನ್ನು ಸಾರ್ತರ್ 'ನನ್ನ ಕಾಲದ ಪರಿಪೂರ್ಣ ವ್ಯಕ್ತಿ' ಎಂದು ಕರೆದ. ಹಿಂಸೆ, ಕನಸು, ಮಾನವೀಯತೆಯ ಈ ವ್ಯಕ್ತಿ ಕೇವಲ ಮೂವತ್ತೊಂಭತ್ತು ವರ್ಷಕ್ಕೆ ತೀರಿಕೊಂಡಾಗ ಈ ಹಿಂಸೆ, ಕನಸು, ಮಾನವೀಯತೆಯಲ್ಲಿ ಯಾವುದು ಈತನ ಪತನಕ್ಕೆ ಕಾರಣವಾಯಿತು ಎಂಬುದು ಇನ್ನೂ ನಿಗೂಢ.


ಛೆ, ಈ ಬದುಕಿನ ಗೋಪ್ಯಗಳಿಗೆ-ಅಮೆರಿಕದ ಗೂಢಚರ್ಯೆಯಂತೆಯೇ-ಕೊನೆ ಮೊದಲೆಂಬುದು ಇದೆಯೇ? ■



ಫೆಬ್ರವರಿ 7, 1988

"ನಾ ಕಂಡ ಮನುಷ್ಯ"

ಮೇಲೆ ಹೇಳಿದ ಛೆಗೆವೆರಾ ಕುರಿತು ಯೋಚಿಸುತ್ತಿದ್ದಾಗ ಆತನಂತಹ ವ್ಯಕ್ತಿಯೇ ಆಗಿದ್ದ ನಮ್ಮ ಡಾ. ಲೋಹಿಯಾ ಕುರಿತು ಓದಿದ್ದೆಲ್ಲ ನೆನಪಾಗುತ್ತಿದೆ. ಅಧಿಕಾರಕ್ಕಾಗಿ ಹಿಂಸೆಯ ಮಾರ್ಗವನ್ನು ಬಿಟ್ಟರೆ ಲೋಹಿಯಾ ಅನೇಕ ರೀತಿಯಲ್ಲಿ ಗೆವೆರಾ ತರಹವೇ ಇದ್ದರು. ಈತ ಹುಟ್ಟು ಕನಸುಗಾರ, ಆದರೆ ಈತನ ಕನಸುಗಳೆಲ್ಲ ಈತ ಕಂಡುಕೊಂಡ ವಾಸ್ತವದಿಂದ ಹೊಮ್ಮುತ್ತಿದ್ದವು. ಈತ ಅತ್ಯಂತ ನೋವಿನ ಗಳಿಗೆಯಲ್ಲೂ ಮುಗುಳ್ನಗುತ್ತಿದ್ದರು. ಎಲ್ಲರೂ ಯಮಗಾಂಭೀರ್ಯದಿಂದ ಅಮೋಘ, ಐತಿಹಾಸಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾಗಲೇ ರಾಮಮನೋಹರ ಲೋಹಿಯಾ ನಗುತ್ತಿದ್ದರು. ಯಮಗಾಂಭೀರ್ಯದ ಜೀವವಿರೋಧಿ ಗುಣ, ಐತಿಹಾಸಿಕ ಚಳವಳಿಯ ಹಾಸ್ಯಾಸ್ಪದ ಮುಖ ಅವರಿಗೆ ಕಾಣುತ್ತಿತ್ತು, ನೆಹರೂ ಗಾಂಧೀಜಿಯನ್ನು ತಮ್ಮ ರಾಜಕೀಯದ ಮೂಲಕ ಹಂತಹಂತವಾಗಿ ಮುಗಿಸುತ್ತಿದ್ದಾಗ, ಇಡೀ ಭಾರತ ಗಾಂಧೀಜಿಯನ್ನು ಅರುಳುಮರಳು ಮುದುಕನೆಂಬಂತೆ ಕಾಣಲು ಆರಂಭಿಸಿದ್ದಾಗ ಲೋಹಿಯಾ ಗಾಂಧೀಜಿಯ ಅರ್ಥಪೂರ್ಣತೆಯನ್ನು ಧ್ಯಾನಿಸುತ್ತಾ, ಬದುಕುತ್ತಾ ಹೋದರು.



ಲೋಹಿಯಾರನ್ನು ಗಾಂಧಿ, "ನಾನು ಬಲ್ಲ ಅತ್ಯಂತ ಧೈರ್ಯವಂತನಾದ ನೇರ ನೀತಿಯ ಮನುಷ್ಯ" ಎಂದು ಕರೆದರು. ಮುತ್ಸದ್ದಿತನ ಕಂಡರೆ ಲೋಹಿಯಾ ಅವರಿಗೆ ಆಗುತ್ತಿರಲಿಲ್ಲ. ಒಮ್ಮೆ ಪ್ರಶ್ನಿಸಿದರು. "ಯಾಕೆ ಈ ಕಮ್ಯುನಿಸ್ಟರು ಲೆನಿನ್ ಬಗ್ಗೆ ಮೂಢನಿಷ್ಠೆಯಿಂದ ವರ್ತಿಸುತ್ತಾರೆ?"

ಅವರೇ ಉತ್ತರಿಸಿದರು, "ನನಗೆ ಬಾಪು ಬಗ್ಗೆ ಇರುವ ವಿಶ್ವಾಸ ನೋಡಿಕೊಂಡರೆ ಇದೇನೂ ಆಶ್ಚರ್ಯಕರವಲ್ಲ."

ಒಮ್ಮೆ ಹ್ಯಾರಿಸ್ ಊಫೋರ್ಡ್ ಎಂಬ ವ್ಯಕ್ತಿ ಲೋಹಿಯಾ ಬಗ್ಗೆ ಬರೆಯುತ್ತಾ ನೆನೆದರು: "ಲೋಹಿಯಾ ಒಮ್ಮೆ ಹೀಗೆ ಬರೆದರು: ಜೀವನದ ಉದ್ದೇಶ ದೇವರು ಮತ್ತು ಹೆಣ್ಣನ್ನು ಪಡೆಯುವುದು. ನಾನು ದೇವರನ್ನು ಸಂಧಿಸಲಾಗಲಿಲ್ಲ, ಹೆಣ್ಣು ನನಗೆ ದಕ್ಕಲೇ ಇಲ್ಲ, ಆದರೆ ನಾನು ಕಂಡ ಒಬ್ಬನೇ ಒಬ್ಬ ಮನುಷ್ಯನ ನೆನಪು ಮಾತ್ರ ದಾರಿಯನ್ನು ಬೆಳಗುತ್ತಿದೆ...

"ಲೋಹಿಯಾ ಮನಸ್ಸಿನಲ್ಲಿದ್ದುದು ಗಾಂಧಿ. ನನ್ನ ಮನಸ್ಸಿನಲ್ಲಿರುವುದು ಲೋಹಿಯಾ." ■

ಜ್ಞಾನಪೀಠಕ್ಕೆ ರಾಜಕೀಯ ಪೀಠದ ಆಸೆ ಏಕೆ?

...ಸವರಾಜ್ ಬೆಸ್ತರ್, ಹರಪನಹಳ್ಳಿ
...ತಂನಂ ತಂನಂ'ಗೂ, 'ತನನಂ ತನನಂ'ಗೂ ಏನು ...ವ್ಯತ್ಯಾಸ?
* ಇಲ್ಲಿ ಮೂರು ಹೃದಯಗಳ ಮಿಡಿತ!

...ಎನ್. ಮಂಜುನಾಥ್, ಬಾಣಾವರ
...ಕ್ಷಣ ಇಲಾಖೆಯಲ್ಲಿ 'ಒಳ್ಳೆ' ಮಾತು, ಪೋಲೀಸ್ ...ಲಾಖೆಯಲ್ಲಿ 'ಕೆಟ್ಟ' ಮಾತು, ಆರೋಗ್ಯ ಇಲಾಖೆ ...ಯಲ್ಲಿ?
* ಮಂತ್ರಿಯ ಅ-ಶೋಕ!

...ಮುತ್ತಣ್ಣ ಪೂಜಾರ್, ಕಹಲಬಾಳು
...ದೇವೇಗೌಡ ಚುಂಚನಗಿರಿ ಕಾಲಿಗೆ ಬಿದ್ದಿದ್ದು ಯಾಕೆ?
* ಕಿಡಿಗೇಡಿ ಹೊಟ್ಟೆಯಲ್ಲಿ ಕಿಡಿಗೇಡಿನೇ ಹುಟ್ಟಿದ್ದಾನೆ ...ಂದಿದ್ದಕ್ಕೆ.

...ದುಸಿದ್ದೇಗೌಡ, ಕಬ್ಬೇಹಳ್ಳಿ
...ತ್ರಿಕಾ ಸಂಪಾದಕರಿಗೆಲ್ಲ ಸಿನಿಮಾ ಖಯಾಲಿ ...ಯಾಕೆ.....?
* 'ಗಂಡ ಹೆಂಡ್ತಿ'ನ ಸಾನಿಯಾ ಮಿರ್ಜಾ ನೋಡಲ್ಲ ...ಂತ ರವಿ ಬೆಳಗೆರೆಗೆ ಗೊತ್ತಿಲ್ಲ ಪಾಪ!

...ಕೆ.ವಿ. ರಾಘವೇಂದ್ರ, ಮೈಸೂರು
...ಜ್ಞಾನಪೀಠಕ್ಕೆ ರಾಜಕೀಯ ಪೀಠದ ಆಸೆ ಏಕೆ?
* ರಾಜಕಾರಣಿಗಳಿಗೆ ಜ್ಞಾನ ಇಲ್ಲದಿರುವುದರಿಂದ.

...ಸ. ಮ್ಯಾಥ್ಯೂಸ್, ರಿಪ್ಪನ್‌ಪೇಟೆ
...ರಕ್ತಿಶಾಳ "ಸುಂಟರಗಾಳಿ"ಗೆ ಸಿಕ್ಕ "ಜೋಗಿ"ಯ ...ತಿ?
* ಮುಳುಗಿಹೋದದ್ದಕ್ಕೆ ಸದ್ಗತಿ!

ಬಹುಮಾನಿತ ಪ್ರಶ್ನೆಗಳು

ಕವಿತಾ ಮಧುಸೂದನ್, ದಾವಣಗೆರೆ
ಹೆಣ್ಣಿನ ಬೆಸ್ಟ್ ಪರ್ಸನಾಲಿಟಿ 36-24-36. ಗಂಡಿನದು?
* ಬೊಜ್ಜು ಇಲ್ಲದಿದ್ದರೆ ಸಾಕು!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ಹೆಣ್ಣು, ಗಂಡನ್ನ 'ನಮ್ಮೇಜಮಾನ್ರು' ಅಂತಾಳೆ ಯಾಕೆ?
* ದಡ್ಡ ಹೆಂಗಸರ ಆ ಜಮಾನ ಮುಗೀತು ಬಿಡಿ.

ಎಂ. ನಿಸರ್ಗ, ದಾವಣಗೆರೆ
'ಚಿಗುರಿದ ಕನಸು' ನಂತರ ಕುಮಾರಸ್ವಾಮಿಯ ಮುಂದಿನ ಚಿತ್ರ ಯಾವುದು?
* 'ಕಳ್ಳ' ಹೆಜ್ಜೆಗಳು!

ಪಿ.ಎನ್. ಶ್ರೀವತ್ಸ, ಬೆಂಗಳೂರು
ಜನತಾದಳ ಹಾಗೂ ಬಿಜೆಪಿಗಳಲ್ಲಿ ಯಾವ ಮಹಿಳೆ ಮಂತ್ರಿಯಾದರೆ ಕಳೆ ಕಟ್ಟುತ್ತೆ....?
* ಹೆಣಕ್ಕೆ ಶೃಂಗಾರ ಬೇರೆ ಕೇಡು.

ಡಿ. ವೆಂಕಟೇಶ್, ದೇವದುರ್ಗ
ನೋಟ ಫ್ರೀ ಹೇಯ್ಸು, ಮಾತು ಫೋನ್ಸ್ ಪೆಯ್ಸು, ಪ್ರೀತಿ?

ಕಣ್ಣಾಮುಚ್ಚಾಲೆ



* ಮೊಬೈಲು, ಪ್ರೀತಿ ಎರಡೂ ಒಂದೇ ತರ, ಕರೆನ್ಸಿ ಖಾಲಿಯಾದಾಗ ಡಿಸ್‌ಕನೆಕ್ಟ್!

ಎಸ್. ಶಶಿಧರ, ಮುತ್ತುಗದೂರು
ಅನಂತಮೂರ್ತಿ ರಾಜ್ಯಸಭೆಗೆ ಆಯ್ಕೆಯಾದರೆ ಕನ್ನಡದ ಉದ್ಧಾರ ಆಗಿಬಿಡುತ್ತಾ?
* TA, DA ಉದ್ಧಾರ ಮಾಡುತ್ತಿದ್ದ ಚಂಪಾಗಿಂತ ವಾಸಿ, ಬಿಡ್ರಿ.

ಸುರೇಶ್ ಅಕ್ಕಸಾಲಿ, ಹುಬ್ಬಳ್ಳಿ
ಸಾಹಿತ್ಯ ಲೋಕದಲ್ಲಿ ಪ್ರಾಣಿಗಳ ಪಾತ್ರ ಕಾಣಿಸಿಕೊಳ್ಳುತ್ತಿದೆಯಲ್ಲ?
* ಇದನ್ನು ನೋಡಿ ಅನಂತಮೂರ್ತಿಯವರು ಈಗ 'ನನ್ನ ಪರಿಸರದ ಕತೆಗಳು' ಬರೆಯಲು ಸಿದ್ಧರಾಗುತ್ತಿದ್ದಾರಂತೆ.

ವಿಜಯಕುಮಾರ್, ಕನಕಪುರ
ಸಿದ್ಧರಾಮಯ್ಯನವರ ಮೇಲೆ ಸದನದಲ್ಲೇ ಹಲ್ಲೆ ಆಯಿತಲ್ಲಾ?
* ಸದನಕ್ಕೆ ದನಗಳು ನುಗ್ಗಿದರೆ ಇನ್ನೇನಾಗುತ್ತೆ?

ಜಿ. ಮಲ್ಲಿಗೆ, ಬೆಂಗಳೂರು
'ಎಸ್ಕೇಪ್' ಶಿವಣ್ಣ ಎಂಬ ಪೋಲೀಸ್ ಈಗ ಎಲ್ಲಿದ್ದಾನೆ?
* 'ಕಾಮನ್‌ವೆಲ್ತ್'ನಲ್ಲಿದ್ದಾನೆ!

ಛೀ ತುಂಟಿ!

ಕ್ಲಾಸ್ ಟೀಚರ್ ಅವತ್ತು ಲೈಂಗಿಕ ವಿಷಯಗಳನ್ನು ಕುರಿತು ಪಾಠ ಆರಂಭಿಸಿದ್ದರು. ಪಾಠದ ನಡುವೆ ಶಾಂತಿ ಎದ್ದು ನಿಂತು "ಮಿಸ್, ನನ್ನ ಅಜ್ಜಿಗೆ ಮಕ್ಕಳು ಆಗ್ತಾವೆಯಾ?" ಎಂದಳು.

"ಇಲ್ಲಮ್ಮ ಆಕೆ ತುಂಬಾ ಮುದುಕಿ, ಆಗಲ್ಲ."

"ಅಮ್ಮನಿಗೆ?"

"ಆಗಬಹುದು. ಆಕೆಗೆ ಇನ್ನೂ ವಯಸ್ಸಿದೆ."

"ನನಗೆ?" ಅಂದಳು ಶಾಂತಿ.

"ಇನ್ನೂ ಇಲ್ಲ, ನೀನಿನ್ನೂ ತುಂಬ ಚಿಕ್ಕವಳು."

ಟೀಚರ್ ಹೀಗೆಂದೊಡನೆ ಪಕ್ಕದ ಬೆಂಚಿನ ರಂಗ ಶಾಂತಿಯತ್ತ ನೋಡುತ್ತಾ ಪಿಸುಗುಟ್ಟಿದ: "ನಾನು ನಿನ್ನೆ ಬೇಲಿಯ ಪಕ್ಕದಲ್ಲಿ ಮಲಗಿದ್ದಾಗ ಹೇಳ್ಲಿಲ್ಲವಾ?"



ರಾಜ್ಯ ಬಜೆಟ್: ವಿಶ್ವಬ್ಯಾಂಕ್ ಬಾಟಲಿ-ದೇಸಿ ಗಂಜಳ

ಶಿವಸುಂದರ್

ಮೊದಲನೆಯದಾಗಿ ಒಂದು ವಿಷಯ ಸ್ಪಷ್ಟಪಡಿಸಿ ಕೊಳ್ಳೋಣ. ಇದು ಹಣಕಾಸು ಮಂತ್ರಿ ಯಡಿಯೂರಪ್ಪ ಮಂಡಿಸಿದ ಬಜೆಟ್ಟಲ್ಲ. ಇದರ ಸ್ಕ್ರಿಪ್ಟ್ ತಯಾರಾದದ್ದು ವಿಶ್ವಬ್ಯಾಂಕಿನ ಕೊಠಡಿಗಳಲ್ಲಿ. ಅಬ್ಬಬ್ಬಾ ಎಂದರೆ ಯಡಿಯೂರಪ್ಪನವರು ಅದಕ್ಕೆ ಗಂಜಳವನ್ನು ಪ್ರೋಕ್ಷಿಸಿ, ಪಂಚಾಂಗ ನೋಡಿ ಶುಭ ಘಳಿಗೆಯಲ್ಲಿ ಮಟಮಟ ಮಧ್ಯಾಹ್ನ ಬಿಡುಗಡೆ ಮಾಡಿದ್ದಾರೆ ಅಷ್ಟೆ.

ಹಾಗೆ ನೋಡಿದರೆ ಕೇವಲ ಯಡ್ಡಿ ಮಾತ್ರವಲ್ಲ, 1999ರಿಂದಲೂ ನಮ್ಮ ರಾಜ್ಯ ಬಜೆಟ್ಟಿನ ರೂವಾರಿಗಳು ಈ ನಾಡಿನ ಸರ್ಕಾರಗಳಲ್ಲವೇ ಅಲ್ಲ. ಅದರಲ್ಲೂ ಕರ್ನಾಟಕ ಸರ್ಕಾರ 1999ರಲ್ಲಿ ವಿಶ್ವಬ್ಯಾಂಕಿನಿಂದ 5000ಕೋಟಿ ಆರ್ಥಿಕ ಪುನರ್ ರಚನಾ ಸಾಲವನ್ನು ಪಡೆದುಕೊಂಡ ಮೇಲೆ ರಾಜ್ಯ ಬಜೆಟ್ಟಿನ ಯೋಜನಾ ಪ್ರಕ್ರಿಯೆಯಲ್ಲೇ ವಿಶ್ವಬ್ಯಾಂಕಿನ ನೇರ ಮಧ್ಯ ಪ್ರವೇಶವಿದೆ. ಆ ಶರತ್ತುಗಳಿಗೆ ಶಾಸನ ಬದ್ಧ ಅಧಿಕಾರ ದಕ್ಕಿಸಿಕೊಳ್ಳಲೆಂದೇ 2002 ರ ಫೆಬ್ರವರಿಯಲ್ಲಿ **Karnataka Fiscal Responsibility Act-FRA-2002** ಅನ್ನು ಪಾಸು ಮಾಡಲಾಗಿದೆ. ಅದೇ ರೀತಿ ಕೇಂದ್ರದಲ್ಲೂ **Fiscal Responsibility and Budget Management Act-FRBM-2002** ಅನ್ನು ಪಾಸು ಮಾಡಲಾಗಿದೆ. ಅಂದರೆ ಈ ದೇಶದ ಆರ್ಥಿಕತೆಯ ಮೇಲೆ ವಿಶ್ವಬ್ಯಾಂಕಿನ ಅಂದರೆ ಅಮೆರಿಕ ಹಾಗೂ ಪಾಶ್ಚಿಮಾತ್ಯ ದೇಶಗಳ ನಿಯಂತ್ರಣವನ್ನು ಈ ಸಾರ್ವಭೌಮಿ ದೇಶದಲ್ಲಿ ಶಾಸನಬದ್ಧ ಗೊಳಿಸಲಾಗಿದೆ ಎಂದರ್ಥ.

ಈಗ ನಮ್ಮ ದೇಶದ ರಾಜಕೀಯ ಪಕ್ಷಗಳ ನಡುವೆ ಇರುವ ಏಕೈಕ ಸ್ಪರ್ಧೆಯೆಂದರೆ ಯಾರು ಈ ಅಸಲಿ ಜನವಿರೋಧಿ ವಿಶ್ವಬ್ಯಾಂಕ್ ಆದೇಶಿತ ಕ್ರಮಗಳನ್ನು ಜನರಿಗೆ ಅರಿವಿಗೇ ಬಾರದಂತೆ ಜನಪರವೆಂಬ ಭ್ರಮೆ ಬಿತ್ತುವುದರಲ್ಲಿ ಯಶಸ್ವಿಯಾಗುತ್ತಾರೆಂಬುದು ಮಾತ್ರ. ಯಡ್ಡಿ ಮಾಡಿರುವುದು ಇದೇ ಕಸರತ್ತುಗಳನ್ನೇ.

ಹಾಗೆ ನೋಡಿದ್ದಲ್ಲಿ ಈ ದೇಶದಲ್ಲಿ ವಿನಾಕಾರಣ ಬಜೆಟ್ಟನ್ನು ಒಂದು ವಿಶೇಷವಾದ ಸಂಗತಿಯೆಂಬಂತೆ ಚಿತ್ರಿಸಲಾಗುತ್ತದೆ. ಇಡೀ ವರ್ಷ ಒಂದು ಸರ್ಕಾರದ ಬಗ್ಗೆ ಮಾಡಿಕೊಂಡು ಬಂದ ವಿಮರ್ಶೆಗಳನ್ನು ಪಕ್ಕಕ್ಕಿಟ್ಟು ಬಜೆಟ್ಟಿನಿಂದ ಏನೋ ಪವಾಡ ಸಾಧ್ಯವೆಂಬಂತೆ ನಿರೀಕ್ಷೆಗಳನ್ನು ಹುಟ್ಟು ಹಾಕುತ್ತಾರೆ. ಆದರೆ ಒಂದು ಸರ್ಕಾರದ ಆರ್ಥಿಕ ನೀತಿಗಳನ್ನು ಹೊರತು ಪಡಿಸಿ ಬಜೆಟ್ಟಿಗೆ ತನ್ನಂತೆ ತಾನೆ ಒಂದು ಪ್ರತ್ಯೇಕ ಅಸ್ತಿತ್ವವೆಲ್ಲಿಯದು? ಬಜೆಟ್ಟೆಂಬುದು ಅದೇ ಆರ್ಥಿಕ ನೀತಿಗಳ ನಿರ್ದಿಷ್ಟ ಅನುಷ್ಠಾನಕ್ಕೆ ರೂಪಿಸಲಾಗಿರುವ ಕಾರ್ಯ ಸೂಚಿಯೇ ವಿನಃ ತನ್ನಂತೆ ತಾನೆ ಒಂದು ಆರ್ಥಿಕ ನೀತಿಯಲ್ಲ; ಹೀಗಾಗಿ ಒಂದು ಬಜೆಟ್ ಜನಪರವೋ ಅಲ್ಲವೋ ಎಂಬುದನ್ನು ಆ ಸರ್ಕಾರದ ಆರ್ಥಿಕ ನೀತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಬೇಕೆ ವಿನಃ ಬಜೆಟ್ಟೇ ತನ್ನಂತೆ ತಾನೆ ಜನಪರವೋ, ಜನವಿರೋಧಿಯೋ ಆಗಿರಲು ಸಾಧ್ಯವಿಲ್ಲ.

ಆದರೂ ನಮ್ಮಲ್ಲಿ ಕೃಷಿಗೆ ಜಾಸ್ತಿ ಹಣ ಕೊಟ್ಟರೆ ಅದು ರೈತ ಪರ ಬಜೆಟ್ಟೆಂತಲೂ, ಹೊಸ ತೆರಿಗೆ ಇಲ್ಲದ ಬಜೆಟ್ಟನ್ನು ಮಂಡಿಸಿದರೆ ಅದು ಜನಪರ ಬಜೆಟ್ ಎಂತಲೂ ಕರೆದುಕೊಂಡು ಬರುವುದೂ; ಹಾಗೂ ಅದೇನೇ ಮಾಡಿದರೂ ವಿರೋಧ ಪಕ್ಷಗಳು ನೀರಸ ಬಜೆಟ್ಟೆಂತಲೂ ಇಲ್ಲವೇ ಜನವಿರೋಧಿ ಬಜೆಟ್ಟೆಂತಲೂ ವಿಮರ್ಶಿಸುವುದು ವಾಡಿಕೆಯಾಗಿ ಬಿಟ್ಟಿದೆ. ಜನಸಾಮಾನ್ಯರಲ್ಲೂ ಸಹ ಪ್ರತಿ ವರ್ಷದ ಬಜೆಟ್ ತಮಗೆ ಹೆಚ್ಚಿಗೆ ತೆರಿಗೆ ವಿಧಿಸಿದೆಯೋ ಇಲ್ಲವೋ ಎಂಬ ಆಸಕ್ತಿಯನ್ನು ಮಾತ್ರ ಹುಟ್ಟಿಸುತ್ತದೆ. ಹೆಚ್ಚಿನ ತೆರಿಗೆಯ ಹೊರೆ ಇಲ್ಲದಿದ್ದರೆ ಆ ಸರ್ಕಾರದ ಆರ್ಥಿಕ ನೀತಿಗಳನ್ನು ಹೊರತು ಪಡಿಸಿ ಆ ಸರ್ಕಾರಗಳನ್ನು ಮೆಚ್ಚಿಕೊಳ್ಳುವ ಅಥವಾ ನಿಂದಿಸುವ ಪರಿಪಾಠ ಬೆಳೆದುಕೊಂಡು ಬಂದಿದೆ.

ಬಜೆಟ್ ರೂಪಿಸಿರುವುದು ವಿಶ್ವಬ್ಯಾಂಕ್!

FRA ಎಂಬುದು ತಾನು ಸಾಲ ಕೊಡುವ ರಾಷ್ಟ್ರಗಳ ಆರ್ಥಿಕತೆಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಲು ವಿಶ್ವದೆಲ್ಲೆಡೆ ವಿಶ್ವಬ್ಯಾಂಕ್ ಅನುಸರಿಸುತ್ತಿರುವ ಒಂದು ನವ ವಸಾಹತುಶಾಹಿ ತಂತ್ರ. ಇದರ ಮೂಲ ಉದ್ದೇಶವೇ ಸರ್ಕಾರ ಸಮಾಜ ಕಲ್ಯಾಣ ಕಾರ್ಯಕ್ರಮಗಳ ಮೇಲೆ ಮಾಡುತ್ತಿರುವ ವೆಚ್ಚವನ್ನು ಕಡಿತಗೊಳಿಸುವುದು, ಸರ್ಕಾರದ ಎಲ್ಲಾ ರಂಗಗಳನ್ನು ಖಾಸಗೀಕರಿಸುವುದು, ವಿದೇಶಿ ಬಂಡವಾಳ ಹೂಡಿಕೆಗೆ ಸೂಕ್ತವಾದ ಹಾಗೂ ಲಾಭದಾಯಕವಾದ ವಾತಾವರಣ ಸೃಷ್ಟಿ ಮಾಡುವುದು. ಒಟ್ಟಿನಲ್ಲಿ ಈ ನಾಡಿನ ಸಂಪನ್ಮೂಲಗಳ ಮೇಲೆ ಈ ದೇಶದ ಜನಗಳಿಗಿರುವ ಹಕ್ಕನ್ನು ಕಸಿದು ವಿದೇಶಿ ಬಂಡವಾಳಿಗರ ವಶ ಮಾಡುವ ನವ ವಸಾಹತೀಕರಣ ತಂತ್ರವನ್ನೇ ಈ ಸ್ವದೇಶಿ ದೇಶ ಭಕ್ತರೂ ಮಾಡುತ್ತಿರುವುದು.

ಈ ಕಾಯಿದೆ ಏನು ಹೇಳುತ್ತದೆ?

ಈ ಕಾಯಿದೆ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಕರ್ನಾಟಕದ ಆಯವ್ಯಯದಲ್ಲಿ ರೆವಿನ್ಯೂ ಕೊರತೆಯನ್ನು ಮುಂದಿನ ಮೂರು ವರ್ಷಗಳಲ್ಲಿ ಸೊನ್ನೆಗೂ, ವಿತ್ತೀಯ ಕೊರತೆಯನ್ನು ಕರ್ನಾಟಕದ ಒಟ್ಟಾರೆ ರಾಜ್ಯ ಉತ್ಪನ್ನದ (KSDP) ಶೇ. ಮೂರಕ್ಕೆ ಇಳಿಸುವುದನ್ನು ಕಡ್ಡಾಯ ಮಾಡುತ್ತದೆ. ವಿತ್ತೀಯ ಕೊರತೆ ಮತ್ತು ರೆವಿನ್ಯು ಕೊರತೆ ಎಂದರೇನು? ಮತ್ತು ಅದನ್ನು ಇಳಿಸುವುದು ಅಂದರೇನು? ಒಟ್ಟಾರೆ ನಮ್ಮ ಆದಾಯದ ಮೂಲಗಳಿಂದ ನಮಗೆ ದೊರಕುವ ಆದಾಯ ಹಾಗೂ ವೆಚ್ಚಗಳ ನಡುವಿನ ವ್ಯತ್ಯಾಸವನ್ನು ವಿತ್ತೀಯ ಕೊರತೆಯೆಂದೂ, ನಮ್ಮ ತೆರಿಗೆ ಹಾಗೂ ಬಂಡವಾಳ ಮೂಲದ ಆದಾಯಗಳಿಗೂ ಮತ್ತು ನಮ್ಮ ರೆವಿನ್ಯು ಸಂಭಂದಿತ ಅಂದರೆ ಸರ್ಕಾರದ ದಿನವಹಿ ವೆಚ್ಚಗಳಿಗೂ ಇರುವ ವ್ಯತ್ಯಾಸವನ್ನು ರೆವಿನ್ಯು ಕೊರತೆಯೆಂದು ಕರೆಯಲಾಗುತ್ತದೆ. ಈಗ ಆ ಕೊರತೆಯನ್ನು ಇಳಿಸುವುದೆಂದರೆ ಸರ್ಕಾರ ಒಂದೋ ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳಬೇಕು ಅಥವಾ ತನ್ನ ವೆಚ್ಚಗಳನ್ನು ಕಡಿಮೆ ಮಾಡಿಕೊಳ್ಳಬೇಕು. ಅಷ್ಟು ಮಾತ್ರವಲ್ಲ, ಇದನ್ನು ಹೇಗೆ ಜಾರಿಗೆ ತರಲಾಗುತ್ತಿದೆ ಎಂಬ ಬಗ್ಗೆ ಪ್ರತಿ ವರ್ಷ **MTFP-Mid Term Fiscal Plan** ಅಂದರೆ ಮಧ್ಯಂತರ ವಿತ್ತೀಯ ಯೋಜನೆಯನ್ನು ಪ್ರಕಟಿಸುತ್ತಿರಬೇಕು. ಈ ಮಧ್ಯಂತರ ಯೋಜನೆಯಲ್ಲಿ ಈ ಕೊರತೆಗಳನ್ನು ಇಳಿಸಲು ಯಾವಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ವಿಶ್ವಬ್ಯಾಂಕ್ ಕಡ್ಡಾಯ ಮಾಡಿದೆಯೋ ಅವೆಲ್ಲವನ್ನು ಹೇಗೆ ತೆಗೆದುಕೊಳ್ಳಲಾಗುತ್ತಿದೆ ಎಂಬ ಬಗ್ಗೆ ವರದಿಗಳನ್ನು ಮಂಡಿಸಬೇಕು. ವಾಸ್ತವಾಗಿ ಶಾಸನಸಭೆಯಲ್ಲಿ ಹಣಕಾಸು ಮಂತ್ರಿ ಮಂಡಿಸುವ ಬಜೆಟ್ಟಿಗಿಂತ ಇದೇ ಅಸಲಿ ಬಜೆಟ್ಟಾಗಿರುತ್ತದೆ!



MTFP ಎಂಬ ಅಸಲೀ ಬಜೆಟ್

ಈ ಮೊದಲೇ ಹೇಳಿದಂತೆ ರೆವೆನ್ಯು ಕೊರತೆಯನ್ನು ಸೊನ್ನೆಗೂ ಹಾಗೂ ವಿತ್ತೀಯ ಕೊರತೆಯನ್ನು ಶೆ.3ಕ್ಕೂ ಇಳಿಸಬೇಕೆಂಬುದು ಇದರ ಗುರಿ. ಅದನ್ನು ಸಾಧಿಸಲು ಅದು ಕಡ್ಡಾಯ ಮಾಡುವ ಎಲ್ಲಾ ಕ್ರಮಗಳು ಬಡ ಜನತೆಯಿಂದ ಮತ್ತು ಶ್ರೀ ಸಾಮಾನ್ಯರಿಂದ ಇನ್ನೂ ಹೆಚ್ಚು ತೆರಿಗೆ ಹೇಗೆ ಸುಲಿಯಬಹುದೆಂಬುದೂ ಮತ್ತು ಈಗಿರುವ ಸಂಪನ್ಮೂಲಗಳನ್ನು ಹೇಗೆ ಸ್ಥಳೀಯ ಮತ್ತು ವಿದೇಶಿ ಕಂಪನಿಗಳ ಪರ ಮಾಡಬಹುದೆಂಬುದೂ ಆಗಿರುತ್ತದೆ.

ಈ **MTFP** ಯಲ್ಲಿ ವಿತ್ತೀಯ ಕೊರತೆ ಹಾಗೂ ರೆವಿನ್ಯೂ ಕೊರತೆಯನ್ನು ಕಡಿಮೆ ಮಾಡಿಕೊಳ್ಳಲು *ತೆರಿಗೆ ವ್ಯಾಪ್ತಿಯಲ್ಲಿ ಮತ್ತು ಸಂಗ್ರಹಣದಲ್ಲಿ ಹೆಚ್ಚಳ, ತೆರಿಗೆ ಪ್ರಮಾಣ ಹೆಚ್ಚಳ, ತೆರಿಗೆಂತೇತರ(ಬಳಕೆದಾರರ ಶುಲ್ಕದರ ಇತ್ಯಾದಿ) ಆದಾಯದ ಹೆಚ್ಚಳ, ಸರ್ಕಾರಿ ಉದ್ಯಮಗಳಿಗೆ ಬಜೆಟ್ ಬೆಂಬಲದ ಕಡಿತ, ವಿದ್ಯುತ್ತಿಗೆ ಕೊಡುತ್ತಿರುವ ಸಬ್ಸಿಡಿ ಹಿಂತೆಗೆತ ಮತ್ತು ವಿದ್ಯುತ್ ದರವನ್ನು ಉತ್ಪಾದನಾ ವೆಚ್ಚಕ್ಕೆ ಸರಿದೂಗಿಸುವುದು, ಪಡಿತರಕ್ಕೆ ಕೊಡುತ್ತಿರುವ ಸಬ್ಸಿಡಿಯನ್ನು ಹಿಂತೆಗೆದುಕೊಳ್ಳುವುದು* ಹಾಗೂ ಇದೇ ಬಗೆಯ ಹತ್ತು ಹಲವು ಕ್ರಮಗಳನ್ನು ಕಡ್ಡಾಯ ಮಾಡಿದೆ.

ಇದೇ ಅಸಲೀ ಬಜೆಟ್. ಯಡ್ಡಿ ಮಾಡಿದ್ದು ಭಾಷಣ ಮಾತ್ರ. ಅದರ ಸ್ಕ್ರಿಪ್ಟ್ ಬರೆದಿದ್ದು ವಿಶ್ವಬ್ಯಾಂಕು. ಈ ಬಜೆಟ್ಟಿನಲ್ಲಿ ನೀಡಲಾಗಿರುವ ಹುಸಿ ಸೋಗಲಾಡಿ ಭರವಸೆಗಳ ಹಿಂದೆ ವಿಶ್ವಬ್ಯಾಂಕಿನ ಆದೇಶದ ಕರಿನೆರಳಿದೆ. ಹಾಗೂ ಆಳಕ್ಕೆ ಹೊಕ್ಕು ನೋಡಿದರೆ ಈ ಕುತಂತ್ರ ಎದ್ದು ಕಾಣುತ್ತದೆ.

ಭಾಷಣ ಯಡ್ಡಿಯದು- ಸ್ಕ್ರಿಪ್ಟು ವಿಶ್ವಬ್ಯಾಂಕಿನದು:

ಬಜೆಟ್ ಭಾಷಣದ ಪ್ರಾರಂಭದಲ್ಲೇ ಹಣಕಾಸು ಮಂತ್ರಿ ಯಡಿಯೂರಪ್ಪನವರು ತಮ್ಮ ಸರ್ಕಾರ ಕಡ್ಡಾಯವಾಗಿ **FRA** ಗೆ ಒಳಪಟ್ಟಿರುತ್ತದೆಂದೂ **MTFP** ಕಡ್ಡಾಯ ಮಾಡಿರುವ ಎಲ್ಲಾ ನೀತಿಗಳನ್ನು ಕಡ್ಡಾಯವಾಗಿ ಜಾರಿಗೆ ತರುತ್ತದೆಂದೂ ಭರವಸೆ ನೀಡಿಯೇ ಮುಂದಕ್ಕೆ ಹೋಗಿದ್ದರು. ಅದಲ್ಲದೇ ಈ ಬಾರಿ ಕರ್ನಾಟಕದ ಯೋಜನಾ ವೆಚ್ಚದಲ್ಲಿ ಹೆಚ್ಚುವರಿಯಾಗಿ 2000 ಕೋಟಿಗೂ ಹೆಚ್ಚು ಹಣ ಸಿಕ್ಕಿರುವುದರಿಂದ ಮತ್ತು ವಿತ್ತೀಯ ಶಿಸ್ತು(?) ಪಾಲನೆ ಮಾಡಿರುವುದರಿಂದ ಕೇಂದ್ರದಿಂದ 300ಕೋಟಿಗೂ ಹೆಚ್ಚು ಹಣ ಬಹುಮಾನದ ರೂಪದಲ್ಲಿ ಸಿಕ್ಕಿರುವುದರಿಂದಲೂ ಹಣಕಾಸು ಮಂತ್ರಿಗಳು ಹೆಚ್ಚುವರಿ ಕರಭಾರ ಹಾಕಬೇಕಾದ ರಾಜಕೀಯ ಸಂಕಷ್ಟದಿಂದ ತಪ್ಪಿಸಿಕೊಂಡಿದ್ದಾರೆ. ಅಲ್ಲದೇ ಅಬ್ಕಾರಿ ವಲಯಕ್ಕೆ ವ್ಯಾಪಾರದ ವಿಸ್ತರಣೆ ಮತ್ತು ದರ ಹೆಚ್ಚಳಕ್ಕೆ ಕೊಟ್ಟಿರುವ ಅವಕಾಶಗಳಿಂದಾಗಿಯೂ, ಅದರಿಂದಾಗಿ ಜನ ಹೆಚ್ಚೆಚ್ಚು ಕುಡಿದು ಸರ್ಕಾರದ ಬೊಕ್ಕಸ ತುಂಬಿಸುತ್ತಿರುವುದರಿಂದಲೂ ಕರ ಸಂಗ್ರಹಣೆ ಹೆಚ್ಚಾಗಿರುವ "ಅನುಕೂಲ ಪರಿಸ್ಥಿತಿಯಲ್ಲಿ" ಸರ್ಕಾರವಿದೆ. ಆದರೂ ರೈತರಿಗೆ , ನಗರದ ಬಡವರಿಗೆ ದಕ್ಕಿರುವುದು ಭಾಷಣದ ಉಗುಳು ಮಾತ್ರ.

ಉದಾಹರಣೆಗೆ 50 ವರ್ಷಗಳ ನಂತರ ಭಾರತ ಸರ್ಕಾರ 2000ನೇ ಇಸವಿಯಲ್ಲಿ ಎರಡನೇ ಹಸಿರು ಕ್ರಾಂತಿಯ ಹೆಸರಿನಲ್ಲಿ ಹೊಸ ಕೃಷಿ ನೀತಿಯನ್ನು ಪರಿಚಯಿಸಿತು. ಅದನ್ನು ರೂಪಿಸಿದ್ದು ಅಮೆರಿಕದ ದೈತ್ಯ ಕೃಷಿ ಕಂಪನಿಗಳ ಸಾಕುಕೂಸಾಗಿರುವ ಮೆಕೆನ್ಸಿ ಎಂಬ ಕನ್ಸಲ್ಟೆನ್ಸಿ ಸಂಸ್ಥೆಯೇ ಎಂಬುದನ್ನು ಬದಿಗಿಟ್ಟು ನೋಡಿದರೂ ಅದು ಭಾರತದ ರೈತರಿಗೆ, ಅದರಲ್ಲೂ ಸಣ್ಣ ಹಾಗು ಅತಿಸಣ್ಣ ರೈತರಿಗೆ ಮತ್ತು ಕೃಷಿಕೂಲಿಗಳಿಗೆ ಮತ್ತು ಒಟ್ಟಾರೆ ಕೃಷಿ ವಲಯಕ್ಕೆ ಏನು ಭವಿಷ್ಯ ಖಾತರಿ ಮಾಡುತ್ತದೆ ಎಂಬುದು ನಿಜವಾದ ಭಾರತದ ಬಗ್ಗೆ ಕಾಳಜಿ ಇರುವ ನಿಜವಾದ ದೇಶಭಕ್ತರೆಲ್ಲಾ ತಲೆ ಕೆಡಿಸಿಕೊಳ್ಳಲೇ ಬೇಕಾದ ವಿಷಯ. ದೇಶದ ಪ್ರಧಾನಿ ಮನಮೋಹನ್ ಸಿಂಗರೇ ಮೆಕೆನ್ಸಿ ಸಂಸ್ಥೆಗೆ ಸ್ವಾತಂತ್ರ್ಯೋತ್ಸವದ ಮರುದಿನ ಕೊಟ್ಟ ಸಂದರ್ಶನದಲ್ಲಿ ಹೇಳಿದಂತೆ "ಸಣ್ಣ ಹಾಗೂ ಅತಿ ಸಣ್ಣ ರೈತರು ಕೃಷಿ ಕ್ಷೇತ್ರದಿಂದ ಹೊರಬರಬೇಕು. ಹಾಗೂ ಕೃಷಿಯಲ್ಲಿ ಕಾರ್ಪೋರೇಟ್ ಫಾರ್ಮಿಂಗ್ ಮತ್ತು ಕಂಟ್ರಾಕ್ಟ್ ಫಾರ್ಮಿಂಗ್‌ಗೆ ಅವಕಾಶ ಮಾಡಿಕೊಡಬೇಕು. ಕೃಷಿಯಲ್ಲಿ ಆ ರೀತಿ ಕಾರ್ಪೋರೇಟಿಕರಣ ಮಾಡುವಾಗ ಸ್ವದೇಶಿ ಮತ್ತು ವಿದೇಶಿ ಎಂದು ತಾರತಮ್ಯ ಮಾಡಬಾರದು. ವಿದೇಶಿ ದೈತ್ಯ ಕೃಷಿ ಕಂಪನಿಗಳಿಗೂ ಸ್ವದೇಶಿ ಕೃಷಿಯಲ್ಲಿ ಅವಕಾಶ ಮಾಡಿಕೊಡಬೇಕು. ಹಾಗೂ ಅದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಅಂದರೆ ಗ್ರಾಮೀಣ ವಿದ್ಯುತ್, ದೊಡ್ಡ ನೀರಾವರಿ ಸೌಲಭ್ಯ ಇತ್ಯಾದಿಗಳನ್ನು ಕಲ್ಪಿಸಿಕೊಡಬೇಕು." ಈ ನೀತಿಯಿಂದಾಗಿ ಈ ದೇಶದ ಗ್ರಾಮೀಣ ಪ್ರದೇಶದ ಶೇ.80ರಷ್ಟಾಗುವ ಸಣ್ಣ ಹಾಗೂ ಅತಿ ಸಣ್ಣ ರೈತರ ಮೇಲಾಗುವ ಪರಿಣಾಮಗಳೇನೆಂಬುದು ಸ್ಪಷ್ಟವೇ ಇದೆ.

ರೈತಪುತ್ರ ಯಡಿಯೂರಪ್ಪನವರು ಮಂಡಿಸಿರುವ ರೈತಪರ ಬಜೆಟ್ಟಿನಲ್ಲಿ ಹಾಗಿದ್ದಲ್ಲಿ ಯಾವ ನೀತಿಗಳಿವೆ?

ಕೃಷಿಗೆ ಸಂಬಂಧಪಟ್ಟಂತೆ ಯಡಿಯೂರಪ್ಪನವರ ನೀತಿ ಬಜೆಟ್ಟಿನ ಪ್ರಾರಂಭದಲ್ಲಿ ಸ್ಪಷ್ಟವಾಗುತ್ತದೆ. *"ಜಾಗತೀಕರಣದ ಪ್ರಭಾವವನ್ನು ಎದುರಿಸಲು ಕೃಷಿಯ ಪುನರ್ ರಚನೆ ಮತ್ತು ಆಧುನೀಕರಣ, ಕೃಷಿಯಲ್ಲಿ ಸ್ಪರ್ಧಾತ್ಮಕತೆ ಹೆಚ್ಚಿಸಲು ಟ್ರಾಕ್ಟರ್‌ಗಳನ್ನು ಸುಲಭ ದರದಲ್ಲಿ ಒದಗಿಸಲು ಪ್ರತಿ ಜಿಲ್ಲೆಗೆ ಸಹಾಯಧನ ಒದಗಿಸಲು 30ಕೋಟಿ ಹಾಗೂ ಕೃಷಿ ಮತ್ತು ತೋಟಗಾರಿಕೆಯ ಉತ್ಪನ್ನಗಳ ರಫ್ತು ಮಾರುಕಟ್ಟೆ ಹೆಚ್ಚಿಸಲು ಕರ್ನಾಟಕ ಕೃಷಿ ಉತ್ಪನ್ನ ರಫ್ತು ಮಾರುಕಟ್ಟೆ ಸ್ಥಾಪನೆ ಹಾಗೂ ಕಂಪನಿಗಳನ್ನು ಹೊರತುಪಡಿಸಿ ವ್ಯಕ್ತಿಗಳ ಮೇಲೆ ಕೃಷಿ ಆದಾಯ ಕರ ರದ್ದು."* ಇವು ಕೃಷಿ ಕ್ಷೇತ್ರದಲ್ಲಿ ಮಾಡಲಾಗಿರುವ ಹೊಸ ಪ್ರಸ್ತಾಪಗಳು. ಇವೆಲ್ಲವೂ ಗ್ರಾಮೀಣ ಪ್ರದೇಶದಲ್ಲಿ ಯಾವ ವರ್ಗಕ್ಕೆ ಅನುಕೂಲವಾಗುತ್ತದೆ ಎಂಬುದು ಯಾರಿಗಾದರೂ ಅರ್ಥವಾಗುವ ವಿಷಯ.

ಇನ್ನುಳಿದಂತೆ ಸಣ್ಣ ಹಾಗೂ ಅತಿ ಸಣ್ಣ ರೈತರಿಗಾಗಿ ಬಜೆಟ್ಟಿನ ಪ್ರಸ್ತಾಪಗಳೇನು?

ಮೊದಲನೆಯದಾಗಿ ಕೃಷಿಗಾಗಿ ಎಂದು ಒತ್ತುವರಿ ಮಾಡಿಕೊಂಡಿರುವ ಭೂಮಿಯನ್ನು ಸಕ್ರಮಗೊಳಿಸುವುದಾಗಿ ಬಜೆಟ್ ಹೇಳುತ್ತದೆ. ಆದರೆ ಅದರ ಮರು ವಾಕ್ಯದಲ್ಲೇ *"ಗೋಮಾಳ ಹಾಗೂ ಅರಣ್ಯ ಭೂಮಿಯನ್ನು ಹೊರತುಪಡಿಸಿ"* ಎಂದು ಸ್ಪಷ್ಟಪಡಿಸುತ್ತದೆ. ಆದರೆ ಸಣ್ಣ ಹಾಗೂ ಅತಿಸಣ್ಣ ರೈತರು, ದಲಿತರು ಒತ್ತುವರಿ ಮಾಡಿಕೊಂಡಿರುವುದರ ಅತಿಹೆಚ್ಚು ಭಾಗ ಗೋಮಾಳ ಹಾಗೂ ಅರಣ್ಯ ಭೂಮಿಗಳೇ ಆಗಿವೆ. ಹಾಗಿದ್ದಲ್ಲಿ ಸಕ್ರಮ ಎಂಬ ಭರವಸೆ ಮೋಸದ ಭರವಸೆ ಮಾತ್ರವೇ ಎಂದಾಯಿತು.

ಎರಡನೆಯದಾಗಿ ರೈತರಿಗಾಗಿ ಶೆ.4ರ ದರದಲ್ಲಿ ಸಾಲದ ವಿಷಯ. ಇದರಲ್ಲೂ ಎರಡು ವಿಷಯಗಳು ಸ್ಪಷ್ಟವಾದರೆ ಮಾತ್ರ ಈ ಯೋಜನೆಯ ಅಸಲಿ ಸ್ವರೂಪ ಅರ್ಥವಾಗುತ್ತದೆ. ಇದು ಕೋ-ಆಪರೇಟೀವ್ ಬ್ಯಾಂಕ್‌ಗಳಿಂದ ಪಡೆಯುತ್ತಿರುವ ಸಾಲದ ಬಡ್ಡಿಯೇ ವಿನಃ ಕಮರ್ಷಿಯಲ್ ಬ್ಯಾಂಕ್‌ಗಳಿಂದ ಪಡೆದ ಸಾಲದ ಮೇಲಿನ ಬಡ್ಡಿಯಲ್ಲ. ಆದರೆ ಕೋ ಆಪರೇಟೀವ್ ಬ್ಯಾಂಕ್‌ಗಳು ಈ ರೀತಿಯಲ್ಲಿ ಶೇ.4ರ ದರದಲ್ಲಿ ಬಡ್ಡಿ ಕೊಟ್ಟು ಕಾರ್ಯ ನಿರ್ವಹಿಸಲು ಬಜೆಟ್ಟಿನಲ್ಲಿ ಕೊಡಮಾಡಿರುವುದು ಕೇವಲ 400 ಕೋಟಿಗಳು ಮಾತ್ರ. ಇದು ಹಳೆ ಹೊರೆಯನ್ನು ನಿರ್ವಹಿಸಲೂ ಸಾಕಾಗುವುದಿಲ್ಲ, ಒಟ್ಟಾರೆಯಾಗಿ ಶೇ.4ರ ದರದಲ್ಲಿ ಬಡ್ಡಿ ಕೊಟ್ಟೂ ಲಾಭದಾಯಕವಾಗಿ ಉಳಿಯಲು ಸರ್ಕಾರ 1020ಕೋಟಿ ಕೊಡಬೇಕಾಗುತ್ತದೆ. ಈಗ ಸರ್ಕಾರ ಕೊಟ್ಟಿರುವುದು ಕೇವಲ ಶೇ.40 ರಷ್ಟು ಮಾತ್ರ. ಅಂದರೆ ಇದರ ಫಲಾನುಭವವೂ ಶೇ.40ಕ್ಕಿಂತ ಕಮ್ಮಿಯೆಂದು ತಾನೆ ಅರ್ಥ?

ಮೂರನೆಯದಾಗಿ ರೈತರಿಗೆ ಅತ್ಯಗತ್ಯವಾಗಿ ಬೇಕಾಗಿರುವುದು ಉಚಿತ ಅಥವಾ ರಿಯಾಯಿತಿ ದರದ ವಿದ್ಯುತ್ತು. ಈಗಾಗಲೇ ವಿದ್ಯುತ್ತಿಗೆ ಸಂಬಂಧಪಟ್ಟಂತೆ ವಿಶ್ವಬ್ಯಾಂಕಿನ ನೀತಿಗಳು ಮತ್ತು **FRA, MTFP** ನೀತಿಗಳೇನೆಂದು ನೋಡಿದ್ದೇವೆ. ವಿದ್ಯುತ್ತಿಗೆ ಕೊಡುತ್ತಿರುವ ಸಬ್ಸಿಡಿಯನ್ನು ಹಂತಹಂತವಾಗಿ ಹಿಂತೆಗೆದುಕೊಂಡು ದರವನ್ನು ಉತ್ಪಾದನಾ ವೆಚ್ಚಕ್ಕೆ ಸರಿ ಸಮಾನವಾಗಿ ಮಾಡಬೇಕೆಂಬುದೇ ಅದರ ಮಾರ್ಗದರ್ಶನ. ಈಗ ಬಜೆಟ್ ಏನು ಹೇಳುತ್ತದೆಂದು ನೋಡೋಣ. ವಿದ್ಯುತ್ತಿಗೆ ಸಂಬಂಧಪಟ್ಟಂತೆ ಬಡವರಿಗೆ ಕೊಡುತ್ತಿದ್ದ ಕುಟೀರ ಜ್ಯೋತಿ ಮತ್ತು ಭಾಗ್ಯ ಜ್ಯೋತಿ ವಿದ್ಯುತ್ತಿನಲ್ಲಿ ಬರಬೇಕಿದ್ದ 82ಕೋಟಿ ರೂ. ಬಾಕಿಯನ್ನು ಸರ್ಕಾರ ಮನ್ನಾ ಮಾಡುವುದಾಗಿ ಘೋಷಿಸಿದೆ. ಆದರೆ ಅಷ್ಟೇ ಅಲ್ಲ, ಮರು ವಾಕ್ಯದಲ್ಲೇ ಇದು ಈ ವರ್ಷಕ್ಕೆ ಮಾತ್ರ. ಮುಂದಿನ ವರ್ಷದಿಂದ ಕೇವಲ 18 ಯುನಿಟ್ಟುಗಳನ್ನು ಮಾತ್ರ ಉಚಿತವಾಗಿ ಕೊಡಲಾಗುವುದು, ಮಿಕ್ಕಿದ್ದಕ್ಕೆ ವಿದ್ಯುತ್ ನಿಯಂತ್ರಣಾ ಪ್ರಾಧಿಕಾರ ವಿಧಿಸುವ ದರವನ್ನೇ ವಿಧಿಸಲಾಗುವುದು ಎಂದು ಸ್ಪಷ್ಟ ಪಡಿಸಲಾಗಿದೆ. ಅದೇ ರೀತಿ ನೀರಾವರಿ ವಿದ್ಯುತ್ತಿಗೂ ಸಂಬಂಧಪಟ್ಟಂತೆ ಇನ್ನೂ ಮೀಟರೀಕರಣವಾಗಿಲ್ಲದ ಸಂಪರ್ಕಗಳನ್ನು ಸಕ್ರಮಗೊಳಿಸಲಾಗುವುದು. ಆದರೆ ಅದಕ್ಕೆ 10,000ರೂ. ಅನ್ನು ರೈತ ತೆರಬೇಕು. ಅದೇ ರೀತಿ ವಿದ್ಯುತ್ ಸಂಪರ್ಕ ಕಲ್ಪಿಸಲು ಲೈನ್ ಕನೆಕ್ಷನ್ ಶುಲ್ಕವನ್ನು ಸರ್ಕಾರ ಭರಿಸುತ್ತದೆ. ಆದರೆ ಕಡ್ಡಾಯವಾಗಿ ಮುಂದೆ ರೈತ ಮೀಟರ್ ಹಾಕಿಸಿಕೊಂಡು ಪ್ರಾಧಿಕಾರ ವಿಧಿಸುವ ಸ್ಲಾಬಿಗೆ ತಕ್ಕಂತೆ ಅಥವಾ ಬಳಕೆಯ ದರಕ್ಕೆ ತಕ್ಕಂತೆ ಶುಲ್ಕ ತುಂಬಬೇಕು. ಅದೇ ರೀತಿ ಹಣಕಾಸು ತೊಂದರೆಯಿಂದ ಬಳಲುತ್ತಿರುವ ಗ್ರಾಮ ಪಂಚಾಯತಿಗಳು ವಿದ್ಯುತ್ ಮಂಡಳಿಗೆ ಬಾಕಿ ತುಂಬಲು ಆಗಿಲ್ಲ, ಒಂದು ಗ್ರಾಮಪರ ಸರ್ಕಾರ ಅದನ್ನು ತಾನೇ ತುಂಬಿಕೊಡಲು

ಕಡೆಗೂ ಅನಂತಮೂರ್ತಿ ಮಾಹಿತಿ ಸಿಕ್ತು ಸಾರ್!

ರಾಜ್ಯಸಭಾ ಚುನಾವಣೆಗೆ ಅನಂತಮೂರ್ತಿ ಸ್ಪರ್ಧಿಯಾದ ಕೂಡಲೇ ಸಾಹಿತ್ಯ ಮತ್ತು ರಾಜಕಾರಣದ ಆಖಾಡದಲ್ಲಿ ಹಾವು ರಂಗೇರಿದೆಯಂತಲ್ಲಾ! ಅನಂತ ಮೂರ್ತಿಯನ್ನು ಅನಂತ ಕಾಲದಿಂದಲೂ ವಿರೋಧಿಸಿ ಕೊಂಡು ಬಂದಿರುವ ಜವರೇಗೌಡರು, "ಈ ಅನಂತಮೂರ್ತಿ ಸ್ಪರ್ಧೆ ಏತಕ್ಕಾಗಿ ಎಂದು ಬಿಡಿಸಿ ಹೇಳಬೇಕಿಲ್ಲ" ಎಂದವರು ಅದನ್ನು ಬಾಯಿಬಿಟ್ಟು ಹೇಳಿದರಂತಲ್ಲಾ, ಇದರಿಂದ ಕೆರಳಿದ ಅನಂತು, "ಜಾತಿವಾದ ಮೂಲವ್ಯಾಧಿಯಿದ್ದಂತೆ. ಇಂತಹ ಮೂಲ ವ್ಯಾಧಿಗೆ ಜವರೇಗೌಡರು ತುತ್ತಾಗಿ ಈಚೆಗೆ ಗುಣಮುಖ ರಾಗಿದ್ದಾರೆಂದು ಭಾವಿಸಿದ್ದೆ. ಅದು ಸುಳ್ಳು ಎಂಬುದು ಗೊತ್ತಾಯ್ತು. ಇನ್ನು ಚಂಪಾ ವೃಶ್ಚಿಕ ರಾಶಿಯವನು, ಆ ಚೇಳಿಗೆ ಕುಟುಕುವುದರಲ್ಲೇ ಆನಂದ" ಎಂದುಬಿಟ್ಟ ರಂತಲ್ಲಾ, ಇದರಿಂದ ಕೆರಳಿದ ಚಂಪಾ ಅನಂತಮೂರ್ತಿ ಯನ್ನು ನಿಜವಾಗಿಯೂ ಕುಟುಕಲು ಹೋಗಿ ಡಾಲರ್ ಕಾಲನಿಯಲ್ಲಿ ಮನೆ ಪತ್ತೆಹಚ್ಚಲಾಗದೆ, ವಾಪಸು ಬಂದು, "ನಾನು ಚೇಳು ಹೌದು, ಆದರೆ ಅನಂತಮೂರ್ತಿ ಸರ್ಪ" ಎಂದರಂತಲ್ಲಾ, ಶಿವನ ಶಿಖೆಯಲ್ಲಿರುವ ಸರ್ಪನಿಗೆ ಅನಂತಮೂರ್ತಿ ಹೋಲಿಸಿದ್ದಕ್ಕೆ ಸಿಟ್ಟುಗೊಂಡ ಜವರೇಗೌಡರು "ಅನಂತಮೂರ್ತಿ ಹುಚ್ಚುನಾಯಿ" ಎಂದು ಚಂಪಾನಿಂದ ಚಪ್ಪಾಳೆಗಿಟ್ಟಿಸಲಾಗಿ, ಸಾಹಿತ್ಯಾಸಕ್ತರು ಸಾಹಿತಿಗಳ ತಲೆ ಕೆಟ್ಟಿರುವ ಬಗ್ಗೆ ಮಾತನಾಡಿಕೊಳ್ಳುತ್ತಾ ಮನರಂಜನೆ ತೆಗೆದುಕೊಳ್ಳು ತ್ತಿದ್ದಾರಂತಲ್ಲಾ, ಥೂತ್ತೇರಿ!

* * * * * * *

ಕನ್ನಡದ ಗೌರವಾನ್ವಿತ ಸಾಯಿತಿಗಳು ಜಗಳಕ್ಕೆ ಬಿದ್ದು ಕಚ್ಚಾಡಿಕೊಂಡು ಹಾವು, ಚೇಳು, ಹುಚ್ಚುನಾಯಿ ಎಂಬ ನಾಮಾಂಕಿತದಿಂದ ಗುರುತಿಸಿ ಕೊಂಡು ಕಿಚಾಯಿಸುತ್ತಿರುವುದನ್ನು ಕೇಳಿಸಿಕೊಂಡ ಕನ್ನಡದ ಕಿಡಿಗೇಡಿಗಳು, ಉಳಿದ ಸಾಹಿತಿಗಳಿಗೂ ಪ್ರಾಣಿ ಪಕ್ಷಿಗಳ ಹೆಸರಿಟ್ಟುಕೊಂಡು ಖುಷಿಪಡುತ್ತಿದ್ದಾ ರಂತಲ್ಲಾ. ಈ ಪೈಕಿ ಮರುಳಸಿದ್ಧಪ್ಪ ನಂದಿ, ಕಣವಿ ಹಸು, ಸಿ.ಪಿ.ಕೆ. ಹೈನಾ, ಎಚ್ಚೆಸ್ಕೆ ಹೆಣ್ಣುಗೋತಿ, ಲಕ್ಕಪ್ಪಗೌಡ ಕುರಿ, ಸುಮತೀಂದ್ರ ನಾಡಿಗ್ ಮುಶಿಯ, ಜಿ.ಕೆ. ಗೋವಿಂದರಾವ್ ಒಂಟೆ, ಅಗ್ರಹಾರ ಟಗರು, ಶೂದ್ರ ಶ್ರೀನಿವಾಸ್ ಗಡ್ಡದ ಹೋತ, ಕಪ್ಪಣ್ಣ ಚಿಂಪಾಂಜಿ, ಕಿರಂ ಕಾಂಗರು, ಗೊರುಚ ಮೊಸಳೆ ಇತ್ಯಾದಿ ಹೆಸರುಗಳಲ್ಲದೆ ಮಹಿಳಾ ಬರಹಗಾರ್ತಿಯರಾದ ಪ್ರತಿಭಾನಂದಕುಮಾರ್ ಗೂಬೆ, ರೇಖಾರಾಣಿ ಗೌಜಲಕ್ಕಿ, ಗೌರಿ ಲಂಕೇಶ್ ಗುಬ್ಬಚ್ಚಿ, ವೈದೇಹಿ ನಾಟಿಕೋಳಿ, ಲಲಿತಾ ನಾಯಕ್ ಫಾರಂಕೋಳಿ, ಸಾರಾ ಅಬೂಬಕರ್ ಟರ್ಕಿ ಕೋಳಿ, ಬಾನು ಮುಷ್ತಾಕ್ ಬಾತು ಕೋಳಿ ಎಂದು ಗುರುತಿಸುತ್ತಲೇ ಪತ್ರಿಕೆಯೊಳಗಿರುವ ಸಾಹಿತಿಗಳನ್ನು ಆಲ್‌ಸೇಷಿಯನ್, ಮುಧೋಳ, ಪಮೋರಿಯನ್, ಗ್ರೇಹೌಂಡ್, ಬುಲ್ ಡಾಗ್, ಪಗಡಾಗ್ ಮತ್ತು ಇನ್ನುಳಿದವುಕ್ಕೆ ಸಾರಾಸಗಟು ಪತ್ರವಳಿ ನಾಯಿಗಳೆಂದು ಕರೆದರೆ ಹೇಗೆಂದು ಯೋಚಿಸುತ್ತಿದ್ದಾರಂತಲ್ಲಾ, ಥೂತ್ತೇರಿ!

* * * * * * *

ನಮ್ಮ ಜನಪ್ರಿಯ ಮುಖ್ಯಮಂತ್ರಿಗಳು, "ಯಾರ್ರಿ ಅನಂತಮೂರ್ತಿ" ಎಂದು ಸಾರ್ವಜನಿಕರೆದುರು ಸಿಟ್ಟಾಗಿ ಕೇಳಿದ ಪ್ರಶ್ನೆಗೆ ಸರಿಯಾದ ಮಾಹಿತಿಯೊದಗಿಸಬೇಕೆಂದು ತೀರ್ಮಾನಿಸಿ, ಫೋನ್ ಮಾಡಿದರೆ ಸಿಕ್ಕೇಬಿಡಬೇಕೆ?

"ಹಲೋ, ಕುಮಾರಣ್ಣ ನಾನು ಯಾಹೂ."


"ಏನೇಳ್ರಿ ಯಾಹೂ?"

"ಅನಂತಮೂರ್ತಿ ಬಗ್ಗೆ ಮಾಹಿತಿ ಸಂಗ್ರಹಿಸಿದ್ದೀನಿ."

"ಹೇಳ್ರಿ."

"ಬರಕತ್ತಿರಾ?"

"ಇಲ್ಲ ಅಂಗೆ ಹೇಳ್ರಿ."



"ಅವುರು ಬಾಮುಣ್ರು ಪೈಕಿ ಸಾರ್."

"ಅದು ಗೊತ್ತು, ಜವರೇಗೌಡ್ರೆ ಹೇಳಿದ್ರು ಕಂಣ್ರಿ."

"ಅದ್ರು ಕ್ರಿಶ್ಚಿಯನ್ರ ಮದಿವಾಗ್ಯವುರೆ."

"ಹೌದೇನ್ರಿ?"

"ಹೌದು, ಅದೇ ಒಂದು ದೊಡ್ಡ ಕತೆ."

"ಏನು ಕತೆ?"

"ಅನಂತಮೂರ್ತಿ ಹಾಸನದಲ್ಲಿ ಲಚ್ಚರರ್ ಆಗಿದ್ದಾಗ ಒಂದುಡುಗಿನ ಲವ್ ಮಾಡಿದ್ರು. ಆಗ ಹೊಳೆರಸೀಪುರದ ಕಡೆ ಹುಡುಗ್ರು ಹಳೆಗೋಡೆ ಮೇಲೆಲ್ಲಾ ಅವರಿಬ್ಬರ ಹೆಸರು ಬರದಿದ್ರು. ಈಗ್ಲೂ ಹೋಗಿ ನೋಡಿದ್ರೆ ಎಸ್ತರ್ ಅನಂತಮೂರ್ತಿ ಯತ್ತಗೋದ್ರು ಅನ್ನೊ ಬರವಣಿಗೆ ನೋಡಬವುದು."

"ಅಂಗಾದ್ರೆ ಕಿಡ್ನಾಪ್ ಕೇಸಾಗಿತ್ತ?"

"ಇಲ್ಲ, ಇಬ್ಬರು ಮನೆ ಕಡೆಯವರೂ ಒಪ್ಪಿಗೊಂಡ ಮೇಲೆ ಮದುವೆ ಆಯ್ತು, ಎರಡು ಮಕ್ಕಳು ಹುಟ್ಟಿದೊ. ಅಂತೂ ಚೆನ್ನಾಗವುರೆ."

"ಇದನ್ನೇಳಕೆ ಫೋನ್ ಮಾಡಿದ್ದರೇನ್ರಿ. ಅವುರು ಶಾಸ್ತ್ರಿ ಬಾಸೆಗೆ ಏನು ಮಾಡ್ಯವುರೆ. ಕನ್ನಡ ಬಾಸೆಗೆ ಏನು ಮಾಡ್ಯವುರೆ ಅದೇಳ್ರಿ?"

"ಕನ್ನಡ ಭಾಷೆನ ಇಂಗ್ಲಿಷ್ ಮಟ್ಟದಲ್ಲೇ ಬರದವುರೆ."

"ಅಂಗಾದ್ರೆ ಅದೆಂಗೆ ಕನ್ನಡದ ಸೇವೆ ಆಯ್ತದೆ?"

"ಈ ಪ್ರಪಂಚದ ದಾರ್ಶನಿಕರು, ಲೇಖಕರು, ರಾಜಕಾರಣಿಗಳು ಏನು ಹೇಳ್ಯವುರೆ, ಬರದವುರೆ ಅಂತ ಕನ್ನಡಿಗರಿಗೆಲ್ಲಾ ತಿಳಿಸಿಕೊಟ್ಟವುರೆ."

"ನಾನಿದುವರಿಗೂ ಕೇಳಿಲ್ಲವಲ್ಲಾ, ಎಲ್ಲಿ ತಿಳಿಸಿದ್ರೂ?"

"ಆಮೇಲೆ ಮಾರ್ಕ್ಸ್‌ವಾದಿಗಳೇನೇಳ್ತರೆ, ಸೋಷಲಿಸ್ಟರು ಅಂದ್ರೆ ಯಾರು, ಅವುರು ಹ್ಯಂಗಿರಬೇಕು ಅಂತ ಚೆನ್ನಾಗಿ ತಿಳಿಸಿಕೊಟ್ಟವ್ರೆ. ಅವುರ ವ್ಯಾಲೆ ಲೋಹಿಯಾ, ಗೋಪಾಲಗೌಡ್ರು ಪ್ರಭಾವನೂ ಆಗ್ಯದೆ ಸಾರ್."

"ಗೋಪಾಲಗೌಡ್ರು ಅಂದ್ರೆ ಅವು ರ್ಯಾರು?"

"ಶಾಂತವೇರಿ ಗೋಪಾಲಗೌಡ್ರು ಸಾರ್. ತೀರ್ಥಹಳ್ಳಿ ಹೊಸನಗರದಿಂದ ಗೆದ್ದು ಶಾಸಕರಾಗಿದ್ರು. ಎರಡು ಮೂರು ಸತಿ ಗೆದ್ದು ಶಾಸಕರಾಗಿದ್ರೂ ಒಂದು ಮನೆ ಇರಲಿಲ್ಲ."

"ನಿಜವೇನ್ರಿ?"

"ಚಿನ್ನಾಂಬಿಕೆಯಾಣೆ ಸಾರ್. ಊರಲ್ಲಿ ಒಂದು ಗುಡಿಸಲಿತ್ತು, ಅವುರು ತೀರಿ ಕೊಂಡಾಗ ಬಾಡಿಗೆ ಮನೆಲಿದ್ರು. ಈ ಅನಂತಮೂರ್ತಿ ಅವುರ ಜೊತೆಲೂ ಇದ್ರು. ಪಟೇಲ್ರ ಜ್ವತೆಲಂತೂ ಯಾವಾಗ್ಲು ಇರೋರು."

"ಯಾವ ಪಟೇಲ್ರು?"

"ಅದೆ ಜೆ.ಎಚ್. ಪಟೇಲ್ರು. ನಿಮ್ಮ ಜೊತೆ ಮಹಿಮಾ ಪಟೇಲ್ ಅಂತ ಅವುರಲ್ಲಾ, ಅವುರಪ್ಪನ ಜೊತೆ ಇದ್ರು. ಇಬ್ರೂ ಯಂಗಿದ್ರು ಅಂದ್ರೆ, ಇವುರೋದಿದ್ದ ಅವುರಿಗೇಳೋರು ಅವುರೋದಿದ್ದ ಇವುರಿಗೇಳೋರು. ಒಂದೇ ಬಾಟ್ಲಿ ಯರಡು ಗ್ಲಾಸು, ಒಂದೇ ತಟ್ಟೆ ಯರಡು ಕೈಯಿ, ಒಂದೇ ಬೀಡ ಯರಡು ಬಾಯಿ ಅಂಗಿದ್ರು."

"ಅಂಗಾದ್ರೆ ಕುಡುದು ತಿಂದು ಮಜ ಮಾಡತಿದ್ರೇನ್ರಿ?"

"ಪಟೇಲ್ರ ಜೊತೆಲಿದ್ದೋರು ಯಾರು ಕುಡದಿಲ್ಲ ಹೇಳಿ ಸಾರ್."

"ಹೋಗ್ಲಿ, ಪಟೇಲ್ರ ಜೊತೆ ಇದ್ದ ಮೇಲೆ ನಮ್ಮ ಜೊತೆ ಇರಬೇಕು ತಾನೆ. ಆ ಸಿದ್ಧರಾಮಯ್ಯನ ಜೊತೆ ಯಾಕ್ರಿ ಗುರುತಿಸಿಕೊಬೇಕು?"

"ನಿಮ್ಮ ಜೊತೆ ಇರಕ್ಕೆ ಇಷ್ಟ ಇದೆ ಸಾರ್. ನಿಮ್ಮತ್ರ ಮಾತಾಡಕ್ಕೆ ವಿಷಯನೇ ಇಲವಂತೆ. ಇನ್ನು ದ್ಯಾವೇಗೌಡರತ್ರ ಮಾತಾಡ ಕ್ರಂತೂ ಯಾವ ಸುದ್ದಿನೂ ಇಲವಂತೆ?"

"ಮಾತಾಡದು ಬೇಡ ಸುಮ್ನ ನಿರಕ್ಕೇನಂತೆ?"

"ನೀವೀಗ ಚುನಾವಣೆಲಿ ಗೆಲ್ಲಿಸಿ ಕೊಟ್ರೆ ಇರಿ ಅಂತ ಹೇಳಬವುದು. ಆದ್ರು ನೀವ್ರ ಬಿಜೆಪಿ ಜೊತೆ ಇರದು ಅವರಿಗಿಷ್ಟ ಇಲ್ಲ ಅನ್ನಂಗವುರೆ."

"ಬಿಜೆಪಿಗಳೇನು ಮಾಡ್ತರೆ ಇವುರಿಗೆ?"

"ಅವುರು ಅಪಾಯಕಾರಿಗಳಂತೆ."

"ರಿ ಅವುರೇನು ಅಪಾಯಕಾರಿಗಳ್ರಿ? ನಾನವುರ ಜೊತೆಲಿ ಇದ್ದೀನಿ. ಅಂಥೋರಲ್ಲ ಕಂಡ್ರಿ."

"ಅದು ನಿಮಗೆ ಗೊತ್ತಾಗದಿಲವಂತೆ ಸಾರ್. ಅವುರೊಂಥರಾ ನುಶಿರೋಗಿದ್ದಂಗೆ. ತಲೆ ಇದ್ದೊರಿಗೆ ಮಾತ್ರ ಅವುರೇನು ಅಂತ ಗೊತ್ತಾಯ್ತದಂತೆ."

"ರಿ ತಲಿಯೆಲ್ಲಾ ಮಾತಾಡಬೇಡಿ, ಆ ಅನಂತ ಮೂರ್ತಿ ನಮ್ಮ ಎಂ.ಪಿ. ಪ್ರಕಾಶ್‌ಗಿಂತ ಬುದ್ಧಿವಂತರೇನ್ರಿ? ಪ್ರಕಾಶ್ ಬಿಜೆಪಿ ಒಳ್ಳೆ ಪಾರ್ಟಿ; ನಾವು ಅವುರ ಜೊತೆ ಇರದು ಏನೂ ತಪ್ಪಿಲ್ಲ ಅಂದವುರೆ. ಅಂತ ಪ್ರಕಾಶ್‌ಗಿಂತ ಅನಂತಮೂರ್ತಿ ಬುದ್ಧಿವಂತನೆ?"

"ಪ್ರಕಾಶ್ ಅನಂತಮೂರ್ತಿ ಅಭಿಮಾನಿ ಸಾರ್."

"ಅಭಿಮಾನಿ ಅಂದಾಕ್ಷಣ ಬುದ್ಧಿ ಕಡಿಮೆ ಅನ್ನಕ್ಕಾಗುತ್ತೇನ್ರಿ?"

"ಪ್ರಕಾಶ್ ನಿಮ್ಮ ಜೆಡಿಎಸ್ ಪಾಲಿಗೆ ಅನಂತ ಮೂರ್ತಿ ತರನೆ ಇರಬವುದು. ಆದ್ರೆ ಅನಂತಮೂರ್ತಿ ಪ್ರಪಂಚದ ಮಟ್ಟದಲ್ಲಿ ಕನ್ನಡ ಸಾಹಿತ್ಯನ ಪ್ರತಿನಿಧಿಸ್ತರಂತೆ ಬೇಕಾದಷ್ಟು ಕತೆ, ಕಾದಂಬರಿ ಪ್ರಬಂಧ ಬರದವುರೆ."

"ಬರಿಯದೇನು ದೊಡ್ಡ ವಿಷಯ ಅಲ್ಲ ಕಂಡ್ರಿ. ಚಂದ್ರಶೇಖರ ಪಾಟೀಲ್ರು ಬರಿತರೆ. ನಮ್ಮ ನಲ್ಲೂರು ಪ್ರಸಾದನೂ ಬರಿತನೆ."

"ಅನಂತಮೂರ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ."

"ಪ್ರಶಸ್ತಿಗಳ ಬಗ್ಗೆ ನನಿಗೊತ್ತಿಲ್ವೇನ್ರಿ? ಒಂದು ವರ್ಷಕ್ಕೆ ಎಷ್ಟು ರಾಜ್ಯೋತ್ಸವ ಪ್ರಶಸ್ತಿ ಕೊಡ್ತಿವಿ ಗೊತ್ತ? ನಾನೆ ಎಷ್ಟೋ ಶಿಫಾರಸ್ ಮಾಡಿದ್ದೀನಿ. ಈಗ್ಲು ನಮ್ಮಪ್ಪ ಮನುಸು ಮಾಡಿದ್ರೆ ಆ ಜ್ಞಾನಪೀಠ ಪ್ರಶಸ್ತಿ ತಂದು ಜವರೇಗೌಡ್ರಿಗೆ ಕೊಡ್ತರೆ. ಜ್ಞಾನಪೀಠ ತಗೊಂಡಿದ್ದೀನಿ ಅಂತ ಬಂದು ನಿಂತುಬಿಟ್ರೆ ಗೆಲ್ಲಸಕ್ಕಾಗಲ್ಲ, ಇದು ಹಣಕಾಸಿನ ವ್ಯವಹಾರದ ಚುನಾವಣೆ, ಗೊತ್ತ?"

"ಥೂತ್ತೇರಿ!!!"

-ಯಾಹೂ

...ರ್ಮಾನ ಮಾಡಬೇಕಿತ್ತು, ಆದರೆ ಈ ಬಜೆಟ್ ವಿದ್ಯುತ್ ...ಕ ತುಂಬುವ ಪಂಚಾಯತಿಗೆ ಶೇ.25ರಷ್ಟು ...ರಿಯಾಯಿತಿ ಕೊಡುವುದನ್ನು ಮಾತ್ರ ಹೇಳುತ್ತದೆ. ...ದರೆ ಪರೋಕ್ಷವಾಗಿ ಸರ್ಕಾರ ಇನ್ನು ಮುಂದೆ ...ಪಂಚಾಯತಿಗಳಿಗೆ ಈ ಬಾಬತ್ತಿನಲ್ಲಿ ಯಾವುದೇ ಸಹಾಯ ...ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಘೋಷಿಸಿದೆ.

ಆದೇ ರೀತಿ ಗ್ರಾಮೀಣ ಹಾಗೂ ನಗರ ಬಡವರಿಗೆ ...ರಿಯಾಯಿತಿ ದರದಲ್ಲಿ ಆಹಾರ ಪೂರೈಕೆ ಮಾಡುವುದು ...ಜನಪರ ಸರ್ಕಾರದ ಗುರಿಗಳಲ್ಲಿ ಒಂದೆಂದು ...ಸರ್ಕಾರ ಪ್ರಮಾಣ ವಚನ ಸ್ವೀಕರಿಸಿದಾಗಿನಿಂದಲೂ ...ಘೋಷಿಸುತ್ತಲೇ ಬಂದಿದೆ. ಆದರೆ FRA, MTFP ...ಗಳು ಸರ್ಕಾರ ಆಹಾರಕ್ಕೆ ಕೊಡುತ್ತಿರುವ ಸಬ್ಸಿಡಿಯನ್ನು ...ಹಂತವಾಗಿ ಹಿಂತೆಗೆದುಕೊಳ್ಳಬೇಕೆಂದು ಕಡ್ಡಾಯ ...ಸುತ್ತವೆ. ಈ ಬಜೆಟ್ಟೂ "ಆಹಾರ ಧಾನ್ಯದ ವಿತರಣೆಗೆ ...ವರ್ಷ ಮಾತ್ರ, 720 ಕೋಟಿಗಳನ್ನು" ಎತ್ತಿ ...ಟ್ಟಿರುವಾಗಿ ಹೇಳಿದೆ. ಮುಂದಿನ ವರ್ಷಗಳಲ್ಲಿ ಸರ್ಕಾರ ...ರೀತಿ ಸಹಾಯ ಧನ ಕೊಡುವುದನ್ನು ನಿಲ್ಲಿಸಿ ...ವಾದ ಬಡವರಿಗೆ ಮಾತ್ರ ಸಹಾಯ ಧನ ...ಡುವುದಾಗಿ ಹೇಳುತ್ತಾ ಪರೋಕ್ಷವಾಗಿ ಆಹಾರ ...ಸಬ್ಸಿಡಿ ರದ್ದತಿಯ ಮುನ್ಸೂಚನೆ ಕೊಟ್ಟಿದೆ.

...ಇವೆಲ್ಲಾ ಹುಳುಕನ್ನು ಮುಚ್ಚಿಟ್ಟುಕೊಳ್ಳಲೆಂದೇ ಕೆಲವು ...ಜನಪ್ರಿಯ ಆದರೆ ಬರೀ ಬುರುಡೆ ಯೋಜನೆಗಳನ್ನು ...ರ ಪ್ರಕಟಿಸಿದೆ.

ಗ್ರಾಮೀಣ ಪ್ರತಿಭಾವಂತರಿಗೆ ವೃತ್ತಿ ಶಿಕ್ಷಣದ ಶುಲ್ಕವನ್ನು ಭರಿಸುವ ಭರವಸೆ ಅದರಲ್ಲಿ ಒಂದು. ಆದರೆ ಅದಕ್ಕೆ ಎರಡು ಶರತ್ತುಗಳಿವೆ. ಮೊದಲನೆಯದಾಗಿ ಅದು ದಕ್ಕುವುದು ಬಡತನ ರೇಖೆಗಳಿಗಿಂತ ಕೆಳಗಿರುವ ಕುಟುಂಬಗಳಿಗೆ ಮಾತ್ರ. ಎರಡನೆಯದಾಗಿ ಹೆಣ್ಣು ಮಗುವಿಗೆ ಮಾತ್ರ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಎಷ್ಟು ಕುಟುಂಬಗಳು ತಮ್ಮ ಮನೆಯ ಹೆಣ್ಣು ಮಕ್ಕಳನ್ನು ಹೈಸ್ಕೂಲಿಗೆ ಕಳಿಸುತ್ತಿದ್ದಾರೆಂದು ಮೊದಲು ಅರ್ಥವಾದರೆ ಈ ಯೋಜನೆಯ ಬುರುಡೆಯೇನೆಂದು ಗೊತ್ತಾಗುತ್ತದೆ.

ಗುಪ್ತ ಕೇಸರೀಕರಣದ ಅಜೆಂಡಾಗಳು:

ಇಷ್ಟೆಲ್ಲಾ ಒಂದು ಕಡೆಯಾದರೆ ಈ ಬಜೆಟ್ಟಿನ ಮುಖಾಂತರ ಬಿ.ಜೆ.ಪಿ ಪಕ್ಷ ತನ್ನ ಹಿಡನ್ ಹಿಂದೂ ಅಜೆಂಡಾವನ್ನು ಆಚರಣೆಗೆ ತಂದಿರುವುದು. ಯಾರೂ ಹೆಚ್ಚಾಗಿ ಗಮನಿಸದ, ಗಮನಿಸಿದರೂ ಅದರ ಬಗ್ಗೆ ಆಕ್ಷೇಪಣೆ ತೆಗೆಯದ ಈ ಬಗೆಯ ಹಲವು ಯೋಜನೆಗಳು ಬಜೆಟ್ಟಿನಲ್ಲಿ ಪ್ರಸ್ತಾಪಿತವಾಗಿದೆ. ದೇಶೀಯ ಗೋತಳಿಯ ಸಂರಕ್ಷಣೆಯ ವಿಷಯ ಅದರಲ್ಲಿ ಒಂದು. ತನ್ನಂತೆ ತಾನೆ ಇದು ಒಂದು ಆಕ್ಷೇಪಣೀಯ ವಿಷಯವೇನೂ ಅಲ್ಲ. ಆದರೆ ಒಂದು ಕೋಮುವಾದಿ ಪಕ್ಷ ತನ್ನ ಅನುಚರ ಸಂಘಟನೆಗಳಿಗೆ ಅನುಕೂಲವಾಗುವ ಸ್ವರೂಪದಲ್ಲೇ ಅಂತಹ ಯೋಜನೆ ಯನ್ನು ರೂಪಿಸಿದಾಗ ಮತ್ತು ಅದಕ್ಕೆ ಪ್ರಭುತ್ವದ ಹಣವನ್ನು ದುರುಪಯೋಗ ಮಾಡಿಕೊಳ್ಳಲು ಶಾಸನಬದ್ಧ ಅಧಿಕಾರ ಕೊಟ್ಟಾಗ ಅದು ಅತ್ಯಂತ ಆತಂಕದ ಸನ್ನಿವೇಶವನ್ನು ಹುಟ್ಟುಹಾಕುತ್ತದೆ.

ಬಜೆಟ್ಟಿನಲ್ಲಿ ದೇಶೀ ಗೋತಳಿ ಸಂರಕ್ಷಣೆ ಮಾಡು ವವರಿಗೆ ಪ್ರತಿ ಜಿಲ್ಲೆಯಲ್ಲಿ 20 ಎಕರೆ ಜಮೀನನ್ನು ಮತ್ತು ಅದಕ್ಕಾಗಿ ಬಜೆಟ್ಟಿನಲ್ಲಿ 2.7ಕೋಟಿ ಹಣವನ್ನು ಎತ್ತಿಡಲಾಗಿದೆ. ಈಗಾಗಲೇ ಮಂಗಳೂರಿನಲ್ಲಿ ಮುಸ್ಲಿಮರ ಮಾಂಸ ವ್ಯಾಪಾರಕ್ಕೆ ಅಡ್ಡಿ ಉಂಟು ಮಾಡುವ ಸಲುವಾ ಗಿಯೇ ಮಾಂಸ ಸರಬರಾಜಿನ ಕಾಂಟ್ರಾಕ್ಟನ್ನು ಭಜರಂಗದಳ ದವರೇ ಪಡೆದಿರುವುದನ್ನು ನೋಡಿದರೆ ಗೋತಳಿ ಸಂರಕ್ಷಣೆ ಮತ್ತು ಅದರ ಶಾಸನಬದ್ಧ ಅಧಿಕಾರಗಳು ಯಾರ ಕೈಗೆ ಹೋಗುತ್ತದೆ ಮತ್ತು ಆದರಿಂದ ಇನ್ನು ಏನೇನು ಅನಾಹುತವಾಗಬಹುದೆಂಬುದು ಸ್ವಸ್ಥ ಮನಸ್ಸಿನ ಯಾರಿಗಾದರೂ ಅರ್ಥವಾಗುತ್ತದೆ.

ಆದೇ ರೀತಿ "ಕರ್ನಾಟಕ ಸಂಸ್ಕೃತಿ ಸಂರಕ್ಷಣಾ ಕೇಂದ್ರ" ವೆಂಬ ಒಂದು ಹೊಸ ಪ್ರಸ್ತಾಪವಿದೆ. ಕರ್ನಾಟಕ ಸಂಸ್ಕೃತಿಯ ಹೆಸರಲ್ಲಿ ಇಲ್ಲಿ ರಕ್ಷಿಸಲು ಯೋಜಿಸಿರುವುದು ಪ್ರಾಚೀನ ದೇವಸ್ಥಾನಗಳನ್ನು ಮಾತ್ರ. ಅಂದರೆ ಇಲ್ಲಿ ಕರ್ನಾಟಕ ಸಂಸ್ಕೃತಿಯೆಂದರೆ ಕೇವಲ ಹಿಂದೂಗಳ ಸಂಸ್ಕೃತಿಯೆಂಬ ಸಂಘ ಪರಿವಾರದ ಹಿಂದೂತ್ವವಾದಿ ಯೋಜನೆಗಳಿಗೆ ಶಾಸನಾತ್ಮಕ ಒಪ್ಪಿಗೆಯನ್ನು, ಸರ್ಕಾರಿ ಬೊಕ್ಕಸದಿಂದ ಹಣಕಾಸನ್ನು ಪಡೆದುಕೊಳ್ಳುವ ಸಂಚಿದೆ. ಅಷ್ಟು ಮಾತ್ರವಲ್ಲದೆ ಆ ಪಟ್ಟಿಯಲ್ಲಿ ವೈದಿಕ ಸಂಸ್ಕೃತಿಯಿಂದ ಗಾವುದ ದೂರ ಉಳಿದಿದ್ದ ಅಕ್ಕ, ಅಲ್ಲಮರನ್ನು ನಂದಿಯ ಭೋಗ ನಂಜುಂಡನನ್ನು ವೈದಿಕರನ್ನಾಗಿಸುವ ಹುನ್ನಾರವಿದೆ.

ಈ ಹಿಂದೆ ಎಂದೂ ಕೊಡದಿದ್ದಷ್ಟು ಪ್ರಾಮುಖ್ಯತೆ ಯನ್ನು ಸರ್ಕಾರಿ ಬೊಕ್ಕಸದಿಂದ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ವೆಚ್ಚ ಮಾಡಲಾಗುತ್ತಿದೆ. ಹಜ್ ಯಾತ್ರೆಗೆ ಪ್ರತಿಯಾಗಿ ಹಿಂದೂಗಳ ಮಾನಸ ಸರೋವರದ ಯಾತ್ರೆಗೂ ಹಣಕಾಸು ಕೊಡಬೇಕೆಂಬ ಸಂಘ ಪರಿವಾರದ ಹಳೇ ಬೇಡಿಕೆಯನ್ನು ಈ ಬಜೆಟ್ಟಿನ ಮೂಲಕ ಬಿ.ಜೆ.ಪಿ ಯ ಯಡಿಯೂರಪ್ಪನವರು ಪೂರೈಸಿದ್ದಾರೆ.


ಇದರ ಜೊತೆಗೆ ಸುವರ್ಣ ಸಾಂಸ್ಕೃತಿಕ ಸಮುಚ್ಚಯದ ಹೆಸರಲ್ಲೂ ಸುವರ್ಣ ಕರ್ನಾಟಕದ ಹೆಸರಲ್ಲೂ ಉಡುಪಿ ಮತ್ತು ಮಡಿಕೇರಿಯಲ್ಲಿ ನಿರ್ಮಾಣಗಳನ್ನು ಮಾಡಲು ಉದ್ದೇಶಿಸಲಾಗಿದೆ. ಆ ಮೂಲಕ ಭಾರತವೆಂದರೆ ಮಾತ್ರವಲ್ಲ ಕರ್ನಾಟಕವೆಂದರೆ ಮತ್ತು ಕರ್ನಾಟಕದ ಸಂಸ್ಕೃತಿಯೆಂದರೆ ಹಿಂದೂ ಸಂಸ್ಕೃತಿಯೆಂದೇ ತಮ್ಮ ಹಿಡನ್ ಹಿಂದೂ ಅಜೆಂಡಾದ ಭಾಗವಾಗಿ ನಿರ್ವಚಿಸುವ ಕೆಲಸವನ್ನು ಪ್ರಾರಂಭಿಸಿದ್ದಾರೆ.

ಇದನ್ನು ಕರ್ನಾಟಕದ ಅಭಿವೃದ್ಧಿ ಎಂದು ಕರೆಯುವುದಾದರೆ ಆ ಕರ್ನಾಟಕದ ಮಹಾನ್ ಜನತೆ ಯಾರು ಎಂಬುದೇ ದೊಡ್ಡ ಪ್ರಶ್ನೆಯಲ್ಲವೇ?

ಕೇಸರೀಕರಣ ಮತ್ತು ನವ ಉದಾರೀಕರಣ ಎರಡೂ ಒಟ್ಟು ಸೇರಿರುವ ಈ ಸರ್ಕಾರ ಕರ್ನಾಟಕದ ಜನತೆಯ ಪಾಲಿಗೆ ಬರಲಿರುವ ದಿನಗಳಲ್ಲಿ ದೊಡ್ಡ ಸವಾಲಾಗಲಿದೆ.

ದೆವ್ವಗಳಿಗೆ ನಾನು ಅಂಜುವುದಿಲ್ಲ; ಏಕೆಂದರೇ ಮಾನವರೇ ಅದಕ್ಕಿಂತ ದೊಡ್ಡ ದೆವ್ವಗಳು. - ದೆಸ್ಮಂಡ್ ಹೇಯ್ಸ್





ಕಬಡ್ಡಿ ಬಾಬುವಿನ ಬಂಗಲೆ

ಈತ ಮುಖ್ಯಮಂತ್ರಿಯ ಬೇನಾಮಿ?

ಕಬ್ಬಡಿ ಬಾಬು ಮೇಲೆ ಇನ್‌ಕಂ ಟ್ಯಾಕ್ಸ್ ರೇಡ್!

ರಾ. ಸೋಮನಾಥ್

ಇದು ಗೌಡರ ದ್ರೋಹಕ್ಕೆ ಕಾಂಗ್ರೆಸ್ ಕೊಟ್ಟ ತಿರುಗೇಟಾ?

ಕಬಡ್ಡಿ ಬಾಬು ಮನೆ ಮೇಲೆ ಇನ್‌ಕಂ ಟ್ಯಾಕ್ಸ್ ರೇಡಾಯಿತೆಂಬ ಸುದ್ದಿ ಹಬ್ಬುತ್ತಿದ್ದಂತೆ ಹುಟ್ಟಿಕೊಂಡ ಪ್ರಶ್ನೆಯಿದು. ಕುಮಾರಣ್ಣ ಕೊಟ್ಟು ಮಡಗಿದ್ದ ಎರಡೂವರೆ ಕೋಟಿ ಕೂಡಾ ಜಪ್ತಾಯಿತೆಂಬುದು ಒಂದು ಸುದ್ದಿ. ಬೇನಾಮಿಯಾಗಿ ಕುಮಾರಣ್ಣ ಖರೀದಿಸಿದ್ದ ಬಿಡದಿ-ಭೈರಮಂಗಲ ರಸ್ತೆಯ ನೂರೆಕರೆ, ಕುಂಬಳಹಳ್ಳಿಯ ಹಕ್ಕಿಪಿಕ್ಕಿ ಕಾಲೋನಿ ಬಳಿಯ ನೂರಾಮೂವತ್ತು ಎಕರೆ ಮತ್ತು ಜಿಗಣಿ, ಆನೇಕಲ್ ಚಂದಾಪುರದ ನೂರೈವತ್ತೆಕರೆ ಜಮೀನಿನ ದಾಖಲೆ ಪತ್ರಗಳನ್ನೆಲ್ಲ ಇನ್‌ಕಂ ಟ್ಯಾಕ್ಸ್ ಅಧಿಕಾರಿಗಳು ಹೊತ್ತೊಯ್ದರಂತೆ ಎಂಬುದು ಮತ್ತೊಂದು ಸುದ್ದಿ!

ಹೀಗೆ ಹೊಗೆಯಾಡುತ್ತಿರುವ ಸುದ್ದಿಗಳ ಪೈಕಿ ತೀರ ವಿಲಕ್ಷಣ ವದಂತಿಯೇನೆಂದರೆ ಮೇಡಂ ಸೋನಿಯಾ ಕೈಗೆ ಕುಮಾರಣ್ಣನ ಅಕ್ರಮ ಸಂಪತ್ತಿನ ವಿವರ ಕೊಟ್ಟು ಕಬಡ್ಡಿ ಬಾಬು ಮನೆ ಮೇಲೆ ರೈಡು ಮಾಡಿಸಿದ್ದು ಗೌಡರ ಕಡುವೈರಿಗಳಾದ ಎಸ್ಸೆಂ ಕೃಷ್ಣ ಮತ್ತು ಡಿಕೇಶಿ!

ಇದೇ ಮಾರ್ಚ್ ಹನ್ನೊಂದರ ಬೆಳಿಗ್ಗೆ ಇನ್‌ಕಂ ಟ್ಯಾಕ್ಸ್ ವಿಜಿಲೆನ್ಸ್‌ನ ಅಸಿಸ್ಟೆಂಟ್ ಅಧಿಕಾರಿಗಳು ಮೊದಲು ಉತ್ತರಹಳ್ಳಿಯ ಕಬಡ್ಡಿ ಬಾಬು ಮನೆ ಮೇಲೆ ರೇಡು ಬಿದ್ದಿದ್ದಾರೆ. ರೇಡಿಗೆ ಬಂದವರ ಮೇಲೆ ಗಲಾಟೆಗಿಳಿದ ಕಬಡ್ಡಿಬಾಬುವಿನ ಬಲಗೈ ಬಂಟ ಜೈರಾಮ್ ರೆಡ್ಡಿ ಎಂಬ ನೆಲಗಳ್ಳನಿಗೆ ಇನ್‌ಕಂ ಟ್ಯಾಕ್ಸ್ ಅಧಿಕಾರಿಗಳಿಂದಲೇ ಸಮಾ ಒದೆಬಿದ್ದಿದೆ. ಉತ್ತರಹಳ್ಳಿ ರಸ್ತೆಯ ದರ್ಶನ್ ಕೇಬಲ್ ನೆಟ್‌ವರ್ಕ್ಸ್‌ನ ಕಛೇರಿ, ರಹೇಜಾ ಅಪಾರ್ಟ್‌ಮೆಂಟ್‌ನಲ್ಲಿ ಕಬಡ್ಡಿ ಬಾಬು ಪತ್ನಿ ಭಾರತೀಯ ಹೆಸರಿಗಿದ್ದ ಫ್ಲಾಟು, ಆತನ ತಮ್ಮ ನರೇಂದ್ರನ ಬಂಗಲೆ, ಹೀಗೆ ಕಬಡ್ಡಿ ಬಾಬುವಿನ ಸಮಸ್ತ ಅಡ್ಡೆಗಳೆಲ್ಲವೂ ರೇಡಿಗೆ ತುತ್ತಾಗಿವೆ.

ಬಹುಶಃ ಇತ್ತೀಚಿನ ದಿನಗಳಲ್ಲಿ ಇಷ್ಟೊಂದು ವ್ಯವಸ್ಥಿತವಾದ ಮತ್ತೊಂದು ಇನ್‌ಕಂ ಟ್ಯಾಕ್ಸ್ ರೇಡ್ ನಡೆದಿದ್ದಿಲ್ಲ, ನೋ ಡೌಟ್..... ಕಬಡ್ಡಿ ಬಾಬು ಕುಮಾರಣ್ಣನ ಅತ್ಯಂತ ನಂಬಿಕಸ್ತ ಬಂಟ. ಹಾಗಿಲ್ಲದಿದ್ದರೆ ದಾಳಿಗೆಂದೇ ದೆಹಲಿಯ ಐಬಿಯ ವಿಶೇಷ ತಂಡ ಬರುತ್ತಿರಲಿಲ್ಲ!



ಇದು ಗೌಡರನ್ನು ಬಗ್ಗು ಬಡಿಯುವುದಕ್ಕೆಂದೇ ನಡೆದ ದಾಳಿ ಎಂಬುದಕ್ಕೆ ಒಂದಲ್ಲ ಹತ್ತಾರು ಕಾರಣಗಳಿವೆ. ಬಹುಶಃ ಕುಮಾರಣ್ಣನನ್ನು ಹತ್ತಿರದಿಂದ ಬಲ್ಲ ಯಾರಿಗಾದರೂ ದಾಳಿಯ ಉದ್ದೇಶ ಅರ್ಥವಾಗಿರಬೇಕು.

ಕಬಡ್ಡಿ ಬಾಬು ಮುಖ್ಯಮಂತ್ರಿ ಕುಮಾರಣ್ಣನ ಬೇನಾಮಿ ಎಂಬುದು ಇನ್‌ಕಂ ಟ್ಯಾಕ್ಸ್‌ನವರ ಬಲವಾದ ನಂಬಿಕೆಯಾಗಿತ್ತು. ನ್ಯಾಷನಲ್ ಟ್ರಾವಲ್ಸ್‌ನ ಜಮೀರ್, ಮಾಗಡಿ ಬಾಲಕೃಷ್ಣ, ಎಮ್ಮೆಲ್ಸಿ ಪುಟ್ಟಣ್ಣ, ಡೀಲರುಗಳಾದ ಆರಾಧ್ಯ, ಗೋಪಾಲ ಮುಂತಾದವರೆಲ್ಲ ಕುಮಾರಣ್ಣನ ಸಂಜೆ ಖಯಾಲಿಗಳ ಸಾಥಿಗಳಾದರೆ ವ್ಯವಹಾರಿಕವಾಗಿ ಕುಮಾರಣ್ಣ ನಂಬುವುದು ಇಬ್ಬರನ್ನು ಮಾತ್ರ. ಈ ಪೈಕಿ ಒಬ್ಬ ಪತ್ನಿ ಅನಿತಕ್ಕನ ತಮ್ಮ ಕೃಷ್ಣನಾದರೆ ಮತ್ತೊಬ್ಬನೇ ಕಬಡ್ಡಿ ಬಾಬು.

1994ರಲ್ಲಿ ದೇವೇಗೌಡರು ಮುಖ್ಯಮಂತ್ರಿಯಾಗುವ ತನಕ ಕಬಡ್ಡಿಬಾಬು ಯಕಶ್ಚಿತ್ ಕಾಂಗ್ರೆಸ್ ಕಾರ್ಯಕರ್ತನಾಗಿದ್ದ. ಈತನ ತಂದೆ ಗಾರೆಕಾಲುವೆ ವೆಂಕಟಸ್ವಾಮಿ. ಹಿಂದ್ಯಾವತ್ತೋ ವಿಧಾನ ಸೌಧ ಕಟ್ಟುವಾಗ ಆಂಧ್ರದ ಚಿತ್ತೂರಿನಿಂದ ಗಾರೆ ಕೆಲಸಕ್ಕೆಂದು ಬಂದಿದ್ದ ವೆಂಕಟಸ್ವಾಮಿ ಕ್ರಮೇಣ ತ್ಯಾಗರಾಜನಗರದಲ್ಲಿ ನೆಲೆಗೊಂಡ. ಆತನ ನಾಲ್ವರು ಮಕ್ಕಳ ಪೈಕಿ ಕಬಡ್ಡಿ ಬಾಬು ಮೂರನೆಯವನು. ದೊಡ್ಡಣ್ಣ ಕನ್ನಯ್ಯನಾಯ್ಡು ಇವತ್ತಿಗೂ ಅನಾಥಶ್ರಮದ ಹೆಸರಲ್ಲಿ ಚಂದಾ ಎತ್ತುವ ಫುಲ್‌ಟೈಂ ಸಮಾಜ ಸೇವಕ. ಎರಡನೇ ಅಣ್ಣ ಚಿನ್ನಪ್ಪನಾಯ್ಡು ಬೆಂಗಳೂರಿನ ನಟೋರಿಯಸ್ ಲ್ಯಾಂಡ್ ಗ್ರ್ಯಾಬರ್. ಕೊನೆಯವನಾದ ನರೇಂದ್ರನ ಬಗ್ಗೆ ಮಿಕ್ಕೆಲ್ಲರಿಗಿಂತಲೂ ಪೋಲೀಸ್ ಅಧಿಕಾರಿ ಟೈಗರ್ ಅಶೋಕ್ ಕುಮಾರ್‌ಗೆ ಹೆಚ್ಚು ಗೊತ್ತಿದೆ. ಕಬಡ್ಡಿಬಾಬು ಹಾಲೀ ಶಿವಾಜಿನಗರದ ಶಾಸಕ ಕಟ್ಟಾ ಸುಬ್ರಮಣ್ಯ ನಾಯ್ಡು ಮತ್ತು ಪೀಇಎಸ್ ಕಾಲೇಜಿನ ಖದೀಮ ದೊರೆಸ್ವಾಮಿ ನಾಯ್ಡುಗೂ ಸಂಬಂಧಿ.



ಕುಮಾರಸ್ವಾಮಿಗೆ ಅಭಿನಂದನೆಯ ಕಟೌಟ್

ಕಬಡ್ಡಿ ಬಾಬು ಆಲಿಯಾಸ್ ಎಂ.ವಿ. ಪ್ರಸಾದ್ ಬಾಬು ರಾಜ್ಯ ಕಂಡ ಅಪ್ರತಿಮ ಕಬಡ್ಡಿ ಆಟಗಾರ ನಿಜ. ಪ್ರಾರಂಭದಲ್ಲಿ ಯಡಿಯೂರಿನ ನಾಯ್ಡು ಎಂಬಾತನ ವಿಕ್ರಮ್ ಟೀಮ್‌ನಲ್ಲಿದ್ದ ಪ್ರಸಾದ್ ಬಾಬು ಕಬಡ್ಡಿಗೆಂದು ಜಪಾನ್ ತನಕ ಹೋಗಿ ಬಂದ. ದೇವೇಗೌಡರು ಮುಖ್ಯಮಂತ್ರಿಯಾಗುತ್ತಿದ್ದಂತೆ ಗೌಡರ ಆಪ್ತ ವಲಯದಲ್ಲಿದ್ದ ಬಾಂಬ್ ಕೃಷ್ಣಮೂರ್ತಿಯ ಜೊತೆಬಿದ್ದ. ಒಂದಷ್ಟು ದಿನ ಸೆಕೆಂಡ್ಸ್ ಲಿಕ್ಕರ್ ದಂಧೆ ನಡೆಸಿದ. ಬಂದ ದುಡ್ಡಲ್ಲಿ ಉತ್ತರಹಳ್ಳಿ ಮೇನ್ ರಸ್ತೆಯಲ್ಲೊಂದು ದರ್ಶನ್ ಕೇಬಲ್ ನೆಟ್‌ವರ್ಕ್ಸ್ ಪ್ರಾರಂಭಿಸಿದ. 1996ರಲ್ಲಿ ಕುಮಾರಣ್ಣ ಕನಕಪುರ ಲೋಕಸಭಾ ಚುನಾವಣೆಗೆ ನಿಂತಿದ್ದೇ ತಡ ಕಬಡ್ಡಿಬಾಬು ಗೌಡರ ಆಸ್ಥಾನದಲ್ಲಿ ಮಿಂಚಿಬಿಟ್ಟ. ಅವತ್ತು ಇಡೀ ಉತ್ತರಹಳ್ಳಿಯ ಚುನಾವಣೆಗೆಂದು ಕುಮಾರಣ್ಣ ಈತನನ್ನೇ ಹೆಚ್ಚು ಅವಲಂಭಿಸಿದ್ದರು.

ಮುಂದೆ ದೇವೇಗೌಡರು ಪ್ರಧಾನಿಯಾಗುತ್ತಿದ್ದಂತೆ ಕಬಡ್ಡಿಬಾಬುವಿನ ಲಕ್ಕು ಕುದುರಿತು. ಯಾವುದೋ ಕಾಲಕ್ಕೆ ಅಪ್ಪ ವೆಂಕಟಸ್ವಾಮಿ ಸೈಟು ಮಾಡಿ ಮಾರಿದ್ದ ಜಮೀನಿಗೆ ಮತ್ತೆ ಗಂಟುಬಿದ್ದ ಬಾಬು ಸೈಟುದಾರರನ್ನು ಓಡಿಸಿ ತಾನೇ ಆಕ್ರಮಿಸಿಕೊಂಡ. ಬಾಂಬ್ ಕೃಷ್ಣಮೂರ್ತಿಯನ್ನು ಮುಂದಿಟ್ಟುಕೊಂಡು ತನ್ನ ಕೇಬಲ್ ಸಾಮ್ರಾಜ್ಯವನ್ನು ವಿಸ್ತರಿಸಿದ. ಪದ್ಮನಾಭನಗರ, ಗೌಡನಪಾಳ್ಯ, ಚಿಕ್ಕಲ್ಲಸಂದ್ರ, ಮುನೇಶ್ವರನಗರ, ಬ್ಯಾಂಕ್ ಕಾಲೋನಿ, ಪೂರ್ಣಪ್ರಜ್ಞ ಲೇಔಟ್, ಸಾರ್ವಭೌಮನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಇತ್ಯಾದಿ ಏರಿಯಾಗಳನ್ನಾಕ್ರಮಿಸಿದ ಆತನ ದರ್ಶನ್ ಕೇಬಲ್ ನೆಟ್‌ವರ್ಕ್ಸ್ ಕನಕಪುರ ರಸ್ತೆಯ ತಲಘಟ್ಟಪುರದ ತನಕ ವ್ಯಾಪಿಸಿತು.

ಯಾರೂ ನಂಬಲಿಕ್ಕಿಲ್ಲ. ಇವತ್ತು ಬೆಂಗಳೂರಿನ ಅಷ್ಟೂ ಕೇಬಲ್ ದೊರೆ

ಕನ್ನಡ ಕಸ್ತೂರಿ ಮತ್ತು ಕುಮಾರಣ್ಣನ ತಿಜೋರಿ!

ಮಾರ್ಚ್ ಹನ್ನೊಂದರ ಇನ್‌ಕಂ ಟ್ಯಾಕ್ಸ್ ದಾಳಿಗೂ ಕುಮಾರಣ್ಣನ ಕನ್ನಡ ಕಸ್ತೂರಿ ಎಂಬ ಟಿವಿ ಚಾನೆಲ್‌ಗೂ ಸಂಬಂಧವಿದೆಯೆ?

ಮಾಮೂಲಿ ಟೀವಿ ಚಾನೆಲ್ ಒಂದಕ್ಕೆ ಕಮ್ಮಿಯೆಂದರೂ ಐನೂರು ಕೋಟಿಯ ಬಂಡವಾಳ ಬೇಕೇ ಬೇಕು. ಹಾಗೊಮ್ಮೆ ಈಗಾಗಲೇ ರಾಜ್ಯಾದ್ಯಂತ ವ್ಯಾಪಿಸಿರುವ ದರ್ಶನ್ ಕೇಬಲ್ ನೆಟ್‌ವರ್ಕ್ಸ್ ಬಳಸಿಕೊಂಡು ಕುಮಾರಣ್ಣನ ಟೀವಿಯೇನಾದರೂ ಚಾಲ್ತಿಗೆ ಬಂತೆಂದರೆ ಗೌಡರ ಬತ್ತಳಿಕೆಯಲ್ಲಿ ಪ್ರಭಾವೀ ಮೀಡಿಯಾ ಬಂದಂತಾಗುತ್ತದೆ.

ರಾಜಕೀಯವಾಗಿ ಅಪ್ಪ ಮಕ್ಕಳ ಚರಿಷ್ಮಾ ಕೂಡಾ ಹೆಚ್ಚುತ್ತದೆ. ಎಲ್ಲಕ್ಕೂ ಮಿಗಿಲಾಗಿ ಕರ್ನಾಟಕವನ್ನು ಕೊಳ್ಳೆ ಹೊಡೆಯುತ್ತಿರುವ ಸನ್‌ಟೀವಿ ದೊರೆಗಳ ಅರ್ಧ ಆದಾಯಕ್ಕೆ ಕತ್ತರಿ ಬೀಳುತ್ತದೆ. ಸಧ್ಯ ಕೇಂದ್ರ ಪ್ರಸಾರ ಖಾತೆಯಿರುವುದು ಸನ್‌ನೆಟ್‌ವರ್ಕ್ಸ್‌ನ ಧಣಿ ದಯಾನಿಧಿ ಮಾರನ್ ಕೈಯಲ್ಲಿ, ಇನ್‌ಕಂ ಟ್ಯಾಕ್ಸ್ ಇಲಾಖೆಯನ್ನಾಳುವ ಚಿದಂಬರಮ್ ಕೂಡಾ ತಮಿಳರೇ, ಕುಮಾರಣ್ಣನ ತಿಜೋರಿಯ ಮೇಲೆ ರೇಡ್ ನಡೆಯಿತೆಂದರೆ ಸಹಜವಾಗೇ ಕನ್ನಡ ಕಸ್ತೂರಿ ಚಾನಲ್ ಕಣ್ಣು ಮುಚ್ಚಿಕೊಳ್ಳುತ್ತದೆ. ಅಲ್ಲಿಗೆ ಉದಯಟಿವಿಯ ಕಂಟಕ ತಪ್ಪಿದಂತೆಯೇ!

ಇಲ್ಲಿ ಕುಮಾರಣ್ಣನ ತಿಜೋರಿ ಎಂದರೆ ಕಬಡ್ಡಿ ಬಾಬುತಾನೆ? ಈ ಹಿನ್ನೆಲೆಯಲ್ಲೇ ಇನ್‌ಕಂ ಟ್ಯಾಕ್ಸ್ ದಾಳಿ ನಡೆಯಿತೆ?

ರಿಪೋರ್ಟರ್ ಒದೆ ತಿಂದದ್ದು...

ಕಬಡ್ಡಿ ಬಾಬು ಅದೇನು ಮೋಡಿ ಮಾಡಿದ್ದನೋ! ಅವತ್ತು ತನ್ನೆದುರಿಗೇ ಪತ್ರಕರ್ತನೊಬ್ಬನ ಮೇಲೆ ಬಾಬು ಕೈಮಾಡುತ್ತಿದ್ದರೆ ಕುಮಾರಣ್ಣ ನಿಂತು ನೋಡುತ್ತಿದ್ದರು. ಅದು ಇಲ್ಲಿಗೆ ಐದು ವರ್ಷದ ಹಿಂದಿನ ಘಟನೆ. ತಮ್ಮ 'ಗಲಾಟೆ ಅಳಿಯಂದ್ರು' ಚಿತ್ರದ ಬಿಡುಗಡೆ ಪ್ರಯುಕ್ತ ಪತ್ರಕರ್ತರಿಗೆಂದು ಕುಮಾರಣ್ಣ ಪ್ರೆಸ್‌ಕ್ಲಬ್‌ನಲ್ಲಿ ಪಾನಗೋಷ್ಠಿ ಏರ್ಪಡಿಸಿದ್ದರು. ಸಿನಿಮಾ ಪತ್ರಕರ್ತರ ಪೈಕಿ ಹುಟ್ಟಾ ತರಲೆ ಎಂದೇ ಚಾಲ್ತಿಯಲ್ಲಿರುವ ಈ ವರದಿಗಾರ ಕುಡಿದು ಚಿತ್ತಾಗಿ ತನಗೆ ಗೋಡಂಬಿ ಕೊಡಲಿಲ್ಲ ಎಂದು ಕುಮಾರಣ್ಣನ ಮೇಲೇ ಜಗಳಕ್ಕಿಳಿದ. ಕುಮಾರಣ್ಣ ಸಹಿಸಿಕೊಂಡರೂ ಕಬಡ್ಡಿ ಬಾಬು ಸುಮ್ಮನಿರಲಿಲ್ಲ. ತಟ್ಟಾಡುತ್ತಿದ್ದ ವರದಿಗಾರನನ್ನು ಪ್ರೆಸ್‌ಕ್ಲಬ್‌ನ ಕತ್ತಲಿಗೆ ಎಳೆದೊಯ್ದು ಸಮಾ ಬಾರಿಸಿಬಿಟ್ಟ!

ಮುಂದೆ ತನ್ನನ್ನು ಕುಮಾರಣ್ಣನ ಬಳಿ ಕರೆತಂದು ಪರಿಚಯಿಸಿದ ಬಾಂಬ್ ಕೃಷ್ಣಮೂರ್ತಿಗೆ ಕಬಡ್ಡಿಬಾಬು ಬತ್ತಿ ಇಟ್ಟ. ಕುಮಾರಣ್ಣನ ಬಳಿ ಆತ ಸುಳಿಯದಂತೆ ಮಾಡಿದ. ಕುಮಾರಣ್ಣನ ಬಳಿ ಬೇರೆ ಯಾರೂ ಆಪ್ತರಾಗದಂತೆ ನೋಡಿಕೊಂಡ. ಒಂದು ಹಂತದಲ್ಲಿ ಕುಮಾರಣ್ಣನ ಆಪ್ತ ಸಹಾಯಕ ರಂಗಸ್ವಾಮಿಯನ್ನೇ ಹೊರಗಟ್ಟಲು ಬಾಬು ಫಿಟ್ಟಿಂಗ್ ಇಟ್ಟಿದ್ದ. ಆಗ ರಂಗಸ್ವಾಮಿಯನ್ನು ಕಾಪಾಡಿದ್ದು ಅನಿತಕ್ಕ. ಆಸ್ತಿ ಮತ್ತು ವ್ಯಾವಹಾರಿಕ ಪಾಲುದಾರಿಕೆಯಿಲ್ಲದೇ ಕುಮಾರಣ್ಣ ಕಬಡ್ಡಿ ಬಾಬುವನ್ನು ಈ ಪಾಟ ಹಚ್ಚಿಕೊಳ್ಳುವುದು ಸಾಧ್ಯವಿತ್ತೆ?

ಮಾನವ ಎರಡು ರೀತಿಯವನು. ಒಬ್ಬ ಕತ್ತಲಲ್ಲಿ ಎಚ್ಚತ್ತಿರುವವನು, ಮತ್ತೊಬ್ಬ ಬೆಳಕಿನಲ್ಲಿ ನಿದ್ರಿಸುವವನು -ಖಲೀಲ್ ಗಿಬ್ರಾನ್

ಮುಖ್ಯಮಂತ್ರಿಯ ಮಗ ನಿಖಿಲ್ ಗೌಡಾ

ಪುಂಡ ಮಗನ ಪುರಾಣ

ಮುಖ್ಯ-ಅಧಿಕಾರದ ಪಿತ್ತ ನೆತ್ತಿಗೇರಿದರೆ ...ಘಟಿಸಬಹುದೋ ಅವೆಲ್ಲಾ ಹೊಸ ...ದ ಅವತಾರದಲ್ಲಿ ಚಾಲನೆ ಪಡೆದು ...ವೆ.

...ಖಿಲ್ ಗೌಡ ಇದಕ್ಕೊಂದು ಲೇಟೆಸ್ಟ್ ...ಹರಣೆ.

ಮುಖ್ಯಮಂತ್ರಿ ಕುಮಾರಸ್ವಾಮಿಯವರ ...ತ್ರನೀತ. ವಯಸ್ಸು ಇನ್ನೂ ಹದಿನೇಳು. ...ಾಜ್ ಜೈನ್‌ನ 'ಮಹಾವೀರ್ ಜೈನ್ ...ಜಿನಲ್ಲಿ ಎರಡನೇ ಪಿಯುಸಿ ಕಾಮರ್ಸ್ ...ರ್ಥಿ. ವಿದ್ಯೆ ನೈವೇದ್ಯ, ಆದರೆ ಶೋಕಿ ...ನೂ ಕಡಿಮೆಯಿಲ್ಲ.

...ನಿಖಿಲ್ ಗೌಡನಿಂದಾಗಿ ಮೊನ್ನೆ ಜೈನ್ ಕಾಲೇಜಿ ...ಂದು ಗಲಾಟೆಯಾಗಿದೆ. ಬರೀ ಮಾರ್ವಾಡಿಗಳು ...ಶ್ರೀಮಂತ ವಿದ್ಯಾರ್ಥಿಗಳಿಗೆ ಮಾತ್ರ ಸೀಟ್ ...ವ ಜೈನ್ ಕಾಲೇಜಿನ ಆಡಳಿತ ಮಂಡಳಿ ಬಹಳ ...ಎಂದೇ ಹೆಸರಾಗಿದೆ. ಆದರೆ ಮಾನ್ಯ ಮುಖ್ಯ ...ಗಳ ಮಗನ ದೆಸೆಯಿಂದ ಕಾಲೇಜಿನ ನಿಯಮ ...ಗಾಳಿಗೆ ತೂರಲು ಹೋಗಿ ಒಂದು ರಾದ್ಧಾಂತ ...ಯಾಗಿದೆ ಕಾಲೇಜಿನಲ್ಲಿ.


...ಗಿನ ಸರ್ಕಾರಿ ನಿಯಮದಂತೆ ಯಾವುದೇ ...ರ್ಥಿ ಪರೀಕ್ಷೆಗೆ ಕೂರಬೇಕೆಂದರೆ ಶೇ. 60 ಕ್ಕಿಂತಾ ...ಹಾಜರಾತಿ ಇರಬೇಕಾಗುತ್ತದೆ. ಕೆಲ ಖಾಸಗಿ ...ಜುಗಳಂತೂ ತಮ್ಮದೇ ನಿಯಮಗಳನ್ನು ಮಾಡಿ ...ವೆ. ಅದರಂತೆ ಜೈನ್ ಕಾಲೇಜಿನ ವಿದ್ಯಾರ್ಥಿಗಳಿಗೆ ...75 ರಷ್ಟು ಅಟೆಂಡೆನ್ಸ್ ಕಡ್ಡಾಯ ಮಾಡಲಾಗಿದೆ.

...ಮಾರ್ಚ್ 24 ರಿಂದ ಎರಡನೇ ...ಸಿ ಪರೀಕ್ಷೆಗಳು ಶುರುವಾಗುವ ...ವಿದ್ಯಾರ್ಥಿಗಳಿಗೆ ಪರೀಕ್ಷಾ ಹಾಲ್ ...ನೀಡುವಾಗ ಅಟೆಂಡೆನ್ಸ್ ಕಡಿಮೆ ...ಒಂದೆರಡು ಡಜನ್ ಹುಡುಗರಿಗೆ ...ಟಿಕೆಟ್ ಕೊಡಲು ಪ್ರಿನ್ಸಿಪಾಲ್ ...ಎಂದಿದ್ದಾರೆ. ಅವರಲ್ಲಿ ಮುಖ್ಯ ...ಗಳ ಮಗ ನಿಖಿಲ್ ಗೌಡನೂ ...ಈ ನಿಖಿಲ್ ಕ್ಲಾಸ್ ರೂಮಿನಲ್ಲಿ ...ಪಾಠ ಕೇಳಿದ್ದಕ್ಕಿಂತಾ ಕಾಲೇಜ್ ...ೀನು, ಕಾರ್‌ನಲ್ಲಿ ಸುತ್ತಾಟ, ಒಣ ...ಗಳಲ್ಲೇ ಇಡೀ ಅಕಾಡಮಿಕ್ ವರ್ಷ ...ದ್ದ ಪ್ರತಿಭಾವಂತ. ಅವನಿಗಿದ್ದ ...ಡೆನ್ಸ್ ಆದರೂ ಎಷ್ಟೆನ್ನುತ್ತೀರಿ? ...ವಲ 45% ಮಾತ್ರ.

...ನಿಖಿಲ್‌ನೊಂದಿಗೆ ಇನ್ನೊಂದಿಷ್ಟು ...ಪಟಾಲಂಗಳ ಮಟ್ಟವೂ ಇಷ್ಟೇ



ಇತ್ತು. ಆದರೆ ಅದೆಲ್ಲಿಂದ ರೆಕಮೆಂಡೇಷನ್ ಬಂತೋ ಏನೋ ಕಾಲೇಜು ಮ್ಯಾನೇಜ್‌ಮೆಂಟ್ ನಿಖಿಲ್‌ಗೆ ಮಾತ್ರ ಹಾಲ್ ಟಿಕೆಟ್ ಕೊಡಲು ತೀರ್ಮಾನಿಸಿಬಿಟ್ಟಿತು. ನಿಖಿಲ್‌ನ ಗೈರುಹಾಜರಿಗೆ ಹುಷಾರಿಲ್ಲವೆಂಬ ಬೋಗಸ್ ಮೆಡಿಕಲ್ ಸರ್ಟಿಫಿಕೇಟ್ ಮಾಡಿಸಿ ಅವನಿಗೆ ಪರೀಕ್ಷೆಗೆ ಕೂರಲು ಅವಕಾಶ ಮಾಡಿಕೊಡಲು ಹೊರಟಾಗ ಗಲಾಟೆ ಶುರುವಾಯಿತು. ನಿಖಿಲ್‌ನಷ್ಟೇ ವಿದ್ಯಾಪಕ್ಷಪಾತಿಗಳಾದ 45% ಅಟೆಂಡೆನ್ಸ್ ಗುಂಪಿನ ಹುಡುಗರು 'ಸಿಎಂ ಮಗ ಅಂತ ನಿಖಿಲ್‌ಗೆ ಮಾತ್ರ ಹಾಲ್ ಟಿಕೆಟ್ ಕೊಡುತ್ತಿದ್ದೀರಿ, ನಮಗ್ಯಾಕೆ ಕೊಡಲ್ಲ' ಎಂದು ಗಲಾಟೆ ಮಾಡಿದ್ದಾರೆ. ಕೊನೆಗೆ ಇವೆಲ್ಲಾ ತರಲೆ ತಾಪತ್ರಯಗಳೇ ಬೇಡವೆಂದು ಪ್ರಿನ್ಸಿಪಾಲರು ಹೋಲ್‌ಸೇಲಾಗಿ ಎಲ್ಲಾ ಚಕ್ಕರ್ ಚತುರರಿಗೆ ಮೆಡಿಕಲ್ ಗ್ರೌಂಡ್ಸ್ ಮೇಲೆ ಅಟೆಂಡೆನ್ಸ್ ನೀಡಿ ಹಾಲ್ ಟಿಕೆಟ್ ಕೊಟ್ಟು ಬಿಕ್ಕಟ್ಟಿನಿಂದ ಪಾರಾಗಿದ್ದಾರೆ.



ಜೈನ್ ಕಾಲೇಜಿನ ಅಧ್ಯಕ್ಷ ಚೆನ್ನರಾಜ್ ಜೈನ್

ಈಗ "ಏನ್ ಸಾರ್ ನಿಮ್ ಕಾಲೇಜಲ್ಲಿ ಗಲಾಟೆ" ಎಂದು ಫೋನ್ ಮಾಡಿ ಕೇಳಿದರೆ "ಅದೇನೊ ನಂಗೊತ್ತಿಲ್ಲ" ಎಂದು ತಟ್ಟಂತ ಫೋನ್ ಕುಕ್ಕುತ್ತಾರೆ ಪ್ರಿನ್ಸಿಪಾಲ್ ಮಹಾಶಯರು.

ಕಿಡ್‌ನ್ಯಾಪ್ ಪ್ರಕರಣ

ಈ ನಿಖಿಲ್ ಗೌಡ ಎಂತಾ ಹುಡುಗ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳೇ ಪ್ರಜಾವಾಣಿ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ.

"ಚೆನ್ನಾಗಿ ಓದಬೇಕಪ್ಪ" ಎಂದು ಹಿತವಚನ ಹೇಳಲೋದರೆ "ನಂಗೆ ಹ್ಯಾಗೆ ಜೀವನ ಮಾಡ್ಬೇಕೂಂತ ಗೊತ್ತಿದೆ, ನೀವೇನೂ ಯೋಚನೆ ಮಾಡ್ಬೇಡಿ" ಎಂದಿದ್ದನಂತೆ ಈ ನಿಖಿಲ್.

ಆದರೆ ಬರೀ ಯೋಚನೆ ಯಾಕೆ ಎಲ್ಲರಿಗೂ ಟೆನ್ಷನ್ ಕೊಡಬಲ್ಲಷ್ಟು ಹುಂಬ ಹುಡುಗ ಈ ನಿಖಿಲ್.


ಅದಕ್ಕೆ ಕಾಲೇಜಿನಲ್ಲಿ ಅನಿಲ್ ಬಾಬು ಎಂಬ ಇನ್ನೊಬ್ಬ ವಿದ್ಯಾರ್ಥಿಯ ಕಿಡ್‌ನ್ಯಾಪ್ ಮಾಡಿಸಿದ್ದ ಹಗರಣವೇ ಸಾಕ್ಷಿ.

ಒಮ್ಮೆ ಕಾಲೇಜಿನ ಸೆಲ್ಲಾರ್‌ನಲ್ಲಿ ಈ ನಿಖಿಲ್ ತನ್ನ ಗರ್ಲ್‌ಫ್ರೆಂಡ್ ಒಬ್ಬಳೊಂದಿಗೆ ಹರಟುತ್ತಾ ನಿಂತಿದ್ದಾಗ ಅನಿಲ್ ಬಾಬು ಹಾದು ಹೋಗಿದ್ದಾನೆ. ನ್ಯಾಷನಲ್ ಲೆವೆಲ್ ಬ್ಯಾಸ್ಕೆಟ್‌ಬಾಲ್ ಆಟಗಾರ ಅನಿಲ್ ಬಾಬು ಏನಂದನೋ, ಅಥವಾ ನಿಖಿಲ್ ಏನರ್ಥ ಮಾಡಿಕೊಂಡನೊ ಅಲ್ಲೇ ಜಗಳ ಶುರುವಾಗಿದೆ. ನಿಖಿಲ್ ಜೊತೆಗಿದ್ದ ಹುಡುಗಿಯನ್ನು ಅನಿಲ್ ಕೀಟಲೆ ಮಾಡಿದನೆಂಬುದೇ ಜಗಳಕ್ಕೆ ಕಾರಣವಾಗಿದೆ. ಇನ್ನೂ ತಲೆ ಮಾಸಿರದ ನಿಖಿಲ್ ಅಲ್ಲೇ ನಿಂತು ಯಾರಿಗೋ ಫೋನ್ ಮಾಡಿದ್ದಾನೆ. ಸ್ವಲ್ಪ ಹೊತ್ತಿನಲ್ಲೇ ಕಾರೊಂದು ಬಂದು ಕಾಲೇಜಿನ ಗೇಟಿನ ಹತ್ತಿರ ನಿಂತಿದೆ. ಅದರಿಂದಿಳಿದ ಕೆಲ ಘಡವಗಳು ನೇರ ಹೋಗಿ ಅನಿಲ್ ಬಾಬುವನ್ನು ಕಾರಿಗೆ ಎತ್ತಾಕಿಕೊಂಡು ಸಜ್ಜನ್‌ರಾವ್ ಸರ್ಕಲ್ ಕಡೆಗೆ ಹೋಗಿದ್ದಾರೆ. ಅಷ್ಟರಲ್ಲಿ ಸುದ್ದಿ ಕುಮಾರಸ್ವಾಮಿಯ ಆಪ್ತ ಸಹಾಯಕ ರಂಗಸ್ವಾಮಿಗೆ ಗೊತ್ತಾಗಿ ಅವರು "ನೀವು ಎಲ್ಲರ ಮರ್ಯಾದೆ ಕಳೀತೀರಾ" ಎಂದು ರೇಗಿ ಅನಿಲ್ ಬಾಬುನನ್ನು ಬಿಟ್ಟು ಕಳಿಸುವಂತೆ ಗದರಿಸಿದ್ದಾರೆ. ಕಳೆದ ವರ್ಷ ನಡೆದ ಈ ಕಿಡ್‌ನ್ಯಾಪ್ ಪ್ರಹಸನದ ಬಗ್ಗೆ ಜೈನ್ ಕಾಲೇಜ್ ಹುಡುಗರು ಈಗಲೂ ಮಾತಾಡುತ್ತಿರುತ್ತಾರೆ.

ಅಪ್ಪನಿಗೆ ಅಧಿಕಾರ ಸಿಕ್ಕರೆ ಮಕ್ಕಳಿಗೆ ಹೇಗೆ ಮದವೇರುತ್ತದೆ ನೋಡಿ. ∎

ತಾತಾ ಹುತಾತ್ಮ! ಮೊಮ್ಮಗ ಮಹಾತ್ಮ!!

ಹಾಲ್ ಟಿಕೆಟ್ ಗಲಾಟೆಯಿಂದ ಮುಖಭಂಗಕ್ಕೀಡಾಗಿರುವ ನಿಖಿಲ್ ಗೌಡ 'ನಾನು ಈ ಬಾರಿ ಪಿಯುಸಿ ಪರೀಕ್ಷೆಗೆ ಕೂರಲ್ಲ, ಜೂನ್‌ನಲ್ಲಿ ಸಪ್ಲಿಮೆಂಟರಿಗೆ ಎಕ್ಸಾಂ ಬರೀತಿನಿ" ಎಂದು ಭೀಷ್ಮಪ್ರತಿಜ್ಞೆ ಕೈಗೊಂಡಿದ್ದಾನೆ. ಕಾಲೇಜಿನಿಂದ ಹಾಲ್ ಟಿಕೆಟನ್ನು ಇದುವರೆಗೂ ತೆಗೆದುಕೊಂಡಿಲ್ಲ, ಅಟೆಂಡೆನ್ಸ್ ಕಡಿಮೆ ಇರುವುದರಿಂದ ತಾನು ಎಕ್ಸಾಮಿಗೆ ಕೂರದಿರುವುದೇ ನೈತಿಕವಾಗಿ ಸರಿ ಎಂಬುದು ಈ ಪೋರನ ಅನಿಸಿಕೆಯಂತೆ.



ಅಬ್ಬಾ ಎಂತಾ ತ್ಯಾಗಮಯಿ ಈತ!

ನೆಟ್ಟಗೆ ಕಾಲೇಜಿಗೆ ಹೋಗಿ ಪಾಠ ಪ್ರವಚನ ಕೇಳಲಾಗದ, ಜುಜುಬಿ 45% ಅಟೆಂಡೆನ್ಸ್ ಇರುವ ನಿಖಿಲ್ ಒಂದು ವೇಳೆ ಈಗಲೇ ಪರೀಕ್ಷೆ ಬರೆದಿದ್ದರೂ ಡುಂಕಿ ಹೊಡೆಯುತ್ತಿದ್ದ ಎಂಬುದು ಬೇರೆಲ್ಲರಿಗಿಂತಲೂ ಅವನಿಗೇ ಚೆನ್ನಾಗಿ ಗೊತ್ತಿರಲೇಬೇಕು. ಆದರೂ ಅದಕ್ಕೊಂದು ನೈತಿಕತೆ ಆರೋಪಿಸಿಕೊಂಡು ಹಾಲ್ ಟಿಕೆಟ್ ತೆಗೆದುಕೊಳ್ಳದೆ ಇದ್ದಾನೆ ನಿಖಿಲ್.

ಇದೊಂಥರಾ ದೇವೇಗೌಡರ ಜಾತ್ಯತೀತತೆ ಪರ ನಿಲುವಿದ್ದಂತೆ.

ಚೆಡ್ಡಿಗಳೊಂದಿಗೆ ಮಗ ಕುಮಾರಸ್ವಾಮಿ ಕೈಜೋಡಿಸಿದ್ದರೂ ಮಾನ್ಯ ದೇವೇಗೌಡರೀಗ ಹುತಾತ್ಮ!

ಜೆಡಿಎಸ್ ಉಳಿಸಿದರೆಂಬ ಕೀರ್ತಿ ಪಡೆದು ಅಧಿಕಾರ ಕಬಳಿಸಿರುವ ಕುಮಾರಸ್ವಾಮಿಯವರಂತೂ ದಳದವರ ಪಾಲಿಗೆ ಪುಣ್ಯಾತ್ಮ!!

ಈಗ ಪರೀಕ್ಷೆ ಬರೆಯಲಾಗದೆ ಪರಾರಿಯಾಗಿರುವ ನಿಖಿಲ್ ಗೌಡ ಮಹಾತ್ಮ!!

–ಇದನ್ನೆಲ್ಲಾ ನೋಡಿಕೊಂಡೂ ಸುಮ್ಮನಿರಬೇಕಾದ ಕರ್ನಾಟಕದ ಜನರೇ ಬಹುಶಃ ಪಾಪಾತ್ಮರಿರಬೇಕು.

...ತ್ಯೇಕಿ ಅತ್ಯಂತ ಬಲಾಢ್ಯನೆಂದರೆ ಅದು ಕಬಡ್ಡಿ ... ಹೆಚ್ಚೂಕಮ್ಮಿ ಎಂಬತ್ತು ಸಾವಿರದಿಂದ ಒಂದು ...ಷ್ಟು ಕೇಬಲ್ ಕನೆಕ್ಷನ್‌ಗಳು ಈತನ ಅಧೀನ ...ಪಟ್ಟಿವೆ. ದರ್ಶನ್ ಕೇಬಲ್ ನೆಟ್‌ವರ್ಕ್‌ಗೆ ...ರಣ್ಣನೇ ಅಸಲೀ ಧಣಿ ಅಂತಲೂ ಪುಕಾರಿದೆ. ...ರ ಕಾರ್ಪೋರೇಷನ್ ಚುನಾವಣೆಯಲ್ಲಿ ಬಾಬು ...ಭನಗರ ವಾರ್ಡಿಗೆ ಜೆಡಿ(ಎಸ್) ಅಭ್ಯರ್ಥಿಯಾದ. ...ಯು ಎಲ್. ಶ್ರೀನಿವಾಸ್ ವಿರುದ್ಧ ಸರಿಸುಮಾರು ... ಕೋಟಿ ಸುರಿದೂ ಸೋತ. ಮುಂದೆ ಕೃಷ್ಣ ...ಮಂತ್ರಿಯಾದರು. ರಾಜಕೀಯವಾಗಿ ನೆಲಕಚ್ಚಿದ್ದ ...ರಣ್ಣ ಶಿವರಾಜ್‌ಕುಮಾರ್ ಕಾಲ್‌ಶೀಟ್ ಪಡೆದು ... ಅಳಿಯಂದ್ರು' ಎಂಬ ಸಿನಿಮಾ ನಿರ್ಮಾಣಕ್ಕಿಳಿ... ಕಬಡ್ಡಿಬಾಬುವನ್ನೇ ತಮ್ಮ ಪ್ರೊಡಕ್ಷನ್ ...ಜರ್ ಆಗಿ ನೇಮಿಸಿಕೊಂಡರು.

...ಬುವಿಗೆ ಲ್ಯಾಂಡ್ ಡೀಲಿಂಗ್ ಮತ್ತು ಕೇಬಲ್ ದಂಧೆ ಹೊರತಾಗಿ ಸಿನಿಮಾ ಗೊತ್ತಿರಲಿಲ್ಲ. ಹಾಗಿದ್ದೂ ಆತನನ್ನೇ 'ಗಲಾಟೆ ಅಳಿಯಂದ್ರು' ಮತ್ತು ಆನಂತರದ 'ಚಂದ್ರ ಚಕೋರಿ' ಚಿತ್ರಕ್ಕೆ ಏಕೆ ಪ್ರೊಡಕ್ಷನ್ ಮ್ಯಾನೇಜರ್ ಮಾಡಿದ್ದರೆಂದರೆ, ದುಡ್ಡೂಕಾಸಿನ ವಿಷಯದಲ್ಲಿ ಕುಮಾರಣ್ಣ ನಂಬುತ್ತಿದ್ದದ್ದು ಆತನನ್ನು ಮಾತ್ರ!


ಅಲ್ಲಿಂದಾಚೆಗೆ ತನ್ನೆಲ್ಲಾ ವ್ಯವಹಾರಕ್ಕೂ ಕುಮಾರಣ್ಣನ ಹೆಸರನ್ನೇ ಬಾಬು ಬಳಸುತ್ತಿದ್ದ. ಇನ್ನೂ ಕೆಲವೆಡೆ ತಾನು ಮಾಡೋ ವ್ಯವಹಾರಕ್ಕೆಲ್ಲ ಕುಮಾರಣ್ಣ ಬಂಡವಾಳ ಹಾಕ್ತಾನೆ ಅಂತಲೂ ಹೇಳಿಕೊಂಡ. ಉತ್ತರಹಳ್ಳಿ ಸುತ್ತಮುತ್ತ ಯಾವುದೋ ಕಾಲಕ್ಕೆ ಸೈಟು ಮಾಡಿ ಮಾರಿದ್ದ ಜಮೀನಿಗೆ ರೌಡಿಗಳನ್ನು ಛೂಬಿಟ್ಟ. ಉತ್ತರಹಳ್ಳಿ, ಮರಹಳ್ಳಿ, ಅರೆಹಳ್ಳಿ, ಚನ್ನಸಂದ್ರ, ವಡ್ಡರಪಾಳ್ಯ ಮಾರಸಂದ್ರ, ಸುಬ್ರಹ್ಮಣ್ಯ ಪುರಗಳಲ್ಲಿ ಸರ್ವೆನಂಬರ್ ಹಾಕದೇ ಯಾವುದೋ ಕಾಲಕ್ಕೆ ರಿಜಿಸ್ಟರ್ ಮಾಡಿ ಕೊಟ್ಟಿದ್ದ ಬಹುತೇಕ ಸೈಟುಗಳು ಬಾಬು ಪಾಲಾದವು.



ಉತ್ತರಹಳ್ಳಿ ಪಂಚಾಯ್ತಿಯ ಮಾಜಿ ಛೇರ್ಮನ್ ಶ್ರೀನಿವಾಸ್, ಲ್ಯಾಂಡ್ ಬ್ರೋಕರ್ ಜೈರಾಮ್ ರೆಡ್ಡಿ, ಪ್ಲಂಬರ್ ನಾಗಪ್ಪನ ಮಗ ಗೋಪಿ, ಸಪ್ಲೇಯರ್ ಕಿರಣ ಉರ್ಫ್ ಚಿಕ್ಕಪಟೇಲ ಇತ್ಯಾದಿ ಐನಾತಿ ಭೂಗಳ್ಳರೆಲ್ಲ ಬಾಬು ಭೂಕಬಳಿಕೆಯ ಏಜೆಂಟರಾದರು. ಸಮ್ಮಿಶ್ರ ಸರ್ಕಾರ ಬಂದ ಮೇಲಂತೂ ಕಬಡ್ಡಿ ಬಾಬು ಅಕ್ಷರಶಃ ಡಾನ್ ಗತ್ತಿನಲ್ಲೇ ಮೆರೆದ. ಸುಬ್ರಹ್ಮಣ್ಯಪುರ ಕೆರೆ ಪಕ್ಕದ ಸರ್ವೆನಂಬರ್ 64ರಲ್ಲಿದ್ದ ಕನಕ ಲೇಔಟ್ ಪಕ್ಕದ ಭುವನೇಶ್ವರಿ ... ಖಾಲಿ ಮಾಡಿಸಲು ಬಾಬು ... [illegible] ಗುಡಿಸಲುಗಳನ್ನು ಖಾಲಿ ಮಾಡಿಸಿಬಿಟ್ಟರೆ ಅದು ನೂರು ಕೋಟಿಯ ಆಸ್ತಿಯಾಗುತ್ತದೆ. ಕಬಡ್ಡಿಬಾಬು ಹೆಸರಿಗೇ ಅರ್ಧ ಸ್ಲಂ ಖಾಲಿಯಾಗಿದೆ. ಮಿಕ್ಕವರನ್ನು ನಿಕಾಲಿ ಮಾಡಲು ಆತನ ರೌಡಿಪಡೆ ಫೀಲ್ಡಿಗಿಳಿದಿದೆ.

ಬೆಂಗಳೂರು ಸುತ್ತಮುತ್ತ ಈತನ ಲ್ಯಾಂಡ್ ಡೀಲುಗಳು ಯಾವ ವೇಗದಲ್ಲಿದ್ದವೆಂದರೆ ಸಮ್ಮಿಶ್ರ ಸರ್ಕಾರದ ವೇಳೆಯಲ್ಲೇ ಬಿಡದಿಯ ವಂಡರ್‌ಲಾ ಬಳಿ ನೂರೆಕರೆಗೆ ಬೇಲಿ ಹಾಕಿದ. ಕುವನಹಳ್ಳಿಯ ಹಕ್ಕಿಪಿಕ್ಕಿ ಕಾಲೋನಿ ಬಳಿ ಮತ್ತೆ ನೂರಾ ಮೂವತ್ತೆಕರೆ ಖರೀದಿಸಿದ. ಬಿಡದಿ-ಭೈರಮಂಗಲ ರಸ್ತೆಯ ಕುಮಾರಣ್ಣನ ಎಸ್ಟೇಟ್ ಪಕ್ಕದಲ್ಲೇ ನೂರೆಕರೆಯ ಮತ್ತೊಂದು ಪ್ಲಾಟು ಮಾಡಿದ. ಜೊತೆಗೇ ಜಿಗಣಿಯ ಇನ್ನಕ್ಕಿ ಚಂದಾಪುರದಲ್ಲಿ ನೂರೈವತ್ತೆಕರೆ ಖರೀದಿಸಿದ. ಇದಿಷ್ಟೂ ಆತನ ಲೇಟೆಸ್ಟ್ ಸಂಪಾದನೆಯಾದರೆ ಇದಕ್ಕೂ ಮುನ್ನ ಹನುಮಂತನಗರ ... ಕಾಲೇಜಿನ ...ಭಾಗದ ... [illegible] ಮೂವತ್ತೆಕರೆ ಸರ್ಕಾರಿ ಭೂಮಿಗೆ ಕಾಂಪೌಂಡ್ ಹಾಕಿದ್ದ ಹೊಸಕೆರೆ ಹಳ್ಳಿಯ ದತ್ತಾತ್ರೇಯ ದೇವಸ್ಥಾನದ ಟ್ರಸ್ಟಿ ... [illegible] ...ಕೊಂಡ. ಅಲ್ಲೀಗ ನೂರು ಸೈಟುಗಳ್ ದತ್ತಾತ್ರೇಯ ಲೈಔಟ್ ಮಾಡಿದ್ದಾನೆ. ಅದೊಂದೇ ಹತ್ತುಕೋಟಿಯ ಆಸ್ತಿಯಾಗುತ್ತದೆ. ಇನ್ನು ಆತನ ಇಡೀ ಸೈಟುಗಳು, ಬೇನಾಮಿ ಆಸ್ತಿಯನ್ನು ಲೆಕ್ಕವಿಟ್ಟವರ್ಯಾರು?

ಇಲ್ಲಿಗೆ ಹತ್ತು ವರ್ಷದ ಹಿಂದೆ ಅರ್ಧ ಕಾಫಿಗೂ ತತ್ವಾಡುತ್ತಿದ್ದ ಕಬಡ್ಡಿಬಾಬು ಇವತ್ತು ಐನೂರು ಕೋಟಿಯಷ್ಟು ಭೂಸಂಪತ್ತಿನ ಧಣಿಯೆಂದರೆ ಇನ್‌ಕಂ ಟ್ಯಾಕ್ಸ್ ಕಣ್ಣು ಬೀಳದಿರುತ್ತಾ? ತಾನು ಕುಮಾರಣ್ಣನ ಬೇನಾಮಿ ಎಂದೇ ಕಬಡ್ಡಿಬಾಬು ಪೋಜು ಕೊಡುತ್ತಿದ್ದ. ಕುಮಾರಣ್ಣ ಮುಖ್ಯಮಂತ್ರಿಯಾಗುತ್ತಿದ್ದಂತೆ ಬೆಂಗಳೂರಿನುದ್ದಕ್ಕೂ ತನ್ನ ಕಟೌಟ್‌ಗಳನ್ನು ಹಾಕಿಸಿದ. ಟ್ರಾನ್ಸ್‌ಫರ್ ದಂಧೆಗೂ ಕೈಯಿಟ್ಟ.



ಕುಮಾರಣ್ಣನ ಕೃಪೆಯಿಲ್ಲದೇ ಯಕಶ್ಚಿತ್ ಪುಡಿರೌಡಿಯೊಬ್ಬ ಕುಬೇರನಾಗಲು ಹೇಗೆ ಸಾಧ್ಯ?

... [illegible]

ಅದನ್ನು ಮರೆಮಾಚಲೆಂದು ... ಗುಡುಗಿತ್ತಿದ್ದರೆ? ಗೌಡರ ವಿರುದ್ಧ ಹದ್ದಿನ ಕಣ್ಣಿಟ್ಟ ... [illegible] ...ಕಿ?

ಎಲ್ಲಾ ಪ್ರಶ್ನೆಗಳಿಗೂ ಕಾಲವೇ ಉತ್ತರಿಸಲಿದೆ. ●

ರೈತನನ್ನೇ ಕೊಂದ ರೈತ ನಾಯಕ!

ಕೊಪ್ಪಳ

ಕೊಪ್ಪಳ ತಾಲ್ಲೂಕು ರೈತಸಂಘ (ನಂಜುಂಡಸ್ವಾಮಿ ಬಣ)ದ ಅಧ್ಯಕ್ಷ ಭೀಮಸೇನ ಕಲಕೇರಿ ಆಸ್ತಿ ಕಬಳಿಕೆಗಾಗಿ ತನ್ನ ಚಿಕ್ಕಪ್ಪನನ್ನೇ ಬಲಿ ತೆಗೆದುಕೊಂಡಿದ್ದಾನೆ. ತಾನು ಸುಬ್ಬನ್ನೇ ದೌರ್ಜನ್ಯ ಮಾಡಲು ಎಂಬಂತಿರುವ ಇವನು ಮೂರು ವರ್ಷಗಳಿಂದ ಚಿಕ್ಕಪ್ಪ ಬಸಪ್ಪನ ಕುಟುಂಬಕ್ಕೆ ನೀಡುತ್ತ ಬಂದಿದ್ದ ಕಿರುಕುಳದಿಂದ ಲಕ್ಷಾಂತರ ಹಾನಿಯಾಯ್ತು, ನೆಮ್ಮದಿ ಇಲ್ಲದಂತೆ ಮಾಡಿ ಜೈಲಿಗೂ ಹೋಗಿಬಂದ. ಕೊನೆಗೆ ಮುಯ್ಯಿ ಎಂಬಂತೆ ಬಸಪ್ಪನ ಜೀವ ತಗೊಂಡು ಈಗ ಊರೇ ಬಿಟ್ಟಿದ್ದಾನೆ.

2002ರಲ್ಲಿ ಮರುಜೀವ ಪಡೆದಿದ್ದ ಕೊಪ್ಪಳ ಜಿಲ್ಲೆಯ ರೈತ ಹೋರಾಟ ಈಗ ನಾಯಕರ ದೆಸೆಯಿಂದ ದಾರಿತಪ್ಪಿದೆ. ರೈತ ನಾಯಕ ಭೀಮಸೇನ ಜಮೀನಿನ ಆಸೆಗೆ ಬಿದ್ದು ತನ್ನ ಚಿಕ್ಕಪ್ಪ ಬಸಪ್ಪನ ಸಾವಿಗೆ ಕಾರಣನಾಗಿದ್ದಾನೆ. ರೈತ ನಾಯಕರ ಮಜ, ಮೋಜು, ಮುಯ್ಯಿಗಳನ್ನು ವಿವರಿಸುವ ವರದಿ ಇಲ್ಲಿದೆ...

ಬಗಿನಾಳ ಘಟನೆ

80 ರ ದಶಕದಲ್ಲಿ ಕೊಪ್ಪಳದಲ್ಲಿ ಉತ್ತುಂಗಕ್ಕೇರಿದ ರೈತ ಸಂಘ 2002 ರ ನಂತರ ಮತ್ತೇ ವೈಭವಕ್ಕೆ ಬಂದು ನೂರಾರು ಹಳ್ಳಿಗಳಲ್ಲಿ ಸಂಘಟನೆಯಾಯಿತು. ಮೀಟರ್ ವಾಪಸಾತಿ ಚಳವಳಿ ನಡೆಯುವಾಗ ಬಗಿನಾಳ ಗ್ರಾಮದಲ್ಲಿ ಆದ ಲಾಠಿ ಚಾರ್ಜ್‌ನಿಂದ ರೈತ ಸಂಘ ರಾಜ್ಯದ ತುಂಬ ಸುದ್ದಿಯಾಯಿತು. ಆಗ ಅಧಿಕಾರಿಗಳು, ರಾಜಕಾರಣಿಗಳು ರೈತ ಸಂಘಕ್ಕೆ ಹೆದರತೊಡಗಿದರು. ಕ್ರಮೇಣ ಭೀಮಸೇನ್‌ನಂತಹವರು ರೋಲ್‌ಕಾಲ್ ಫಿಕ್ಸ್ ಮಾಡಿದರು. ಹೀಗಾಗಿ ಕೊಪ್ಪಳದಲ್ಲಿ ಹೈಟೆಕ್ ರೈತ ನಾಯಕರು ಮಿಂಚತೊಡಗಿದರು.




ಬಗಿನಾಳ ಘಟನೆ ಮುನ್ನ ರಾತ್ರಿ ಹೊತ್ತು ರೊಟ್ಟಿ ತಿನ್ನುತ್ತ ಹಳ್ಳಿಗಳಲ್ಲಿ ಸಂಘಟನೆ ಮಾಡುತ್ತಿದ್ದವರು ಬಾರ್‌ಗಳಲ್ಲಿ ಕುಡಿದು ಕಬಾಬ್ ತಿನ್ನತೊಡಗಿದರು. ಆ ಹೊತ್ತಿಗೆ ಭೀಮಸೇನ್‌ನಂತಹವರು ಗೊಬ್ಬರ, ಬೀಜದ ಅಂಗಡಿ, ಕಚೇರಿಗಳಲ್ಲಿ ಮಾಮೂಲು ಫಿಕ್ಸ್ ಮಾಡಿಕೊಂಡರು. ಇವತ್ತು ರೈತ ಸಂಘದ ಅನೇಕ ಪದಾಧಿಕಾರಿಗಳು, ಕ್ರಷರ್ ಮಶಿನ್ ಹೊಂದಿ ಅಕ್ರಮ ಗಣಿಗಾರಿಕೆಯಲ್ಲಿದ್ದಾರೆ. ಒಂದು ದಿನ ಭೀಮಸೇನನಿಗೆ ಚಿಕ್ಕಪ್ಪನ ಹೊಲ ಹೊಡೆಯಬೇಕೆಂಬ ಐಡಿಯಾ ಬಂತು. ಕೊಪ್ಪಳ ತಾಲ್ಲೂಕಿನ ಕಲಕೇರಿಯ ಸರ್ವೆ ನಂ. 7 ರ ಹೊಲ 1980 ರಲ್ಲಿ ಭೀಮಸೇನ್‌ನ ಚಿಕ್ಕಪ್ಪನವರಿಗೆ ಹಂಚಿಕೆ ಆಗಿ ರಿಜಿಸ್ಟ್ರಾರ್ ಆಗಿರಲಿಲ್ಲ, ಈಗ ಮೃತ ಬಸಪ್ಪನ ಹೆಂಡತಿ ಯಲ್ಲವ್ವನ ಹೆಸರಿಗೆ ದೇವಲಾಪುರ ಸೀಮೆಯ ಸರ್ವೆ ನಂ. 14 ರಲ್ಲಿ 2 ಎಕರೆ ಸಾಗುವಳಿ ಭೂಮಿ ಮಂಜೂರಾಗಿದೆ.

ತುಳಸಿ ಹರಗಿದರು

ಮೂರು ವರ್ಷ ಮುಂಚೆ ಚೈನ್ ಪುಲ್ಲಿ ಮುರಿದು ಭೀಮಸೇನ & ಸಹೋದರರು ಬಸಪ್ಪನನ್ನು ಹೊಡೆಯುವುದರ ಮೂಲಕ ಜಗಳ ಆರಂಭಿಸಿದರು. ಬಸಪ್ಪ ಬ್ರಾಹ್ಮಣರಿಗಾಗಿ ಹೊಲದಲ್ಲಿ ಸ್ವಲ್ಪಭಾಗ ತುಳಸಿ ಬೆಳೆಯುತ್ತಿದ್ದ. 2004, ಡಿ. 8 ರಂದು ಮಗ ವೀರಭದ್ರನ ಮದುವೆಗೆ ಸೊರಬ ತಾಲ್ಲೂಕಿನ ಗಿಣಿವಾಲಕ್ಕೆ ಹೋದಾಗ ಭೀಮಸೇನ ಹೊಲದಲ್ಲಿ ಬೆಳೆದು ನಿಂತಿದ್ದ 50 ಸಾವಿರ ರೂಪಾಯಿ ತುಳಸಿ ಹಾಳು ಮಾಡಿದ. ಈ ಬಗ್ಗೆ ವಿಚಾರಿಸಲು ಪುಟ್ಟಣ್ಣಯ್ಯ ಬಣದ ಜಿಲ್ಲಾಧ್ಯಕ್ಷ ಎಸ್.ಆರ್. ಸ್ವಾಮಿ, ರಾಜ್ಯ ಉಪಾಧ್ಯಕ್ಷ ಜೆ. ವೀರಣ್ಣ ಬಂದಾಗ ಅವಾಚ್ಯ ಶಬ್ದಗಳಿಂದ ಬೈಯ್ದು ಗ್ರಾಮಗಳಿಗೆ ಬಾರದಂತೆ ವಾಪಸ್ಸು ಕಳಿಸಿದ.

ಬೋರ್‌ವೆಲ್ ನಮ್ಮದು



ಇಷ್ಟಾದರೂ ಬಗ್ಗದ ಬಸಪ್ಪನನ್ನು ಹಣಿಯಲೆಂದು ಭೀಮ ಹೊಲದ ಬೋರ್ ನಮ್ಮದು ಅಂತ ಜಗಳವಾಡಿ ಅದರ ಹಾರೆ ಹಾಳು ಮಾಡಿದ. ದಳಪತಿ ನಿಂಗನಗೌಡ, ಬಸನಗೌಡ ಇನ್ನಿತರರು ಹೊಲಕ್ಕೆ ನೀರು ಹರಿಸಲು ಬಿಡಿ ಅಂದ್ರೆ ಒಪ್ಪಲಿಲ್ಲ, ಆಗ ಬಸಪ್ಪ ಕೊಪ್ಪಳಕ್ಕೆ ಬಂದು ಚುಕ್ಕಿ ನಂಜುಂಡಸ್ವಾಮಿಗೆ ಫೋನ್ ಮೂಲಕ ವಿಷಯ ತಿಳಿಸಿದ. ಆಗ ಚುಕ್ಕಿ, ಸ್ಥಳೀಯ ಘಟಕದವರಿಗೆ ಹೇಳಿ ಬಸಪ್ಪನ ಹೊಲಕ್ಕೆ ನೀರು ಬಿಡಿಸಲು ಹೇಳಿದರೂ ಕೇಳಲಿಲ್ಲ, ಜಿಲ್ಲಾಧ್ಯಕ್ಷರಾದ ಶಿವಪ್ಪ ಹೂಗಾರ ಕೂಡ ಭೀಮಂದೆ ತಪ್ಪು ಎಂದಾಗ ಎಸ್.ಪಿ. ವಿಚಾರಿಸಿದಾಗ ಬೋರ್‌ವೆಲ್ ಬಸಪ್ಪನದು ಎಂದು ಒಪ್ಪಿಕೊಂಡ. ಇದೆಲ್ಲ ಆಗೋ ಹೊತ್ತಿಗೆ ಬಸಪ್ಪನ ಶೇಂಗಾ ಬೆಳೆ ಬತ್ತಿ 50 ಸಾವಿರ ಲಾಸ್ ಆಯಿತು.

ಬಹಿಷ್ಕಾರ

ಏನೇ ಮಾಡಿದರೂ ಬಗ್ಗದ ಬಸಪ್ಪನನ್ನು ಬಗ್ಗು ಬಡಿಯಲು ತನ್ನದೇ ಸುಡುಗಾಡ ಸಿದ್ಧರ ಜನಾಂಗದ ಸಭೆ ನಡೆಸಿ ಬಹಿಷ್ಕಾರ ಹಾಕಿಸಿದ. ಈ ಬಗ್ಗೆ ಮುಖ್ಯಮಂತ್ರಿಗೆ ದೂರು ನೀಡಿದಾಗ ಸಿ.ಎಂ. ಕಚೇರಿಯಿಂದ ಆದೇಶ ಬಂತು. (CM/DLT/911/2005-5.7.2005) ಆನಂತರ ಪೋಲೀಸ್ ಇಲಾಖೆ ಭೀಮನಿಗೆ ಎಚ್ಚರಿಕೆ ನೀಡಿ ಬಹಿಷ್ಕಾರ ಹಾಕಿಸದಂತೆ ಹೇಳಿತ್ತು, ಆದರೆ ಭೀಮ ಇದನ್ನು ಲೆಕ್ಕಿಸದೆ ಹೋದ.

ಮೃತ ರೈತ ಬಸಪ್ಪನ 1.30 ಎಕರೆ ಹೊಲದಲ್ಲಿದ್ದ ಬಾವಿಯಲ್ಲಿನ ಮೀನುಗಳಿಗೆ ಭೀಮಸೇನ ಜೂನ್ 7, 2005 ರಂದು ಅನ್ನಕ್ಕೆ ವಿಷ ಬೆರೆಸಿ ಹಾಕಿ ಅವುಗಳನ್ನು ಸಾಯಿಸಿದ್ದು 20 ಸಾವಿರ ಹಾನಿಗೆ ಕಾರಣವಾಯ್ತು, ಇದು ಗ್ರಾಮೀಣ ಠಾಣೆಯಲ್ಲಿ ಕೇಸ್ ದಾಖಲಾಗಿ ಭೀಮಸೇನ್ & ಸಹೋದರರು ಜೈಲಿಗೆ ಹೋಗಿ ಬಂದು 10 ದಿನಕ್ಕೆ, ಜೂನ್ 17 ರಂದು ಮೋಟಾರ್ ಬಂದ್ ಮಾಡಿ, ಕೇಬಲ್ ಕತ್ತರಿಸಿ, ಪೈಪು ಮುರಿದು ಜಜ್ಜಿದ. ಕೇಳಿದರೆ ನಾನು ರೈತ ಸಂಘದ ಅಧ್ಯಕ್ಷ. ನನ್ನನ್ನು ಯಾರೂ ಏನೂ ಮಾಡಲು ಸಾಧ್ಯವಿಲ್ಲ ಅಂತ ಹೇಳಿಕೊಂಡು ಪೋಲೀಸರನ್ನು ಹೀನಾಯವಾಗಿ ಬೈದು ತಿರುಗಿ ದೌರ್ಜನ್ಯ ಮುಂದುವರೆಸಿದ.

ಇಷ್ಟು ದೌರ್ಜನ್ಯದ ನಡುವೆ ಬಸಪ್ಪ ಸುಮಾರು 60 ಚೀಲ ಮೆಕ್ಕೆಜೋಳ ಬೆಳೆದಿದ್ದ, ತಾನೇ ರಾಶಿ ಮಾಡೋಣವೆಂದರೆ ಭೀಮಸೇನ & ಸಹೋದರರು ಕೊಪ್ಪಳ JMFC ಯಲ್ಲಿ ಕೆವಿಯಟ್ ಹಾಕಿಬಿಟ್ಟಾಗ ಬಸಪ್ಪ ಹೌಹಾರಿಬಿಟ್ಟ. ಜೊತೆಗೆ ಜಗಳ ಬಗೆಹರಿಸುತ್ತೇನೆಂದು ರೂರಲ್ PSI ಚೆನ್ನಯ್ಯ ವರ್ಣೇಕರ್ ಲಾಡ್ಜ್ ಬಳಿ 10 ಸಾವಿರ ಪಡೆದು ಕೈಕೊಟ್ಟದ್ದು, ಭೀಮನ ಚೇಲ ಬಸನಗೌಡ ನರೆಗಲ್ ಜಗಳ ಬಗೆಹರಿಸಲು 10 ಸಾವಿರ ಬೇಡಿದ್ದರಿಂದ ಮುಗ್ಧ ಬಸಪ್ಪ ರೋಸಿ ಮಾರ್ಚ್ 22 ರಂದು ಜಿಲ್ಲಾಧಿಕಾರಿಗೆ ಗೋಳು ಹೇಳೋಣವೆಂದರೆ ಜವಾನರು ದಬ್ಬಿ ಕಳಿಸಿದ್ದಾರೆ. ಮರುದಿನ ಮತ್ತೆ ಡಿಸಿ ಆಫೀಸ್‌ಗೆ ಮೊಮ್ಮಕ್ಕಳಾದ ಶ್ರೀನಿವಾಸ್, ಪ್ರೇಮಾವತಿ ಜೊತೆ ಹೋದಾಗ ಅಲ್ಲಿ ಅಂಬೇಡ್ಕರ್ ಜಯಂತಿ ಕುರಿತು ಪೂರ್ವಭಾವಿ ಸಭೆ ನಡೆಯುತ್ತಿತ್ತು, ಹತಾಶನಾದ ಬಸಪ್ಪ ಡಿ.ಸಿ. ಚಂದ್ರಶೇಖರಯ್ಯ, ಜಿಲ್ಲಾ ಪಂಚಾಯಿತಿ ಸಿಇಓ, ಎಸಿ, ತಹಶಿಲ್ದಾರ್, ನಗರಸಭೆ ಅಧ್ಯಕ್ಷ ಎಲ್ಲರ ಎದುರೇ ಎಂಡೋಸಲ್ಫಾನ್ ಕ್ರಿಮಿನಾಶಕ ಕುಡಿದಿದ್ದಾನೆ. ಆಸ್ಪತ್ರೆಗೆ ತಂದರೆ ಉಳಿಸಬಹುದಿತ್ತು, ಆದರೆ ವೈದ್ಯರು ಗದಗಿಗೆ ರೆಫರ್ ಮಾಡಿ ಸಾಯಲು ಕಾರಣರಾಗಿದ್ದಾರೆ. ಬಸಪ್ಪ ಸತ್ತ ಕೂಡಲೇ ಭೀಮಸೇನ ನಾಪತ್ತೆಯಾಗಿದ್ದಾನೆ.

ದಿಡ್ಡಿ ಬಾಗಿಲು ಹಾಕಿದ ನಾಯಕರು

ಮೊದಲಿಂದಲೂ ಭೀಮಸೇನ್ ಮತ್ತಿತರ ನಾಯಕರು ರೈತ ಸಂಘದ ಹೆಸರಲ್ಲಿ ರೋಲ್‌ಕಾಲ್ ಮಾಡುತ್ತಿರುವುದು ಸಂಘದ ನಾಯಕರಿಗೆ ಗೊತ್ತಿತ್ತು, ಇದನ್ನೆಲ್ಲ ನಿರ್ಲಕ್ಷಿಸಿದ ಅವರು ಈಗ ಬಸಪ್ಪ ಸತ್ತ ಮೇಲೆ ರೈತ ಸಂಘದಿಂದ ಭೀಮಸೇನನನ್ನು ಅಮಾನತ್ತುಗೊಳಿಸಿದ್ದಾಗಿ ಹೇಳಿ ಅವನನ್ನು ಉಳಿಸಲು ಪ್ರಯತ್ನಿಸುತ್ತಿದ್ದಾರೆ. ಭೀಮಸೇನನಿಗೆ ಶಿಕ್ಷೆಯಾಗುವಂತೆ ನೋಡಿಕೊಂಡು ರೈತ ಸಂಘದ ನಾಯಕರು ಹಸಿರು ಶಾಲಿನ ಮರ್ಯಾದೆ ಉಳಿಸಬೇಕಿದೆ.

-ವರದಿಗಾರ

ಸ್ಲಮ್ ಭೂಮಿಗೆ ದುಷ್ಟರ ಕೈ!

ಮಂಡ್ಯ


ಡಾ. ಬಿ. ಶಿವಲಿಂಗಯ್ಯ ಎಂಬ ಮಾಲಿನ್ಯದ ಮನುಷ್ಯ ಮಂಡ್ಯದ ಸ್ಲಮ್‌ಗಳನ್ನು ನುಂಗುತ್ತಲೇ ಬಂದಿದ್ದಾನೆ. ಈಗಿವನ ಭೂದಾಹಕ್ಕೆ ಬಲಿಯಾಗುತ್ತಿರುವುದು ಮಂಡ್ಯದ ತಮಿಳು ಕಾಲೋನಿ ಎಂಬ ಸ್ಲಮ್. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾಜಿ ಅಧ್ಯಕ್ಷನಾಗಿರುವ ಈ ಶಿವಲಿಂಗಯ್ಯನಿಗೆ ಕೊಳಗೇರಿಗಳೆಂದರೆ ಅಷ್ಟೊಂದು ಪ್ರೀತಿ! ಜಿಲ್ಲಾದಳಿತ, ನಗರ ಸಭೆಗಳಿಗೆ ದಂಡ ಜಡಿದ ಹೈಕೋರ್ಟ್ ತಮಿಳು ಕಾಲೋನಿ ಜನಕ್ಕೆ ಸೈಟ್ ಹಂಚಿರಿ ಎಂದು ಉಗಿದಿದೆ. ಆದರೆ ಹಂಚಲು ಇಲ್ಲಿ ಭೂಮಿ ಉಳಿದಿದ್ದರೆ ತಾನೆ? ಒಂದು ಕಡೆ 'ಶಿವಲಿಂಗ' ಪ್ರತಿಷ್ಠಾಪನೆಗೊಂಡಿದ್ದರೆ ಇನ್ನೊಂದು ಕಡೆ ಡಾಕ್ಟರುಗಳ ಅಸೋಸಿಯೇಷನ್ ಇಸ್ಪೀಟು ಕ್ಲಬ್ ಆಗಿದೆ. ನಿವೃತ್ತ ಡಿಎಚ್‌ಓ ಶಿವರಾಮಯ್ಯ ಸ್ಲಮ್ ಭೂಮಿ ನುಂಗಿ ದಣಿವು ಆರಿಸಿಕೊಳ್ಳುತ್ತಿದ್ದಾನೆ.

1921 ರಲ್ಲಿ ಕನ್ನಂಬಾಡಿ ಡ್ಯಾಮ್ ಕಟ್ಟಲು ಬಂದ ತಮಿಳು ಕೂಲಿಕಾರರು ಇಲ್ಲೇ ಪರ್ಮನೆಂಟಾಗಿರಲು ನಿರ್ಧರಿಸಿ ಈಗಿನ ಜಿಲ್ಲಾ ಆಸ್ಪತ್ರೆಯ ಪಕ್ಕದ ವಿಶಾಲ ಐದೂವರೆ ಎಕರೆಯಲ್ಲಿ ಸ್ಲಮ್ ನಿರ್ಮಿಸಿಕೊಂಡರು. ಎಸ್.ಡಿ. ಜಯರಾಂ, ಆತ್ಮಾನಂದ, ಎಂ.ಕೆ. ರಾಮಲಿಂಗೇಗೌಡ-ಹೀಗೆ ಬಹುತೇಕ ರಾಜಕಾರಣಿಗಳೆಲ್ಲ ಅಪಾರ ಬೆಲೆಯ ಈ ಭೂಮಿಗೆ ಆಶೆಪಟ್ಟವರೇ. ಅಸಲಿಗೆ ಈ ಭೂಮಿ ಬೋರಲಿಂಗ ಕತ್ತೆ ಜೋಗಿ ಎಂಬುವವನಿಗೆ ಸೇರಿದ್ದು. 1948 ರಲ್ಲಿ ಈ ಭೂಮಿಯನ್ನು ಸರ್ಕಾರ ವಶ ಮಾಡಿಕೊಂಡಿತ್ತು, ಹಾಗೆಯೇ ಬಿ. ಶಿವಲಿಂಗಯ್ಯನ ಅಪ್ಪ ಬೋರೇಗೌಡನ ಜಮೀನನ್ನು ಮೈಸುಗರ್ ಸ್ಕೂಲ್‌ಗಾಗಿ ಸರ್ಕಾರ ಪಡೆದುಕೊಂಡಿತ್ತು, ಇದಕ್ಕೆ ಬದಲಾಗಿ ಇದೇ ತಮಿಳು ಕಾಲನಿಯ ಅಂಚಿನ ಸರ್ವೆ ನಂ. 21/B ನ ಒಂದೂ ಕಾಲು ಎಕರೆ ಭೂಮಿ ಶಿವಲಿಂಗಯ್ಯನ ಅಪ್ಪನಿಗೆ ಮಂಜೂರಾಗಿತ್ತು, ಉಳಿದ ಜಾಗವನ್ನು ಇವತ್ತಿನ ತಮಿಳು ಕಾಲೋನಿಯ ಜನರಿಗೆ ಸೈಟುಗೊಂಡು ಎಂಡಾರ್ಸ್‌ಮೆಂಟ್ ಮಾಡಿ ಹಂಚಲಾಗಿತ್ತು, ಉಳಿದ ಜಾಗದಲ್ಲಿ ಅಸೆಂಬ್ಲರ್ ಫಾರ್ಮ್



ನಡೆಸಲು ನಗರಸಭೆ ನಿರ್ಧರಿಸಿತ್ತು. ಫಾರ್ಮ್ ಸ್ಥಾಪಿಸಲು ಉದ್ದೇಶಿಸಿದ ಜಾಗ ತನ್ನದೆಂದು ಬಂದ ಶಿವಲಿಂಗಯ್ಯನ ಅಣ್ಣ ಮಂಚೇಗೌಡ! 1948 ರಲ್ಲಿ ಸರ್ಕಾರದ ವಶವಾಗಿದ್ದ ಸರ್ವೆ ನಂ. 21 ರ ಭೂಮಿಯ ಖಾತಾಪತ್ರದಲ್ಲಿ ಮಾಲೀಕನ ಹೆಸರು ಬೋರಲಿಂಗ ಎಂದಿರುವ ಬದಲು ಬರೀ 'ಬೋರ' ಎಂದಿತ್ತು. ಶಿವಲಿಂಗಯ್ಯನ ಅಪ್ಪನ ಹೆಸರು ಬೋರೇಗೌಡ ಎಂದಿದ್ದರಿಂದ ಆ 'ಬೋರ'ನೇ ನಮ್ಮಪ್ಪ ಎಂದು ರೀಲು ಬಿಟ್ಟು ಅಂದಿನ ತಹಶೀಲ್ದಾರರ ಕೈ ಬೆಚ್ಚಗೆ ಮಾಡಿ ಈ ಭೂಮಿಯನ್ನು ಅಕ್ರಮವಾಗಿ ಮಂಜೂರು ಮಾಡಿಸಿಕೊಂಡಿತ್ತು ಶಿವಲಿಂಗಯ್ಯನ ಫ್ಯಾಮಿಲಿ!

ಶಿವಲಿಂಗಯ್ಯನೇನೂ ಮಂಡ್ಯದ ಪಾಲಿಗೆ ಕಡಿಮೆ ಕುಳವೇನಲ್ಲ. ಪತ್ನಿ ಮೀರಾ ರೋಟರಿ ಕ್ಲಬ್ ಅಧ್ಯಕ್ಷೆಯಾದರೆ, ಅಣ್ಣ ಬಿ. ರಾಜಣ್ಣ ನಗರಸಭೆ ಕೌನ್ಸಿಲರ್. ಸರ್ಕಾರ ಕೊಟ್ಟಿದ್ದ ಭೂಮಿಯನ್ನು ಲೇಔಟ್ ಮಾಡಿ ದುಡ್ಡು ಮಾಡಿರುವ ಶಿವಲಿಂಗ್ಸ್ ಕುಟುಂಬ ಉಳಿದ ಭೂಮಿಯಲ್ಲಿ ಕಾಲೇಜ್ ಒಂದನ್ನು ಎಬ್ಬಿಸಿದೆ. ಇದರ ವಿರುದ್ಧ ಲೋಕಲ್ ಸ್ಲಮ್ ಲೀಡರ್ ವೆಂಕಟೇಶನ ನೇತೃತ್ವದಲ್ಲಿ ಪ್ರತಿಭಟಿಸಿದ ಸ್ಲಮ್ ನಿವಾಸಿಗಳ ಬಾಯಿ ಮುಚ್ಚಿಸಿದ್ದರು ಆತ್ಮಾನಂದರು! ಈಗ ನ್ಯಾಯಾಲಯ ಸ್ಲಮ್ ಜನರ ಪರ ತೀರ್ಪು ನೀಡಿದೆ. ಕೇವಲ ಐದು ಸಾವಿರ ರೂ.ಗಳಿಗೆ 111 X 271 ಅಡಿ ಸ್ಲಮ್ ಭೂಮಿ ಗಿಟ್ಟಿಸಿರುವ ಮೆಡಿಕಲ್ ಅಸೋಸಿಯೇಷನ್ ಅಲ್ಲಿ ಇಸ್ಪೀಟು ಕ್ಲಬ್ ನಿರ್ಮಿಸಿಕೊಂಡಿದೆ. ನಿವೃತ್ತ ಡಿಎಚ್‌ಓ ಶಿವರಾಮಯ್ಯ ಸ್ಲಮ್ ಭೂಮಿ ಕಬಳಿಸಿ ಅಂಗಡಿ ಮಳಿಗೆಗಳನ್ನು ಮಾಡಿ ಬಾಡಿಗೆಗೆ ಕೊಟ್ಟಿದ್ದಾನೆ. ಈ ತಮಿಳು ಕಾಲನಿ ಪಕ್ಕದ ಜಾಗದಲ್ಲಿ ಮೆಡಿಕಲ್ ಕಾಲೇಜೊಂದು ಆರಂಭವಾಗಬಹುದಾದ್ದರಿಂದ ಸ್ಲಮ್ ಭೂಮಿಗೆ ಚಿನ್ನದ ಮೌಲ್ಯ ಬಂದಿದೆ. ಎಸ್.ಎಂ. ಕೃಷ್ಣ ಮೂಲಕ ಜಿಲ್ಲಾಧಿಕಾರಿ ರವಿಶಂಕರನನ್ನು ತೆಪ್ಪಗೆ ಮಾಡಿದ್ದಾನೆ ಬಿ.ಶಿವಲಿಂಗಯ್ಯ. ನಗರಸಭೆ ನೌಕರ ರಾಮು ಆತ್ಮಹತ್ಯೆ ನಂತರ ಆಯುಕ್ತ ಕೃಷ್ಣಮೂರ್ತಿ ಸ್ವಲ್ಪ . ತಣ್ಣಗಾಗಿದ್ದಾರೆ. ಹೈಕೋರ್ಟ್ ತೀರ್ಪೇ ಸ್ಲಮ್ ಜನರ ಪರ ಇರುವುದನ್ನು ಶಾಸಕ ಶ್ರೀನಿವಾಸ್ ಗಮನಿಸಬೇಕಾಗಿದೆ.



ತಮಿಳು ಕಾಲೋನಿ ಸ್ಲಮ್

ರಾಜಕಾರಣಿಗಳ ಸ್ವತ್ತೇ?

ಮಾಜಿ ಸಚಿವ ದಿವಂಗತ ಜಯರಾಂ ಸಹ ಡಿಮರಿ ಕಾಲಿನಿಗೆ ಕಣ್ಣು ಹಾಕಿದ್ದವರೇ. ಪ್ಯೂ ತಮಿಳು ಕಾಲನಿಯನ್ನು ಲೋಕಲ್ ಪುಢಾರಿಗಳು ಹರಿದು ಮುಕ್ಕಿದರು. ಓಲ್ಡ್ ತಮಿಳು ಕಾಲೋನಿ ಕೈಯಿಡದ ರಾಜಕಾರಣಿಗಳೇ ಇಲ್ಲವೇನೋ? ಸದ್ಯಕ್ಕೆ ಮೈಸೂರು-ಬೆಂಗಳೂರು ರಸ್ತೆಯ ಸ್ಲಮ್ ಒಂದರ ಮೇಲೆ ಬಿಜೆಪಿ ಜಿಲ್ಲಾಧ್ಯಕ್ಷ ಎಚ್. ಹೊನ್ನಪ್ಪನ ಕಣ್ಣು ಬಿದ್ದಿದೆ. ಸದ್ಯಕ್ಕೆ ಮಂಡ್ಯ ಸ್ಲಮ್ ಜನರಿಗೆ ಮುಕ್ತಿ ಸಿಗುವುದಾದರೆ ಅದು ಹೈಕೋರ್ಟ್ ತೀರ್ಪಿನಿಂದ ಮಾತ್ರ! ಶಾಸಕ ಶ್ರೀನಿವಾಸ ಸ್ಲಮ್ ಜನರಿಗೆ [illegible]

ಶಾಸಕ ಬಸವಣ್ಣಗೊಬ್ಬ ಅಮ್ಮಣ್ಣಿ

ಬ್ಲೇಡ್ ಫಾಲಾಕ್ಷಿಗೆ ಸ್ತ್ರೀ ಶಕ್ತಿ ಗೂಸಾ!

ಶಿವಮೊಗ್ಗದ ... ನೊಬ್ಬನನ್ನು ಹಿಡಿದು ... ಪೊಲೀಸರಿಗೆ ... ಿದ್ದಾರೆ. ಈ ಶಾಸ್ತ್ರಿಯ ... ಮ ಫಾಲಾಕ್ಷ. ದುಡ್ಡು ... ುವವರಲ್ಲಿ ನಿಸ್ಸೀಮ. ... ಮಾ. ಬಡ ವರ್ಗಗಳ ... ರ ಕಣ್ಣುಗಳಲ್ಲಿ ಬಣ್ಣದ ... ುಗಳನ್ನು ಕ್ಷಣಾರ್ಧದಲ್ಲಿ ... ಬಿ ಕಾಸು ಎತ್ತುವ ... ವಿಯೀತ. ಬಣ್ಣದ ... ತುಗಳೇ ಇವನ ... ದವಾಳ. ಅಲ್ಲಿಗೆ ... ನನ್ನು ನಂಬಿ ... ದವಾಳ ಕೊಟ್ಟವರಿಗೆ ... ೂ ಇಲ್ಲ, ಬಡ್ಡಿಯೂ ... ಏಕೆಂದರೆ ಫಾಲಾಕ್ಷ



ಫಾಲಾಕ್ಷ

...ವವನ ಉಸಿರೇ ನಕಲಿ ನಕಲಿ! ಇವನಿಗೆ ಹಡಬೆ ...ು ಎತ್ತಲು ಸಾಕ್ಷಾತ್ ದುರ್ಗಾದೇವಿಯೇ ಕನಸಲ್ಲಿ ...ು ಆದೇಶಿಸಿದಳಂತೆ. ಅಷ್ಟಕ್ಕೇ ಕಾರ್ಯ ಪ್ರವೃತ್ತನಾದ ...ಾಲ್ತು ಫಾಲಾಕ್ಷ ದಾವಣಗೆರೆಯಿಂದ ಶಿವಮೊಗ್ಗಕ್ಕೆ ...ೂರಾತ್ರಿ ನೆಗೆದು ಬಂದ. ದಾವಣ ಗೆರೆಯ ಜನ ...ೇ ಈ ಟೋಪಿವಾಲನ ತಪರಾಕಿ ಕೆಲಸಗಳನ್ನು ...ಡಿದ್ದರಿಂದ ಇವನು ಶಿವಮೊಗ್ಗಕ್ಕೆ ಶನಿಯಾಗಿ ...ಾರ್ಪಣೆ ಮಾಡಿದ. ಬಂದವನೇ ಜೈಲ್ ರಸ್ತೆಯಲ್ಲಿ ... ದುರ್ಗಾದೇವಿ ಶಿಕ್ಷಣ, ಆರೋಗ್ಯ ಮತ್ತು ಸಮಾಜ ...ಣ ಸೊಸೈಟಿ (ರಿ)' ಎನ್ನೋ ಬೋರ್ಡು ನೇತಾಕಿ ...ು ವರ್ಷಗಳಲ್ಲಿ ಬಡವರ ಬದುಕಿಗೆಲ್ಲ ನೇಣಾಕಿದ.

ನಾಲ್ಕು ಸ್ಕೀಮು.....
14 ಸ್ಕ್ಯಾಮು!

ಈ ಟೋಪಿವಾಲ ಒಂದಲ್ಲ, ನಾಲ್ಕು ಬಣ್ಣದ ...ಯ ಟೋಪಿಗಳನ್ನು ರೆಡಿ ಮಾಡಿಕೊಂಡ. ಇವು ... ಸ್ಕೀಮ್‌ಗಳು. ಶಿವಮೊಗ್ಗ, ಶಿಕಾರಿಪುರ ತಾಲ್ಲೂಕು ...ಹಳ್ಳಿ ಹಳ್ಳಿಗಳನ್ನು ಹೊಕ್ಕು ತನ್ನ ನಕಲಿ ಸ್ಕೀಮ್‌ಗಳಿಗೆ ...ು ಎತ್ತತೊಡಗಿದ ಈ ಬಡ್ಡಿಮಗ. ಕೊಮ್ಮನಾಳು, ...ೂರಿನಂತಹ ಗ್ರಾಮಗಳಲ್ಲೇ 350 ಕ್ಕೂ ಹೆಚ್ಚು ...ಗೆ ಈತ ಟೋಪಿ ಧಾರಣೆ ಮಾಡಿಬಿಟ್ಟ! 600ರೂ. ... ಹಿಡಿದು 5000 ರೂ. ಗಳವರೆಗೂ ಲಕ್ಷ ...ಾಯಿ ಎಬ್ಬಿಸುವ ಸ್ಕೀಮುಗಳನ್ನೂ ಭರ್ಜರಿ ...ಗಿಯೇ ನಡೆಸಿದ. ತನ್ನ ದುರ್ಗಾದೇವಿ ಸಂಸ್ಥೆಯಲ್ಲಿ ... ಹೂಡಿದರೆ ಆರಂಭದಲ್ಲಿ ಒಂದೂವರೆ ಸಾವಿರ, ನಂತರ ಮಂತ್ಲಿ ಮಂತ್ಲಿ ಐನೂರು ರೂಪಾಯಿ ಎಕ್ಸ್‌ಟ್ರಾ ಕಾಸು ಕೊಡುವೆ ಎಂದು ಪುಂಗಿ ಬಿಟ್ಟು ಹಣ ಎತ್ತಿದ ಈ ಫಾಲಾಕ್ಷ ಕೊನೆಗೆ ಮಾಡಿದ್ದು ದುರುಗ-ಮುರುಗಿ ಜಾತ್ರೆಯನ್ನು! ಅಂದರೆ ಯಾರದೋ ದುಡ್ಡಲ್ಲಿ ದುರ್ಗಮ್ಮನ ಜಾತ್ರೆ! ತನ್ನ ಸಂಸ್ಥೆಗೆ ಹೊಸ ಸದಸ್ಯರನ್ನು ಪರಿಚಯಿಸಿದವರಿಗೆ ಕಮೀಷನ್ ಕೊಡುವೆನೆಂದು ಹೇಳಿ ಜನರಿಗೆ ಡಿಕಾಕ್ಷನ್ ಕುಡಿಸಿದ. ಆರಂಭದಲ್ಲಿ ಒಂದಿಷ್ಟು ಬಣ್ಣದ ಗಿಫ್ಟ್ ಹ್ಯಾಂಪರುಗಳನ್ನು ಹಂಚಿದವನು ನೋಡು ನೋಡುತ್ತಿದ್ದಂತೆ ಎಲ್ಲಿಗೋ ಶಿಫ್ಟ್ ಆಗಿಬಿಟ್ಟಿದ್ದ. ಈತನ ಗಿಫ್ಟ್ ಮೇಳಗಳೆಂಬ ನಾಟಕಗಳಲ್ಲಿ ಲೋಕಲ್ ಪುಡಾರಿಗಳು ಹಾಜರಾಗಿ ಜನರಿಗೆ ಮಂಕುಬೂದಿ ಎರಚಿಬಿಟ್ಟರು.

ಸ್ತ್ರೀ ಶಕ್ತಿಗೂ ಬತ್ತಿ ಇಕ್ಕಿದ ಈ ಪಡಪೋಶಿ ಫಾಲಾಕ್ಷ, ಪಾರ್ವತಿ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಭುವನೇಶ್ವರಿ ಸಂಘ, ಸರಸ್ವತಿ ಸ್ವಸಹಾಯ ಸಂಘ, ಗಂಗಾಮತ ಸ್ವಸಹಾಯ ಸಂಘ-ಹೀಗೆ ಹಲವಾರು ಸ್ತ್ರೀ ಶಕ್ತಿ ಗುಂಪುಗಳ ಹಣ ದೋಚಿ ಅವನ್ನೆಲ್ಲಾ ಮೂಲೆಗುಂಪು ಮಾಡಿಬಿಟ್ಟ. ಸ್ತ್ರೀ ಶಕ್ತಿ ಸಂಘಗಳಿಂದಲೇ ಆರೇಳು ಲಕ್ಷ ಹಣ ನುಂಗಿದ್ದಾನೆ ಈ ನುಂಗೇಶಿ ಫಾಲಾಕ್ಷ!

ಕಳೆದ 6 ತಿಂಗಳಿಂದ ಹಳ್ಳಿಗಳ ಕಡೆ ಹಾಯುವುದನ್ನೇ ನಿಲ್ಲಿಸಿದ ಫಾಲಾಕ್ಷ ಯಾರಿಗೂ ಸಿಗದಂತೆ ಪಿಶಾಚಿಯಂತೆ ಅಲೆಯತೊಡಗಿದ. ಯಾರಾದರೂ ಫೋನ್‌ನಾಗ ಕಾಲ್ ಮಾಡಿದರೆ ಕಾಸು ಹಳ್ಳುವಲ್ಲದ್ದೇನೆಂದು ಸುಳ್ಳು ಹೇಳಿ ... ಜಾಗದಿಂದ ಕಾಲು ಕಿತ್ತುತ್ತಿದ್ದ. ಇದರಿಂದ ಹಳ್ಳಿಹಳ್ಳಿಗಳ ಸ್ತ್ರೀ ಶಕ್ತಿ ಗುಂಪುಗಳು ಕೆರಳಿ ಕೆಂಡದಾಗಿದ್ದವು. ಸಿಕ್ಕಿಬಿಟ್ಟ ಫಾಲಾಕ್ಷ ಎಸ್ಕೇಪಿಸುವಂತೆಯೇ ಪಾರಾಗಿ ಬಿಡುತ್ತಿತ್ತು ಈ ಪಾಪಿ ಫಾಲಾಕ್ಷ ಎಂಬ ಗಣ ಪಿಶಾಚಿ!

ಶಿವಮೊಗ್ಗ

ಈತನಿಗಾಗಿ ನಾಲ್ಕೈದು ದಿನ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಹುಡುಕಾಡಿದ ಸ್ತ್ರೀಶಕ್ತಿ ಗುಂಪುಗಳು ಕೊನೆಗೆ ದಿಢೀರ್ ದಾಳಿ ಮಾಡಿ ಫಾಲಾಕ್ಷಗೆ ಮುತ್ತಿಕೊಂಡು ಚಪ್ಪಲಿಯ ಮುತ್ತುಗಳನ್ನು ಇಕ್ಕಿ, ಶಿವಮೊಗ್ಗ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಮಾದಪ್ಪನ ಮುಂದೆ ಮಾರ್ಚ್ 22 ರಂದು ತಂದು ಒಗೆದವು. ಪೋಲೀಸರು ಈತನ ಮನೆ, ಈತನ ದೇವಿ ದುರಗವ್ವನ ಹೆಸರಿನ ಕಚೇರಿ ಹುಡುಕಿದರೂ ನಯಾಪೈಸೆ ಸಹ ಸಿಕ್ಕಿಲ್ಲ.

ಬಸವಣ್ಣಿಯ ಅಮ್ಮಣ್ಣಿ!

ಈ ಪಾಪಿ ಫಾಲಾಕ್ಷಗೆ ಬೆನ್ನಿಗೆ ನಿಂತವನು ಹೊಳೆಹೊನ್ನೂರಿನ ಶಾಸಕ ಜೆ. ಬಸವಣ್ಣಪ್ಪ, ಮೂಲತಃ ಶಿಕಾರಿಪುರ ತಾಲೂಕಿನ ನೇರಲಗಿ ಗ್ರಾಮದವನಾದ ಫಾಲಾಕ್ಷಯ ಅತ್ತೆ ಶೃಂಗೇರಿ ತಾಲೂಕಿನ ಗ್ರಾಮ ಪಂಚಾಯಿತಿ ಸದಸ್ಯೆ ಜಯಮ್ಮ. ಇದರ ನೆವದಿಂದಲೇ ಒಂದಿಷ್ಟು ಪೊಲಿಟಿಕಲ್ ಪುಡಾರಿಗಳು ಇವನಿಗೆ ಪರಿಚಯಸ್ಥರಾದರು.

ಹಾಗೆಯೇ ಶಾಸಕ ಬಸವಣ್ಣಿಯ ಪಾಲಿಗೂ ಇವನು ಅಮ್ಮಣ್ಣಿಯಾಗಿ ಬಿಟ್ಟ. ಸಾಲದ ಸ್ಕೀಮು, ಬಡ್ಡಿ ಸ್ಕೀಮು, ಗಿಫ್ಟ್ ಸ್ಕೀಮುಗಳೆಂಬ ಇವನ ನಿತ್ಯ ನಾಟಕಗಳನ್ನು ಉದ್ಘಾಟಿಸಲು ಶಾಸಕ ಬಸವಣ್ಣಿಗೆ ಎಲ್ಲಿಲ್ಲದ ಖುಷಿ ಇರುತ್ತಿತ್ತು. ಹಿಂದೆ ದಾವಣಗೆರೆಯಲ್ಲಿದ್ದಾಗಲೇ ಆದೀಶ್ವರ ಮಾರ್ಕೆಟಿಂಗ್‌ನಲ್ಲಿ 'ಟೋಪಿ ಟ್ರೇನಿಂಗ್' ಪಡೆದುಕೊಂಡಿದ್ದ ಫಾಲಾಕ್ಷ 'ಸುಮುಖ ಮಾರ್ಕೆಟಿಂಗ್' ಎನ್ನುವ ಕಾಮನಬಿಲ್ಲಿನ ಟೋಪಿ ರೆಡಿ ಮಾಡಿ ಜನರಿಗೆ ತೊಡಿಸುವ ಮುನ್ನವೇ ಸ್ತ್ರೀ ಶಕ್ತಿ ಗುಂಪುಗಳು ಇವನನ್ನು 'ಇಸ್ತ್ರಿ' ಮಾಡಿ ಪೋಲೀಸರಿಗೊಪ್ಪಿಸಿವೆ.



ಸಂಸ್ಥೆಯ ಜ್ಯೋತಿ ಬೆಳಗಿಸುತ್ತಿರುವ ಶಾಸಕ ಬಸವಣ್ಣ

ಶಿವಮೊಗ್ಗದ ಹಳ್ಳಿಗಳ ಮಹಿಳೆಯರಿಗೆ, ಬಡವರಿಗೆ ಹಣ ವಾಪಸ್ಸು ಕೊಡಿಸುವ ಜವಾಬ್ದಾರಿ ಪೋಲೀಸರದು. ಹಾಗೆಯೇ ಶಾಸಕ ಬಸವಣ್ಣಿಯದೂ ಕೂಡ. ■

BEO ಉಮಾದೇವಿಯ ವಸೂಲಿ ದಂಧೆ!

ಚಿಕ್ಕಮಗಳೂರು

...ಚಿಕ್ಕಮಗಳೂರು ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ ...ಾರ ವಹಿಸಿಕೊಂಡು ವರ್ಷ ಕಳೆಯುವ ಹೊತ್ತಿಗೆ ...ಬೆಯ ದಶದಿಕ್ಕುಗಳಲ್ಲೂ ತಮ್ಮ ಕೀರ್ತಿಯನ್ನು ...ಸ್ಥಾಪಿಸಿಕೊಂಡಿದ್ದಾರೆ. ಈ ಕೀರ್ತಿ ಉಮಾದೇವಿಯ ...ಅವತಾರದಿಂದ ಬಂದದ್ದು ಎಂಬುದು ಮಾತ್ರ ...ದಕರ.

...ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿದ್ದ ...ಮಾದೇವಿಯನ್ನು ಶಿಕ್ಷಕರ ಸಂಘದ ಒಂದು ಬಣ ...ೂ ದಲಿತ ಸಂಘರ್ಷ ಸಮಿತಿಯ ಒಂದು ಬಣ ... ಹಿಂದುಳಿದ ಸಮುದಾಯದ ನೌಕರರಿಗೆ ...ಕೂಲ(?)ವಾದೀತೆಂಬ ಉದ್ದೇಶದಿಂದ ತುಂಬಾ ... ಹೇರಿ ಉಮಾದೇವಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ... ತಂದು ಕೂರಿಸಿದರು. ಕೆಲವರು ಹೇಳುವಂತೆ ...ವ್ಯವಹಾರದಲ್ಲಿ ಶೋಷಿತ ವರ್ಗಗಳ ಬಗ್ಗೆ ಕಾಳಜಿ ... ಇಲ್ಲ, ಅದು ಉಮಾದೇವಿಯೊಂದಿಗೆ ವ್ಯವಸ್ಥಿತ ...ಮಾಡಿಕೊಂಡಿದ್ದ 'ಮ್ಯಾಚ್ ಫಿಕ್ಸಿಂಗ್' ಆದಾಗಿತ್ತಷ್ಟೆ.

...ೀಗೆ ಒತ್ತಡಗಳು ಸಂಘಟನೆಗಳ ಪ್ರಭಾವದ ...ಯಲ್ಲಿ ಬಂದದ್ದಕ್ಕೋ ಏನೋ ಉಮಾದೇವಿ ...ದಲ್ಲಿ ನೌಕರರ, ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುತ್ತಿ ... ಇಲಾಖೆಯಲ್ಲೂ ಒಂದಿಷ್ಟು ಬದಲಾವಣೆಯ ...ಬೀಸುತ್ತಿತ್ತು. ಆದರೆ ಈ ಬದಲಾವಣೆ ಬೀಸುವ ... ಕ್ಷಣಿಕವಾದದ್ದು ಎಂಬುದು ಅನುಭವಕ್ಕೆ ...ಬರತೊಡಗಿತು. ತಮ್ಮ ಆರಂಭಶೂರತ್ವದ ಕಾಳಜಿಗಳೆಲ್ಲಾ ...ಸ ದಿನಗಳ ಕಮಾಯಿ ವ್ಯವಹಾರಗಳಿಗೆ ಹಾಕಿದ ...ದಿ ಎಂಬುದನ್ನು ಅರ್ಥ ಮಾಡಿಕೊಳ್ಳಲು ...ನೂ ಆಗಲಿಲ್ಲ.

...ಉಮಾದೇವಿ ತಮ್ಮ ಅಸಲಿ ವರಸೆಯ ಕಾರ್ಯ... ಚಾಲನೆ ನೀಡಿದರು. ಕಛೇರಿಯ ಸಿಬ್ಬಂದಿ, ...ಗೆ ಶಿಕ್ಷಕರಿಗೂ ಕಿರುಕುಳ ನೀಡಲಾರಂಭಿಸಿದರು. ...ೂ ಕಛೇರಿ ಸಂಬಂಧಿ ಕೆಲಸಗಳನ್ನು ಮಾಡಿ... ಸತಾಯಿಸುವುದು, ಸಣ್ಣಪುಟ್ಟ ಕೆಲಸಗಳಿಗೂ ...ದಿಮ್ಯಾಂಡ್ ಮಾಡುವುದು ನಿತ್ಯದ ಅನುಭವ ...ವೆ.

ಅಮಾಯಕ ಶಿಕ್ಷಕರ ಮೇಲೆ ದೌರ್ಜನ್ಯಯುತ ನಡವಳಿಕೆ ಪ್ರದರ್ಶಿಸುತ್ತ, ಕಾನೂನು ವ್ಯಾಪ್ತಿಯಲ್ಲಿ ಮಾಡಿಕೊಡಬಹುದಾದ ಕೆಲಸಗಳಿಗೂ ನಿಯಮಾವಳಿಗಳ ಹೆಸರಲ್ಲಿ ಸತಾಯಿಸುತ್ತಾ, ಹಣಕ್ಕಾಗಿ ಪೀಡಿಸಲಾರಂಭಿಸಿದರು. ವರ್ಗಾವಣೆ ಮತ್ತು ನಿಯೋಜನೆಗಳಲ್ಲಂತೂ ಉಮಾದೇವಿಯದು 'ಭಲಾರೇ ಭೋಜನ!' ಬೇರೆ ತಾಲ್ಲೂಕು, ಜಿಲ್ಲೆಗಳಿಂದ ವರ್ಗವಾಗಿ ಬರುವವರಿಗೆ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಲು ಅವಕಾಶ ನೀಡದೆ ಕಛೇರಿಗೆ ಅಲೆಸುವುದು, ಇಲ್ಲಿಂದ ಬೇರೆ ಕಡೆ ವರ್ಗಾವಣೆಯಾಗಿ ಹೋದವರಿಗೆ ನಿಯಮಾವಳಿಗಳ ನೆಪಹೇಳಿ ರಿಲೀವ್ ಆರ್ಡರ್ ಕೊಡದೇ ವಿಳಂಬ ಮಾಡುವುದು. ಅಂತಹವರು ಹಣ ಕಕ್ಕಲೇಬೇಕಾದ ಸನ್ನಿವೇಶ ನಿರ್ಮಿಸುವುದು. ನಿಯೋಜನೆಗಳನ್ನು ಶಿಕ್ಷಕರಿಗಿಟ್ಟೆ ಬಂದಕಡೆ ಮೂಢ ವ್ಯವಹಾರ ಕುದುರಿಸಿಕೊಳ್ಳುವುದು ಎಲ್ಲವನ್ನೂ ಸಲೀಸಾಗಿ ಮಾಡುತ್ತಾರೆ. ಉಮಾದೇವಿಯ ದರ್ಬಾರಿನಲ್ಲಿ ವೇತನ ದೃಢೀಕರಣ ಪತ್ರಕ್ಕೂ ಇಂತಿಷ್ಟು ಎಂದು ಹಣ ಕಟ್ಟಲೇಬೇಕು. ಇನ್ನು ಯಾರಾದರೂ ಶಿಕ್ಷಕರು ಬ್ಯಾಂಕ್ ಸಾಲ ಸೌಲಭ್ಯ ಪಡೆಯಲು ದೃಢೀಕರಣ ಪತ್ರ ಕೇಳಿದರೆ ಅದಕ್ಕೂ ಹಣ ಮಡಗಬೇಕು. ಲಕ್ಷಕ್ಕೆ ಒಂದು ಸಾವಿರ ದಂತೆ ಎಷ್ಟು ಲಕ್ಷ ಲೋನು ಮಾಡಿಸಿದರೂ ಅಷ್ಟು ಸಾವಿರ ರೂಪಾಯಿ ಕಪ್ಪ ಸಲ್ಲಿಸಲೇಬೇಕು. ಕೊಡದಿದ್ದರೆ ಮತ್ತೆ ಚಪ್ಪಲಿ ಸವೆಸಿಕೊಂಡು ಕಛೇರಿಗೆ ಅಲೆಯಬೇಕು.



ಉಮಾದೇವಿಯ ವ್ಯವಹಾರಗಳೆಲ್ಲಾ ರಂಗೋಲಿಯ ಕೆಳಗೆ ತೂರುವ ಶೈಲಿಯದ್ದು. ವಶೀಲಿ ಬಾಜಿ ಕೆಲಸಗಳಿಗೆಲ್ಲಾ ಖಾಸಗಿ ಏಜೆಂಟರನ್ನು ಫಿಕ್ಸ್ ಮಾಡಿಬಿಡುತ್ತಾರೆ. ಈ ಖಾಸಗಿ ಏಜೆಂಟರು ಇಲಾಖೆಯ ಅಧಿಕೃತ ನೌಕರರು, ಶಿಕ್ಷಕರ ಮೇಲೆಯೇ ಸವಾರಿ ಮಾಡುವಷ್ಟು ಉದ್ದಟತನ ಪ್ರದರ್ಶಿಸುತ್ತಾರೆ. ಈ ಖಾಸಗಿ ಏಜೆಂಟರ ಜೊತೆಗೆ ಪಶುಸಂಗೋಪನಾ ಇಲಾಖೆಯಲ್ಲಿ ನೌಕರನಾಗಿರುವ ಉಮಾದೇವಿ ನಿಭಾಯಿಸುತ್ತಾನೆ. ವರ್ಗಾವಣೆ ನಿಯೋಜನೆಗಳಿಗೆಂದು ಉಮಾದೇವಿಯ ಮನೆಗೆ ಹೋದವರಿಗೆ ಬಿಇಓ ಉಮಾದೇವಿಗೋ ಇಲ್ಲ ಆಕೆಯ ಪತಿರಾಯ ಮೊರೆಯಾ ಎಂಬ ಸಂಶಯ ಬರುತ್ತದೆ. ಆತ ನೇರವಾಗಿ ಡೀಲಿಗೆ ಕುಳಿತುಬಿಡುತ್ತಾನೆಂಬುದು ಕೆಲ ಶಿಕ್ಷಕರ ದೂರು.

ಇಷ್ಟರ ನಡುವೆ ಉಮಾದೇವಿ ಬಿಇಓ ಆಗಿ ಕರ್ತವ್ಯಕ್ಕೆ ಬಂದಾಗ ಅಲ್ಲಿದ್ದ ಕುಮಾರಸ್ವಾಮಿಯವರು ವರ್ಗಾವಣೆ ಮಾಡಿದ್ದರೂ ಪೋಸ್ಟಿಂಗ್ ಎಲ್ಲಿಯೂ ತೋರಿಸದ ಕಾರಣ ಆತ ಕೆಎಟಿಗೆ ಹೋಗಿದ್ದನೆಂದು. ಅಲ್ಲಿ ಉಮಾದೇವಿಗೆ ಅನುಕೂಲಕರವಾದ ... ಬಂದಿದೆ ಎಂದೂ ಹೇಳಲಾಗುತ್ತಿದೆ ... ಉಲ್ಲೇಖಿಸಲು ಇರುವ ಕಾರಣವೆಂದರೆ ಪ್ರಕರಣ ಕೆಎಟಿಯಲ್ಲಿದ್ದ ಅಷ್ಟೂ ದಿನ ಉಮಾದೇವಿಗೆ ಸಂಬಳ ಸಾರಿಗೆ ಇಲ್ಲದಿದ್ದರೂ ಆ ಬಗ್ಗೆ ಬೇಸರವೇನೂ ಇರಲಿಲ್ಲವಂತೆ. ಕೈ ತುಂಬಾ ಕಮಾಯಿ ವ್ಯವಹಾರಗಳಿರುವಾಗ ತಿಂಗಳ ಸಂಬಳವೊಂದು ಲೆಕ್ಕವೇ? ಇನ್ನು ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳದ್ದೂ ಇದೇ ರೀತಿಯ ಅನುಭವ. 'ಸಾರ್ ಪ್ರತಿಯೊಂದಕ್ಕೂ ನಿಯಮಾವಳಿ ಅಂತಾರೆ.' 'ಆಯ್ತು ಮೇಡಮ್ ಅದೇನು ಹೇಳಿ ಅಂದ್ರೆ, ದೂಸ್‌ರಾ ಮಾತನಾಡುವುದಿಲ್ಲ.' ಹಾಗೆಂದಾಕ್ಷಣ ಅವರು ಸುಮ್ಮನಾಗುವುದಿಲ್ಲ. ಏನಾದರೊಂದಿಷ್ಟು ವ್ಯವಹಾರ ಕುದುರಿಸಿದ ನಂತರವೇ ಪ್ರಕರಣ ಮುಗಿಯುತ್ತದೆ. ಇಲ್ಲವಾದರೆ ಕಛೇರಿಗೆ ಅಲೆಯುವ ಕೆಲಸ ತಪ್ಪುವುದಿಲ್ಲ ಎನ್ನುತ್ತಾರೆ.

ಇಂತಿಪ್ಪ ಉಮಾದೇವಿಯ ಸೇವೆಗೀಗ ಒಂದು ವರ್ಷ ತುಂಬಿದೆ. ಇಲಾಖೆಯ ನೌಕರವರ್ಗ, ಶಿಕ್ಷಕರು ಬಾಣಲೆಯಿಂದ ಬೆಂಕಿಗೆ ಬಿದ್ದವರಂತೆ ಒದ್ದಾಡುತ್ತಿದ್ದಾರೆ. ಹಿಂದೆ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿದ್ದ ಕುಮಾರಸ್ವಾಮಿಯೇ ವಾಸಿ, ನೌಕರರಿಗೆ-ಶಿಕ್ಷಕರಿಗೆ ತೊಂದರೆ ಕೊಡುತ್ತಿರಲಿಲ್ಲ. ಈ ಅಮ್ಮನ ದರ್ಬಾರಿನಲ್ಲಿ ನೌಕರರ್‍ಯಾರೂ ನೆಮ್ಮದಿಯಿಂದ ಕೆಲಸ ಮಾಡಲಾಗುವುದಿಲ್ಲ. ಆದಷ್ಟು ಬೇಗ ಯಾರಾದರೂ ಪುಣ್ಯಾತ್ಮರು ಉಮಾದೇವಿಗೊಂದು ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳುವ ಸದಾವಕಾಶ ಕಲ್ಪಿಸಿದರೆ, ಯಾವುದಾದರೂ 'ಪರಿಹಾರ ನಿಧಿ'ಗೆ ... ವೇತನ ಕೊಡಲು ತಯಾರಿದ್ದೇವೆ ಎಂದು ಹೇಳುತ್ತಾರೆ ಕೆಲ ಮೂಲಗಳ ಪ್ರಕಾರ ಆ ದಿನ ತುಂಬಾ ...

-ವರದಿಗಾರ

ಡಿ.ಸಿ. ಪ್ರಭಾಕರನ ಟೆಂಡರ್ ಬಾಗಲಕೋಟೆ ಜಿಲ್ಲೆ ಮಾರಾಟಕ್ಕಿದೆ!

ಆಲಮಟ್ಟಿ ಡ್ಯಾಮ್‌ನಷ್ಟು ವಿಶಾಲ ಹೊಟ್ಟೆಗಳನ್ನು ಹೊಂದಿರುವ ಡಿ.ಸಿ. ಕೆ.ಎಸ್. ಪ್ರಭಾಕರ್, ಆಹಾರ ಮತ್ತು ನಾಗರೀಕ ಇಲಾಖೆಯ ನಿರ್ದೇಶಕ ಸದಾನಂದ ಮರ್ಜೆಗಳ ಹಸಿವು ತೀರಿಸಲು ಇಡೀ ಜಿಲ್ಲೆಯೇ ಅವರ ಬಾಯಿಗಳಿಗೆ ಆಹಾರವಾಗುತ್ತಿದೆ. ಕಲಾದಗಿಯ ದ್ರಾಕ್ಷಿ, ಮಹಾಲಿಂಗಪುರದ ಕಬ್ಬು ಸವಿದಷ್ಟೇ ಸಲೀಸಾಗಿ ಈ ಇಬ್ಬರು ಬಕಾಸುರರು ಜಿಲ್ಲೆಯನ್ನೇ ಮುಕ್ಕುತ್ತಿದ್ದಾರೆ.


ಡಿ.ಸಿ. ಪ್ರಭಾಕರ್

ಕೃಷ್ಣೆ ಶಾಂತವಾಗೇ ಇದ್ದಾಳೆ... ಆದರೂ ಬಾಗಲಕೋಟೆ ಜಿಲ್ಲೆ ಮುಕ್ಕೊನ್ನು ಮುಳುಗುತ್ತಿದೆ. ಆಲಮಟ್ಟಿ ಡ್ಯಾಮ್‌ನಷ್ಟು ವಿಶಾಲ ಹೊಟ್ಟೆಗಳನ್ನು ಹೊಂದಿರುವ ಡಿ.ಸಿ. ಕೆ.ಎಸ್. ಪ್ರಭಾಕರ್. ಆಹಾರ ಮತ್ತು ನಾಗರೀಕ ಇಲಾಖೆಯ ನಿರ್ದೇಶಕ ಸದಾನಂದ ಮರ್ಜೆಗಳ ಹಸಿವು ತೀರಿಸಲು ಇಡೀ ಜಿಲ್ಲೆಯೇ ಅವರ ಬಾಯಿಗಳಿಗೆ ಆಹಾರವಾಗುತ್ತಿದೆ. ಕಲಾದಗಿಯ ದ್ರಾಕ್ಷಿ, ಮಹಾಲಿಂಗಪುರದ ಕಬ್ಬು ಸವಿದಷ್ಟೇ ಸಲೀಸಾಗಿ ಈ ಇಬ್ಬರು ಬಕಾಸುರರು ಜಿಲ್ಲೆಯನ್ನೇ ಮುಕ್ಕುತ್ತಿದ್ದಾರೆ. ಮತ್ತಿಬ್ಬರು ಭ್ರಷ್ಟ ಅಧಿಕಾರಿಗಳು ಈ ಬಕಾಸುರರ ಪಕ್ಕವೇ ಕುಳಿತಿದ್ದಾರೆ. ಬಡವರ ಆಶ್ರಯ ಮನೆ ನಿರ್ಮಾಣದಲ್ಲಿ ಸಿಮೆಂಟು ನುಂಗುವುದು, ಅದನ್ನು ಜೀರ್ಣಿಸಿಕೊಳ್ಳಲು ಮಳೆಕೊಯ್ಲು ಎಂದು 'ನೀರು' ಕುಡಿಯುವುದು, ತಾವೇ ಬೋಗಸ್ ಮೆಟರಿಯಲ್ ಸಪ್ಲೈಯರ್ ಆಗುವುದು, ಸರ್ಕಾರದ ಗೋಧಿ-ಕೆರೋಸಿನ್‌ಗಳಿಗೂ ಕೈ ಹಾಕುವುದು... ಕೊನೆಗೆ ಚಾಲುಕ್ಯ ಉತ್ಸವದಲ್ಲೂ ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ ಎಂದು ಹಬ್ಬ ಮಾಡುವುದು.. ತತ್ತರಿಸಿ ಹೋಗದೇ ಇರುತ್ತಾ ಬಾಗಲಕೋಟೆ ಜಿಲ್ಲೆ? ಸರ್ಕಾರಿ ಫಂಡ್‌ಗಳನ್ನೆಲ್ಲಿ ಮುಗಿಸುತ್ತಲೇ ಸಾಗಿರುವ ಡಿಸಿಯ ಬಕಾಸುರ ಟೀಮ್ ಸದ್ಯದಲ್ಲೇ ಈ ಜಿಲ್ಲೆಯನ್ನು ಮಾರಾಟಕ್ಕಿಡಲು ಟೆಂಡರ್ ಕರೆಯಲಿದೆಯೇನೊ?

ನಿರ್ಮಿತಿ: money-ಮನೆ ಕತೆ!

2003 ರಲ್ಲಿ ಸಚಿವನಾಗಿದ್ದ ತಿಮ್ಮಾಪುರ ಎಂಬ ಮಂಕುತಿಮ್ಮನಿಗೆ ಸಕಲ ಸೇವೆ ಮಾಡಿ ಕೋಟೆ ಹೊಕ್ಕ ಪ್ರಭಾಕರ ಎಂಬ ಹೆಗ್ಗಣದ ಉಪಟಳಕ್ಕೆ ಕೋಟೆಯೇ ಕುಸಿಯುತ್ತಿದೆ.

'ಮನೆಯೇ ಮೊದಲ ಪಾಠಶಾಲೆ' ಎಂದು ನಂಬಿರುವ ಪ್ರಭಾಕರ ಸೀದಾ ಆಶ್ರಯ ಮನೆಗಳ ಮೇಲೆ ಕಾಕದೃಷ್ಟಿ ಬೀರಿದ. ನಿರ್ಮಿತಿ ಕೇಂದ್ರವನ್ನು ತನ್ನ ಅಧೀನಕ್ಕೆ ತೆಗೆದುಕೊಂಡ ಡಿಸಿ ಜೊತೆ ಸಹಭೋಜನ ಮಾಡಲು ನಿರ್ಮಿತಿ ಕೇಂದ್ರದ ಇಂಜನಿಯರ್ ವಿ.ಪಿ. ಹಿರೇಮಠ ಎಂಬ ಜಗತ್‌ಘಾತಕ ಜಂಗಮ ರೆಡಿ ಆಗೇ ಬಿಟ್ಟಿದ್ದ. ಜಿಲ್ಲೆಯ ಎಲ್ಲ ಆಶ್ರಯ ಮನೆಗಳನ್ನು ನಿರ್ಮಿತಿ ಕೇಂದ್ರವೇ ನಿರ್ಮಿಸಬೇಕೆಂಬ ಫರ್ಮಾನು ಹೊರಡಿಸಿದ ಈ ಜೋಡಿ, 2100 ಮನೆ ನಿರ್ಮಿಸಿತು. 1999 ನೇ ಮನೆ ಕಟ್ಟುವಷ್ಟರಲ್ಲಿ 444 ಮನೆಗಳು ಕುಸಿಯತೊಡಗಿದ್ದವು. ಹಾಗಿತ್ತು ಈ 420 ಜೋಡಿಯ ಕರಾಮತ್ತು! ಜನರೆಲ್ಲ 'ನಿರ್ಮಿತಿ'ಗೆ ಥೂ ಥೂ ಎನ್ನುತ್ತಿದ್ದಂತೆ `money ಮನೆ ಕತೆ' ಸಿನಿಮಾಕ್ಕೆ `The End' ಎಂದು ಹೇಳಿದ ಈ ಖದೀಮರು ವಿವಿಧ ಇಲಾಖೆಗಳ ಕಚೇರಿ, ಕ್ವಾರ್ಟರ್ಸ್‌ಗಳ ನಿರ್ಮಾಣದಲ್ಲಿ ಎರಡೂ ಕೈಗಳಿಂದ ಉಂಡರು. ಅದೆಷ್ಟು ತಿಂದಿದ್ದರೆಂದರೆ ಅತೀವ ನೀರಡಿಕೆಯಾಗಿ 'ಮಳೆ ಕೊಯ್ಲು' ಎಂಬ ನಾಟಕ ಶುರು ಮಾಡಿ 1.60 ಕೋಟಿ ಫಂಡ್‌ನಲ್ಲಿ ಬರೋಬ್ಬರಿ ಅರ್ಧ ಭಾಗವನ್ನು ನುಂಗಿ ನೀರು ಕುಡಿದರು; ಜಲಸಂರಕ್ಷಣೆ ಹೆಸರಲ್ಲಿ ಜನರಿಗೆಲ್ಲ ನೀರು ಕುಡಿಸಿದರು.



ಅಷ್ಟೊತ್ತಿಗೆ ಮಹಾಲಿಂಗಪುರದ ಪುರಸಭೆಯಿಂದ ಡೆಪ್ಯುಟೇಷನ್ ಮೇಲೆ ಬಂದು ಬಾಗಲಕೋಟೆ ನಗರಾಭಿವೃದ್ಧಿ ಕೋಶದಲ್ಲಿ ಸುರೇಶ್ ಇಂಜನಗೇರಿ ಎಂಬ ತೋಳವೊಂದು ಬೀಡುಬಿಟ್ಟಿತ್ತು. ನಿರ್ಮಿತ ಕೇಂದ್ರದ ವಿ.ಪಿ. ಹಿರೇಮಠನ ಸಂಬಂಧಿ ಕುಮಾರ್ ಹಿರೇಮಠ ಎಂಬುವವನ ಕುಮಾರ್ ಏಜೆನ್ಸಿ ಮೂಲಕ ಜಿಲ್ಲಾಡಳಿತಕ್ಕೆ ಬೇಕಾದ ಸಕಲ ಮೆಟೀರಿಯಲ್ಸ್ ಖರೀದಿಸತೊಡಗಿದರು. ಹಿರೇಮಠ, ಸುರೇಶ್ ಇಂಜನಗೇರಿಗಳ ಕಬಳಿಕೆಗೆ ಡಿಸಿಗಳ ಕೃಪಾಶೀರ್ವಾದವಂತೂ ಇದ್ದೇ ಇತ್ತು. ಡಿಸಿಗಳ ಉತ್ತೇಜನದಿಂದ ಸ್ಫೂರ್ತಿಗೊಂಡ ಇಂಜನಗೇರಿ ಗ್ಲೋಬಲ್ ಕಂಪ್ಯೂಟರ್ಸ್ ಮತ್ತು ಸಂಗಮೇಶ್ವರ ಗ್ರಾಮೀಣ ಸಂಸ್ಥೆಗಳನ್ನು ಸ್ಥಾಪಿಸಿ ಜಿಲ್ಲಾಡಳಿತದ ಸರ್ವಫಂಡ್‌ಗಳನ್ನು ತನ್ನ ಸಂಸ್ಥೆಗಳಿಗೆ ತಿರುಗಿಸಿಕೊಂಡು ಕೊಬ್ಬಿ ಹೋದ.


ಬಾಲ ಕಾರ್ಮಿಕರ ಶಾಲೆ: ಡಿ.ಸಿ. ಟೀಮ್‌ನ ಶೋಲೆ!

ರಾಜ್ಯ ಸರ್ಕಾರದ ಅನುದಾನಗಳೆಲ್ಲ ಜುಜುಬಿ ಎನಿಸತೊಡಗಿದ್ದರಿಂದ ಡಿಸಿಯ ಬಕಾಸುರರ ಪಡೆ ಕೇಂದ್ರ ಸರ್ಕಾರದ ಫಂಡುಗಳ ಮೇಲೆ 'ದಾಳಿ' ಮಾಡಲಾರಂಭಿಸಿತು. ಸರ್ವೆಯೊಂದರಲ್ಲಿ 2773 ಬಾಲ ಕಾರ್ಮಿಕರು ಪತ್ತೆಯಾದದ್ದು ಡಿ.ಸಿ. ಟೀಮ್‌ಗೆ ಲಾಟರಿ ಹೊಡೆದಷ್ಟು ಖುಷಿ ತಂದಿತು. ಕೇಂದ್ರ ಸರ್ಕಾರದಿಂದ ವಸತಿ ರಹಿತ ಬಾಲ ಕಾರ್ಮಿಕರ ಶಾಲೆಗಳನ್ನು ತೆಗೆಯಲು ಅನುದಾನ ತರಿಸಿದ ಡಿ.ಸಿ. ಸಾಹೇಬರು ಬಾಲ ಕಾರ್ಮಿಕರ ವಿಭಾಗದ ಸೂಪರ್‌ವೈಸರ್‌ಗಳನ್ನು ಮರೆತು, ನಕಲಿ NGO ಗಳಿಗೆಲ್ಲ ಶಾಲೆಗಳನ್ನು ಬಹಿರಂಗ ಹರಾಜಿನಲ್ಲಿ ಹಂಚಿಬಿಟ್ಟರು. ಒಂದು ವರ್ಷಕ್ಕೆ ಒಂದು ಲಕ್ಷ ಇಪ್ಪತ್ತೈದು ಸಾವಿರ ಅನುದಾನ ಪಡೆಯುವ ಈ ಶಾಲೆಗಳನ್ನು ಗಿಟ್ಟಿಸಿದವರು ವಿಜಯ ಬ್ಯಾಡಗಿ ಎಂಬ ತಗಡು ಪತ್ರಕರ್ತ, ಉದಯ ಟಿವಿಯ ಒಬ್ಬ ಕ್ಯಾಮರಾಮನ್, ಡಿ.ಸಿ. ಟೀಮ್‌ನ ಮೆಂಬರ್ ಸುರೇಶ ಇಂಜನಗೇರಿ... ಕೊನೆಗೆ ಡಿ.ಸಿ.ಯ ಸಂಬಂಧಿಕರಿಗೆಲ್ಲ ಎರಡೆರಡು ಶಾಲೆಗಳು ದಕ್ಕಿಬಿಟ್ಟವು.

ಚಾಲುಕ್ಯ ಉತ್ಸವದಲ್ಲೂ ನುಂಗಿದ ಚಾಲಾಕಿಗಳು!

ಸತತ ಬರಗಾಲದ ಕಾರಣದಿಂದ 4 ವರ್ಷ ನಡೆದಿರದಿದ್ದ ಚಾಲುಕ್ಯ ಉತ್ಸವವನ್ನು ಈ ಸಲ ನಡೆಸಿದ ಜಿಲ್ಲಾಡಳಿತದ ಚಾಲಾಕಿಗಳು ಸರ್ಕಾರದ ಅನುದಾನ ಇದ್ದರೂ, ಎಲ್ಲ ಆರು ತಾಲ್ಲೂಕುಗಳ ಅಧಿಕಾರಿಗಳಿಂದ ಅನಧಿಕೃತವಾಗಿ ಹಣ ವಸೂಲು ಮಾಡಿದ್ದಾರೆ.

ತಲಾ 2 ಲಕ್ಷದಂತೆ 6 ತಹಶೀಲ್ದಾರರಿಂದ 12 ಲಕ್ಷ, ತಲಾ 2 ಸಾವಿರದಂತೆ 210 ತಲಾಟಿಗಳಿಂದ 4.20 ಲಕ್ಷ, ಜಿಲ್ಲಾ ಪಂಚಾಯ್ತಿ ನೌಕರರಿಂದ 2 ಲಕ್ಷ ಅನಧಿಕೃತ ಹಣ ಎತ್ತಿರುವ ಡಿಸಿಯ ಬಕಾಸುರ ಪಡೆ, ಫುಡ್ ಡೈರೆಕ್ಟರ್ ಸದಾಶಿವ ಮರ್ಜೆಯ ಸಹಾಯದಿಂದ ಗ್ರಾನೈಟ್ ಫ್ಯಾಕ್ಟರಿ, ಕೆರೊಸಿನ್ ಡೀಲರ್ಸ್, ಮಟ್ಕಾ ಡಾನ್‌ಗಳಿಂದಲೂ ಕೋಟಿಗಟ್ಟಲೆ ವಸೂಲಿ ಮಾಡಿದೆ. ಕಾರ್ಯಕ್ರಮಕ್ಕೆ ಬಂದ ನಟಿ ಹೇಮಾಮಾಲಿನಿಗೆ 8 ಲಕ್ಷ ಕೊಡಲು ಹಿಂದೇಟು ಹಾಕಿ ಸ್ಟೇಜ್ ಮೇಲೆಯೇ ಹೇಮಾಮಾಲಿನಿಯಿಂದ ಮಂಗಳಾರತಿ ಮಾಡಿಸಿಕೊಂಡಿದ್ದ ಡಿಸಿಗೆ ನಾಚಿಕೆ ಎಂಬುದೇ ಇಲ್ಲ. ಚಾಲುಕ್ಯ ಉತ್ಸವದಲ್ಲಿ ಫುಡ್ ಇನ್ಸ್‌ಪೆಕ್ಟರ್ ಸದಾಶಿವ ಮರ್ಜೆಯ ಚೇಲಾಗಳದೇ ಕಾರುಬಾರು.


ಶಾಲೆ ಮಕ್ಕಳೀಗ ಬಾಲ ಕಾರ್ಮಿಕರು

ಕಳೆದ ತಿಂಗಳು ನಡೆದ ಪ್ರಸಿದ್ಧ ಬನಶಂಕರಿ ಜಾತ್ರೆಯಲ್ಲಿ 10 ಟೆಂಟ್ ಟಾಕೀಸ್‌ಗಳಿಗೆ ಅನಧಿಕೃತ ಪರವಾನಗಿ ನೀಡಿ ಹಾಡುಹಗಲೇ ಹತ್ತು ಲಕ್ಷ ಎತ್ತಿಬಿಟ್ಟಿತು ಡಿಸಿ ಟೀಮು! ಬಾಗಲಕೋಟೆಯ ಡಿವೈಎಸ್‌ಪಿ ಟಿನ್‌ಮೇಕರ್‌ನೂ ಜಾತ್ರೆಯಲ್ಲಿ ಮೇಯ್ದು ಹೋದ.

ಮೇಟಿ ವಿದ್ಯೆಗಿಂತ ಕೋಟಿ ನುಂಗುವ ವಿದ್ಯೆಯನ್ನೇ ನೆಚ್ಚಿರುವ ಹುಲ್ಲಪ್ಪ ಮೇಟಿಯಂತಹ ಶಾಸಕನೇ ಗಾಡ್‌ಫಾದರ್ ಆಗಿರುವಾಗ ಡಿ.ಸಿ. ಪ್ರಭಾಕರ್, ಆಹಾರ ಇಲಾಖೆಯ ಹೆಗ್ಗಣ ಸದಾಶಿವ ಮರ್ಜೆ, ನಿರ್ಮಿತಿ ಕೇಂದ್ರದ ಹಿರೇಮಠ್, ನಗರಾಭಿವೃದ್ಧಿ ಕೋಶದ ಸುರೇಶ್ ಇಂಜನಗೇರಿಗಳೆಲ್ಲ ಬಾಗಲಕೋಟೆಯನ್ನು ಎರಡನೆ ಮುಳುಗಡೆಯತ್ತ ಒಯ್ಯದೇ ಬಿಟ್ಟಾರೆಯೇ?

ಹೊಸ ಸಚಿವ ಗೋವಿಂದ ಕಾರಜೋಳ ಎಂಬ ಅರೆಬರೆ ಚೆಡ್ಡಿಯಿಂದಲೂ ಏನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಏಕೆಂದರೆ ಅಧಿಕಾರದ ಹಸಿವಿನಿಂದ ತುಂಬಾ ಬಳಲಿರುವ ಕಾರಜೋಳನೂ ಡಿ.ಸಿ. ಪ್ರಭಾಕರನಿಗೆ ಗ್ರೀನ್ ಸಿಗ್ನಲ್ ಕೊಡುವ ಲಕ್ಷಣಗಳೇ ಇವೆ.

ಬಾಗಲಕೋಟೆ ಕಾಪಾಡಲು ಕೂಡಲ ಸಂಗಮೇಶ್ವರನಿಗೂ ಸಾಧ್ಯವಿಲ್ಲ ಎನಿಸುತ್ತಿದೆಯಲ್ಲವೇ?

–ಮೇಘರಾಜ್

ಆಹಾರ ಇಲಾಖೆಯ ಹೆಗ್ಗಣಕ್ಕೆ ಯಾರ 'ಮರ್ಜೆ'?


ಸದಾಶಿವ ಮರ್ಜೆ

ಡಿಸಿಗೆ ಸರಿಯಾದ ಜೋಡಿಯಂತಿದ್ದಾನೆ ಸದಾಶಿವ ಮರ್ಜೆ ಎಂಬ ಹೆಗ್ಗಣ. ನುಂಗುವುದೇ ನಿತ್ಯ ಕಾಯಕ ಎಂದು ಬಗೆದಿರುವ ಈ ಅನಾಗರಿಕನಿಗೆ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಸಿಕ್ಕರೆ ಬಿಟ್ಟಾನೆಯೇ? ಇಲಾಖೆಯ ಅಕ್ಕಿ, ಗೋಧಿ, ಎಣ್ಣೆಯನ್ನೆಲ್ಲ ಕಾಳಸಂತೆಕೋರರಿಗೆ ಮಾರಿಕೊಳ್ಳುವ ದಲಿತ ಸದಾಶಿವ ಮರ್ಜೆ ತನ್ನೂರು ಹುನಗುಂದಕ್ಕೆ ಮಂಜೂರಾಗಿದ್ದ 18 ಲಕ್ಷ ವೆಚ್ಚದ ಅಂಬೇಡ್ಕರ್ ಭವನಕ್ಕೆ ಕಲ್ಲು ಹಾಕಿ, ದಲಿತರು-ಭೋವಿಗಳ ನಡುವೆ ಜಗಳ ಹಚ್ಚಿದ್ದ. ತನ್ನನ್ನು ಸಾಹಿತಿ ಎಂದೇ ತಿಳಿದಿರುವ ಈ ಮೂರ್ಖ ಈ ಹಿಂದೆ ಹಾವೇರಿಯಲ್ಲೂ ತಿಂದು ತೇಗಿಯೇ ಬಂದಿದ್ದ.

ಬಾಗಲಕೋಟೆ ಜಿಲ್ಲೆ ಇಲಕಲ್ ಸುತ್ತಮುತ್ತಲಿನ 300 ಕ್ಕೂ ಹೆಚ್ಚು ಗ್ರಾನೈಟ್ ಪಾಲಿಶಿಂಗ್ ಫ್ಯಾಕ್ಟರಿಗಳಿಗೆ ಸರ್ಕಾರಿ ಕೆರೊಸಿನ್ ಮಾರಿಕೊಳ್ಳುವ, ಬೀಳಗಿ ಮಹಾಲಿಂಗಪುರದ ನಕಲಿ ಪೆಟ್ರೋಲ್ ದಂಧೆಯವರಿಗೆ ಸಹಕರಿಸುವ ಸದಾಶಿವ ಮರ್ಜೆಗೆ ಬಡಬಗ್ಗರ ಮರ್ಜಿ ಹೇಗೆ ಬರಬೇಕು? ನೂರ್ ಅಹಮ್ಮದ್ ಎನ್ನುವ ಭೂಪ ಮರ್ಜೆಯ ಮಂತ್ಲಿ ವಸೂಲಿಗಳನ್ನೆಲ್ಲಾ ಪ್ರಾಮಾಣಿಕವಾಗಿ ಮಾಡಿಕೊಂಡು ಬರುತ್ತಾನೆ. ಪ್ರತಿ ರೇಷನ್ ಅಂಗಡಿ, ಕೆರೋಸಿನ್ ಅಂಗಡಿಗಳನ್ನು ಹರಿದು ಹರಿದು ತಿನ್ನುವುದರಿಂದ ಆ ಅಂಗಡಿಗಳವರೆಲ್ಲ ಜನರಿಗೆ ನೀಡಬೇಕಾಗಿರುವ ರೇಷನ್, ಕೆರೋಸಿನ್‌ಗಳನ್ನೆಲ್ಲ ಹೊರಗೆ ಮಾರಿಕೊಳ್ಳುತ್ತಾರೆ! ಹಿಂದೊಮ್ಮೆ ಇಲಾಖೆಯ ಧಾನ್ಯಗಳನ್ನು ಬೇರೆಡೆ ಸಾಗಿಸುವಾಗ ಇವನ ಶಿಷ್ಯ ನೂರ್ ಅಹ್ಮದ್ ಸಿಕ್ಕಿಬಿದ್ದಿದ್ದ. ಸದಾಶಿವನ ಕೃಪೆಯಿಂದ ಪಾರೂ ಆದ.

ಕರ್ನಾಟಕ ವಿವಿಯಲ್ಲಿ ಕೆಲಸದಲ್ಲಿದ್ದಾಗಲೂ ಕಿತಬಿ ಕೆಲಸಗಳನ್ನು ಮಾಡುತ್ತಲೇ ಬಂದಿದ್ದ ಮರ್ಜೆ ಎನ್‌ಎಸ್‌ಎಸ್ ಹಣ ನುಂಗಿ ಛೀಮಾರಿ ಹಾಕಿಸಿಕೊಂಡಿದ್ದ. ಈಗ ಪತ್ನಿಯನ್ನು ಕರ್ನಾಟಕ ಕಾಲೇಜಲ್ಲಿ ಸೇರಿಸಿ, ತಾನಿಲ್ಲಿ ನಾಗರಿಕರ ಪಾಲಿನ ಆಹಾರ ಮೇಯುತ್ತಾ ಬೆಕ್ಕಿನ ಸೈಜಿನ ಹೆಗ್ಗಣವಾಗಿ ಹೋಗಿದ್ದಾನೆ!

ಬಾತಿಯಲ್ಲಿ ಕೇಸರಿಬಾತ್.... ಕೃಷ್ಣೆಯಲ್ಲಿ 'ಕಾಸ್'ಬಾತ್!

ಡಿ.ಸಿ. ಕೆ.ಎಸ್. ಪ್ರಭಾಕರನ ಫ್ಲಾಶ್‌ಬ್ಯಾಕ್‌ನಲ್ಲಿ ಕಬಳಿಕೆಯ ಕತೆಗಳೇ ತುಂಬಿವೆ. ಮೂಲತಃ ಹಾಸನ ಜಿಲ್ಲೆಯವನಾದ ಪ್ರಭಾಕರ ಜಾತಿಯಿಂದ ಅಕ್ಕಸಾಲಿಗ... ಪ್ರವೃತ್ತಿಯಲ್ಲಿ 'ರೊಕ್ಕ' ಸಾಲಿಗ! ಉದ್ಯೋಗದ ಆರಂಭದಲ್ಲಿ ರೆವಿನ್ಯೂ ಇಲಾಖೆಯಲ್ಲಿ ಕೆಲಸ ಮಾಡುತ್ತಾ, ರಾಜಕಾರಣಿಗಳ ಪಾದಸೇವೆ ಮಾಡುತ್ತಲೇ 1980 ರಲ್ಲಿ ಹರಿಹರದ ಬಳಿಯ ಬಾತಿ ಎಂಬಲ್ಲಿರುವ ಬಾತಿ ಶುಗರ್ಸ್ ಲಿಮಿಟೆಡ್‌ನ ಆಡಳಿತ ಅಧಿಕಾರಿಯಾಗಿ ವಕ್ಕರಿಸಿದ. ಶುಗರ್ಸ್ ಫ್ಯಾಕ್ಟರಿಯ ನಟ್ ಬೋಲ್ಟ್‌ಗಳನ್ನೂ ಬಿಡದೆ ನುಂಗಿದ ಪ್ರಭಾಕರ್ ಬಾತಿ ಶುಗರ್ಸ್ ಫ್ಯಾಕ್ಟರಿಯಲ್ಲಿ 'ಕೇಸರಿ ಬಾತ್' ತಿನ್ನುತ್ತಾ ತಿನ್ನುತ್ತಾ ಆಡಳಿತ ಮಂಡಳಿಯ ಕೆಂಗಣ್ಣಿಗೆ ಗುರಿಯಾಗಿ ಕ್ರಿಮಿನಲ್ ಕೇಸ್ ಜಡಿಸಿಕೊಂಡಿದ್ದ.

ನಂತರ ಕೃಷ್ಣಾ ಮೇಲ್ದಂಡೆ ಯೋಜನೆ (UKP)ಯ ಜನರಲ್ ಮ್ಯಾನೇಜರ್ ಆಗಿ ಕೃಷ್ಣೆಯಲ್ಲಿ ಬಹಿರಂಗ ಲೂಟಿ ಮಾಡಿದ. UKP ಗೆ ಬರುತ್ತಿದ್ದ ಅಗಾಧ ಫಂಡ್‌ಗಳಲ್ಲಿ ಪರ್ಸೆಂಟೇಜ್‌ಗಳಿಂದ 'ಕಾಸ್'ಬಾತ್ ನಡೆಸಿ ಅಲ್ಲಿಂದ ದೂರದ ಬೀದರ್‌ನ ಜಿಲ್ಲಾಧಿಕಾರಿಯಾಗಿ ಬೀದರನ್ನು ಬರ್ಬಾದ್ ಮಾಡಿಯೇಬಿಟ್ಟ.

ಮತ್ತೆ 2003 ರಲ್ಲಿ ಕೃಷ್ಣೆಯಲ್ಲಿ cold bath ಮಾಡುವ ಆಶೆ ಆಯ್ತು ಅಂತಾ ಬಾಗಲಕೋಟೆಗೆ ವಕ್ಕರಿಸಿಕೊಂಡ.

ಆರು ತಿಂಗಳ ಹಿಂದೆ ಜಿಲ್ಲೆಗೆ ಭೇಟಿ ಇತ್ತಿದ್ದ ವೆಂಕಟಾಚಲರು ಜಿಲ್ಲಾಡಳಿತಕ್ಕೆ ಉಗಿದು ಹೋಗಿದ್ದರು. ಬೆಂಗಳೂರಲ್ಲಿ ಪೋಲೀಸರನ್ನು ಬೆತ್ತಲೆ ಮಾಡಿದ ಲೋಕಾಯುಕ್ತರು ಪ್ರಭಾಕರ್‌ನತ್ತ ಒಮ್ಮೆ ನೋಡುವರೆ!

ಆರು ತಾಲ್ಲೂಕು: 61 ಕೋಟಿ ಎಲ್ಲಿ ಹೋಯ್ತು?

ಕೆಲ ತಿಂಗಳ ಹಿಂದೆ ಮಲಪ್ರಭೆ, ಕೃಷ್ಣೆಯರು ಉಕ್ಕಿ ಹರಿದು ನೆರೆ ಪರಿಹಾರವೆಂದು ಬಾಗಲಕೋಟೆ ಜಿಲ್ಲೆಗೆ 61.43 ಕೋಟಿ ರೂಪಾಯಿ ಬಂತು. ಬಾದಾಮಿ, ಜಮಖಂಡಿ, ಮುಧೋಳ, ಬೀಳಗಿ, ಹುನಗುಂದ, ಬಾಗಲಕೋಟೆ ಈ ಆರು ತಾಲ್ಲೂಕುಗಳ ಬಹುತೇಕ ಅಧಿಕಾರಿಗಳು ಆಗ ದುಂಡಗಾಗಿಬಿಟ್ಟರು.

ಆರೋಗ್ಯ ಇಲಾಖೆಗೆ 22 ಲಕ್ಷ ಕೊಟ್ಟರೆ, ಅದು 7 ಲಕ್ಷಗಳ ಬೋಗಸ್ ಡೀಸೆಲ್ ಬಿಲ್ ತೋರಿಸಿ ಮುಂದಾಮೋಚಿತು. ತಾತ್ಕಾಲಿಕ ಟೆಂಟ್‌ಗಳಲ್ಲಿದ್ದ ಜನ ನೆರೆ ಇಳಿದಂತೆ ತಮ್ಮ ತಮ್ಮ ಮನೆಗೆ ಹೋದರು. ಶಾಶ್ವತ ಪರಿಹಾರ ಕಲ್ಪಿಸಬೇಕಾಗಿದ್ದ KPTCL, ಜಲನಿಗಮ, ತಾಲ್ಲೂಕು ಆಡಳಿತ, ಪುರಸಭೆಗಳೆಲ್ಲ ನೆರೆ ಪರಿಹಾರದ 61 ಕೋಟಿಯನ್ನು ಹಂಚಿಕೊಂಡು ತಿಂದು ತಣ್ಣಗಾಗಿಬಿಟ್ಟವು.

ತಾಲ್ಲೂಕುವಾರು ಪರಿಹಾರ ಹಂಚಲು ಡಿ.ಸಿ. ಪ್ರಭಾಕರ್ ಎಂಬ ಅಪ್ಪಟ ಖದೀಮನೇ ಕುಳಿತಾಗ ಇನ್ನೇನಾಗುತ್ತೆ?

ಮನುಷ್ಯ ಒಬ್ಬ ಹುಚ್ಚ, ಒಂದು ಹುಳುವನ್ನು ಅವನು ಹುಟ್ಟಿಸಲಾರ. ಆದರೂ ನೂರಾರು ದೇವರನ್ನು ಅವನು ಸೃಷ್ಟಿಸುತ್ತಾನೆ. – ಮಾಂಟೆನ್

ಸೆಂಟ್ರಲ್ ಬ್ಯಾಂಕ್ ಸಾಲ

ಗುಳೆ ಹೋದವರ ಹೆಸರಲ್ಲಿ 15 ಕೋಟಿ ಗುಳುಂ

...ರಾಷ್ಟ್ರೀಕೃತ ಬ್ಯಾಂಕ್‌ವೊಂದರಲ್ಲಿ ನಡೆದ ಹಗಲು ದರೋಡೆಯ ಕರ್ಮಕಾಂಡವಿದು. ಬೆಂಗಳೂರು, ...ಗಳಿಗೆ ಗುಳೆ ಹೋದ ಕೃಷಿ ಕಾರ್ಮಿಕರ ಹೆಸರಲ್ಲಿ ಸುಮಾರು 15 ಕೋಟಿ ರೂ.ಗಳಷ್ಟು ಮೊತ್ತವನ್ನು ...ಮಾಡಲಾಗಿದೆ. 2004 ರಲ್ಲೇ ಈ ಪ್ರಕರಣದ ...ವು ದೊರಕಿತ್ತಾದರೂ ಪೊಲೀಸ್-ಪುಢಾರಿ ...ನೇಷನ್ ಅದನ್ನು ಇಲ್ಲಿವರೆಗೆ ಮುಚ್ಚಿ ಹಾಕಿತ್ತು. ...ಚೂರು ಜಿಲ್ಲೆಯ ನೂರಾರು ರೈತರ ಹೆಸರಲ್ಲಿ ...ಎತ್ತಿ ಬ್ಯಾಂಕಿಗೂ ಪಂಗನಾಮ ಹಾಕಿ, ಕೃಷಿ ...ಕರ ಕುತ್ತಿಗೆಗೂ ಕೈ ಹಾಕಿದ್ದ ಕಳ್ಳರ ವಿರುದ್ಧ ...ಸಂಘ ...ರುವುದರಿಂದ ...ತರೆಡ್ಡಿ ಎಂಬ ...ಕರ್ ಜೈಲು ...ಾಗಿದ್ದಾನೆ. ಸಚಿವ ...ಮಂತಪ್ಪ ...ೋಡ್, ಮಾಜಿ ... ಕಲ್ಮಲಾ ಶಾಸಕ ...ಯಪ್ಪ ಮುದ್ದಪ್ಪ, ...ಮಾಜಿ ಶಾಸಕ ...ಧರ ನಾಯಕ-ಈ ...ವರ ಶಿಷ್ಯಂದಿರೇ ...ಹೆಸರಲ್ಲಿ ದುಡ್ಡು ...ದೆವವರು.



ವಂಚಕರನ್ನು ಬಂಧಿಸಬೇಕೆಂದು ಮಾನ್ವಿ ತಾಲ್ಲೂಕಿನಲ್ಲಿ ನಡೆದ ರಸ್ತೆ ರೋಕೋ ಸಂದರ್ಭದಲ್ಲಿ ಆರ್. ಮಾನಸಯ್ಯ, ಬ್ಯಾಂಕಿನ ಹಾಲಿ ಅಧಿಕಾರಿ ಕೋಟ್ರೇಶಪ್ಪ ಹಾಗೂ ಇತರರು

ಪುಡಾರಿ ಪರ್ವತರೆಡ್ಡಿ

...ರವಾರದ ಸೆಂಟ್ರಲ್ ...ಕ್ ಆಫ್ ಇಂಡಿಯಾದ ಹಣವನ್ನು ಹೀಗೆ ...ಬಿಟ್ಟು ದೋಚಿದವನು ಪರ್ವತರೆಡ್ಡಿ ಎಂಬ ...ಕಲ್ ಪುಡಾರಿ. ಕಳೆದ 4-5 ವರ್ಷಗಳ ಹಿಂದೆ ...ಸಾಲದ ಸೀರಿಯಲ್ ನಡೆದು ಈಗ ಜಿಲ್ಲೆಯ ...ಾ ಸುದ್ದಿಯಾಗಿದೆ. ಈ ಹಿಂದೆ ಬ್ಯಾಂಕ್ ಮ್ಯಾನೇ...ರಾಗಿದ್ದ ಶಿವಲಿಂಗಯ್ಯನೆಂಬ ಉಂಡ ಮನೆ ಜಂತಿ ...ಸುವವನೇ ಈ ಎಲ್ಲದರ ಸೂತ್ರಧಾರನಾಗಿದ್ದ. ...ತರೆಡ್ಡಿ ಆಗಿನ ಮಾನ್ವಿ ಶಾಸಕ ಗಂಗಾಧರ ನಾಯಕನ ...ಬಂಟ ಕೂಡಾ ಹೌದು! ಪರ್ವತರೆಡ್ಡಿ ಮತ್ತವನ ...ಪುತ್ರ ಪಂಪಾಪತಿಗಳು ಬ್ಯಾಂಕ್ ಸಾಲ ...ಸುತ್ತೇವೆ ಎಂದು ದೇವದುರ್ಗ, ಮಾನ್ವಿ ತಾಲೂಕು ...ಹಳ್ಳಿಗಳ ಅನಕ್ಷರಸ್ಥ ರೈತರನ್ನು ಯಾಮಾರಿಸಿದ್ದಾರೆ. ...ನ ದಾಖಲೆಗಳಿಗೆ ಹೆಬ್ಬೆಟ್ಟು ಒತ್ತಿಸಿಕೊಂಡಿದ್ದಾರೆ. ...ಕೆಲಸಕ್ಕೆಂದು ಗುಳೆ ಹೋದ ತಕ್ಷಣವೇ ಈ ...ತರೆಡ್ಡಿ ಗ್ಯಾಂಗು ಆಗಿನ ಮ್ಯಾನೇಜರ್ ಶಿವ...ಯ್ಯನ ಜೊತೆ ಸೇರಿ ಹೆಬ್ಬೆಟ್ಟಿನ ಅರ್ಜಿಗಳನ್ನಿಟ್ಟು ...ಕು ಒಬ್ಬಟ್ಟು ತಿಂದುಬಿಟ್ಟದ್ದಾರೆ. ಕೃಷಿ ಕಾರ್ಮಿಕರ ...ಗಳಿಗೆ ಸಾಲ ಜಮೆ ಮಾಡಿ ತಾವೇ ವಿತ್‌ಡ್ರಾ ...ಕೊಳ್ಳುತ್ತಾ ಹೋಗಿದ್ದಾರೆ.

...004 ರಲ್ಲಿ ಹೊಸದಾಗಿ ಮ್ಯಾನೇಜರ್ ಆಗಿ ಬಂದ ...ಮಾರ್ ಸಾಲ ಮರುಪಾವತಿ ಮಾಡಿರಿ ಎಂದು ...ರು ರೈತರಿಗೆ ನೋಟೀಸ್ ಕಳಿಸಿದಾಗಲೇ ರೈತರೆಲ್ಲ ...ಬದ್ದಿದ್ದು. ಆದರೂ ಸಾಲವನ್ನೇ ಮಾಡದ ...ರೂ ಆ ನೋಟೀಸ್‌ಗೆ ಕೇರ್ ಮಾಡಲಿಲ್ಲ. ...ಬೆಂಗಳೂರಲ್ಲಿ ಕೂಲಿ ಕೆಲಸಕ್ಕೆ ಹೋಗಿದ್ದ ...ಬದ ಹುಚ್ಚಪ್ಪ ಮಾತ್ರ ಗಾಬರಿಗೊಂಡು ಸೀದಾ ಸಿರವಾರದ ಬ್ಯಾಂಕಿಗೆ ಓಡಿಬಂದ. ಆತನ ಸರ್ವೆ ನಂ. 27 ಎ 1, 27 ಎ 2ಗಳಿರುವ 7 ಎಕರೆ ಭೂಮಿಯ ಮೇಲೆ 5.30 ಲಕ್ಷ ಸಾಲವಿತ್ತು! ಆಗಿನ ಎಸ್.ಪಿ. ಹರಿಶೇಖರನ್ ಬಳಿಗೆ ಓಡಿದ ಹುಚ್ಚಪ್ಪ ದೂರು ನೀಡಿದ್ದ. ಇದೇ ಹುಚ್ಚಪ್ಪನ ತಂದೆ ಲಿಂಗಸಗೂರು ತಾಲೂಕಿನ ಅನ್ವರಿ ಗ್ರಾಮದ ಗಂಗಪ್ಪನ ಹೊಲದ ಮೇಲೂ 3 ಲಕ್ಷ ರೂಪಾಯಿ ಬೆಳೆ ಸಾಲ ಎತ್ತಲಾಗಿದೆ. ಪರ್ವತರೆಡ್ಡಿಯ ವಂಚಕ ಪಡೆ ಹುಚ್ಚಪ್ಪನಿಗೆ ಕಂಪ್ಲೆಂಟ್ ಕೊಡದಂತೆ ಹಣದ ಆಮಿಷ ಒಡ್ಡಿದೆ. ಆದರೆ ಅಲ್ಪಸ್ವಲ್ಪ ಹಣ ಪಡೆದರೆ, 5 ಲಕ್ಷ ಸಾಲ ತುಂಬಲು ನಿಮ್ಮಪ್ಪ ಬರುತ್ತಾನಾ ಎಂದು ಹುಚ್ಚಪ್ಪ ಸವಾಲೆಸೆದಿದ್ದಾನೆ. ಹುಚ್ಚಪ್ಪನಿಗೆ ಜೀವ ಬೆದರಿಕೆಯನ್ನು ಹಾಕಲಾಗಿದೆ. ಹುಚ್ಚಪ್ಪ ಎಸ್ಪಿ ಬಳಿ ಹೋಗುತ್ತಲೇ, ಇತ್ತ ಕಡೆ ವಂಚಕರ ಪಡೆ ಬ್ಯಾಂಕಿಗೆ ಹುಚ್ಚಪ್ಪನ ಸಾಲ ಮರುಪಾವತಿ ಎಂದು 4.10 ಲಕ್ಷ ರೂ.ಗಳನ್ನು ಅಕ್ಟೋಬರ್ 5, 2004 ರಂದು ಜಮೆ ಮಾಡಿದ್ದಾರೆ. ಆದರೆ ಆಗಿನ ಬ್ಯಾಂಕ್ ಮ್ಯಾನೇಜರ್ ರವಿಕುಮಾರ್ ಮತ್ತೆ ಫೆಬ್ರುವರಿ 1, 2005 ರಂದು ಹುಚ್ಚಪ್ಪ ಹಾಗೂ ಆತನ ತಂದೆ ಗಂಗಪ್ಪನ ಹೆಸರಲ್ಲಿ ಇನ್ನೂ 92 ಸಾವಿರ ರೂಪಾಯಿ ಸಾಲ ಮರುಪಾವತಿ ಆಗಬೇಕೆಂದು ನೋಟೀಸ್ ಕಳಿಸಿದ್ದಾರೆ. ವಿಷಯ ತಿಳಿದ ಹುಚ್ಚಪ್ಪ ಊರನ್ನೇ ಬಿಟ್ಟಿದ್ದಾನೆ.

ಕೆಂಬಾವುಟ ಬಂತು

ಕರ್ನಾಟಕ ರೈತ ಸಂಘದ ಗಮನಕ್ಕೆ ಈ ವಿಷಯ ಗೊತ್ತಾಗಿ ದೇವದುರ್ಗ, ಮಾನ್ವಿ ತಾಲೂಕುಗಳ ಹಳ್ಳಿಗಳಲ್ಲಿನ ಕೃಷಿ ಕಾರ್ಮಿಕರಿಂದ ವಿಷಯ ಸಂಗ್ರಹಿಸಿದಾಗ ಇಂತಹ ಸಾವಿರಾರು ಪ್ರಕರಣಗಳು ಹೊರ ಬರತೊಡಗಿವೆ. ಈಗ ಮಾನಸಯ್ಯನವರ ನೇತೃತ್ವದಲ್ಲಿ ಸಾಲದ ವಂಚಕ ಪಡೆ ವಿರುದ್ಧ ಪ್ರತಿಭಟನೆ ಆರಂಭವಾಗಿದೆ.

ಮಲ್ಲಟ ಗ್ರಾಮವೊಂದರಿಂದಲೇ ಸುಮಾರು 215 ಜನ ಬೆಂಗಳೂರಿಗೆ ಗುಳೆ ಹೋಗಿದ್ದಾರೆ. ಮಲ್ಲಟ ಗ್ರಾಮದ ಪೂಜಾರಿ ಹನುಮಂತನ ಹೆಸರಲ್ಲಿ ಗುಡಿಯ 20 ಎಕರೆ ಭೂಮಿ (ಸ.ನಂ. 211, 214 ಹಾಗೂ 159) ಮೇಲೆ 13 ಲಕ್ಷ ಸಾಲ ಲಪಟಾಯಿಸಿದೆ ಪರ್ವತರೆಡ್ಡಿ ವಂಚಕ ಪಡೆ. ವೆಂಕಮ್ಮ ಎಂಬಾಕೆಯ 12 ಎಕರೆ ಮೇಲೆ 10 ಲಕ್ಷ, ನುಗಡೋಣಿ ಹೊಸೂರು ಗ್ರಾಮಗಳ ಯಲ್ಲಪ್ಪನ 17 ಎಕರೆ ಭೂಮಿ (ಸ.ನಂ.



ಗುಡಿಸಲ ಮುಂದೆ ವಂಚನೆಗೊಳಗಾದ ಹುಚ್ಚಪ್ಪ ಮತ್ತವನ ಕುಟುಂಬ

78) ಮೇಲೆ 4 ಲಕ್ಷ, ಹನುಮಂತ ಎನ್ನುವಾತನ 7 ಎಕರೆ ಮೇಲೆ 4 ಲಕ್ಷ, ಮಾರೆಮ್ಮಳ ಆರು ಎಕರೆ ಮೇಲೆ 4 ಲಕ್ಷ ಸಾಲ ಪಡೆದು ವಂಚಿಸಿದ್ದಾರೆ ಪುಡಾರಿ ಪ್ರಭೃತಿಗಳು!

ಕೆಆರ್‌ಎಸ್‌ನವರ ಪ್ರತಿಭಟನೆಯಿಂದ ನೂರಾರು ದೂರುಗಳು ದಾಖಲಾಗಿವೆ. ಜನರ ಒತ್ತಡಕ್ಕೆ ಬೆದರಿದ ಪೋಲೀಸರು ಮಾಜಿ ಶಾಸಕ, ರಾಯಚೂರು ಎಪಿಎಂಸಿ ಅಧ್ಯಕ್ಷ ಗಂಗಾಧರ ನಾಯಕನ ಶಿಷ್ಯ 'ಬ್ಯಾಂಕ್ ಪಿಂಪ್' ಪರ್ವತರೆಡ್ಡಿಯನ್ನು ಮೊನ್ನೆ 14 ನೇ ತಾರೀಖು ರಾಯಚೂರಿನ ಎಸ್.ಎಲ್.ವಿ. ಹೋಟೆಲ್‌ನಲ್ಲಿ ಬಂಧಿಸಿ ಲಾಕಪ್ಪಿಗೆ ನೂಕಿದ್ದಾರೆ. ನಾಲಾಯಕ್ ಗಂಗಾಧರ ನಾಯಕ ಸಿರವಾರದ ಸ್ಟೇಷನ್‌ಗೆ ಹೋಗಿ ಪರ್ವತರೆಡ್ಡಿ ಪರ ಮಾತಾಡಿ ಬಂದಿದ್ದಾನೆ.

ಸಚಿವ, ಮಾಜಿ ಸಚಿವರ ಬಂಟರು

ಸಿಂಧನೂರು, ಮಾನ್ವಿ, ದೇವದುರ್ಗ ತಾಲೂಕುಗಳ ಅಟ್ಲೂರು, ಆಕಲಕುಂಟಿ, ಶಾಖಾಪುರ, ಹೀರಿಗಲ್ ದಾದಗಿರಿ, ಲಕ್ಕಂದಿನ್ನಿ, ಜಾಲಾಪುರ, ಸಿರವಾರ, ನವಲ್‌ಕಲ್, ದುರಳದಿನ್ನಿ, ಜಾಗಟಗಲ್, ತಿಪ್ಪಲದಿನ್ನಿ, ಅಲ್ಕೋಡ್, ಜಾಲಹಳ್ಳಿ, ಗಬ್ಬೂರು, ಕರಕುಂದಿ ಸೇರಿದಂತೆ ಹಲವಾರು ಹಳ್ಳಿಗಳ ನೂರಾರು ರೈತರ ಹೆಸರಲ್ಲಿ ಸಾಲ ಎತ್ತಿ ಗುಳುಂ ಮಾಡಲಾಗಿದೆ. ಮಾಜಿ ಸಚಿವ, ಕಲ್ಮಲಾ ಶಾಸಕ ಮುನಿಯಪ್ಪ ಮುದ್ದಪ್ಪನ ಬೆಂಬಲಿಗ ಸಿರಿವಾರ ಎಪಿಎಂಸಿ ನಿರ್ದೇಶಕ ಡಾ. ಬಸವರಾಜಪ್ಪ, ಯುವಜನ ಮತ್ತು ಕ್ರೀಡಾ ಸಚಿವ ಅಲ್ಕೋಡ್ ಹನುಮಂತಪ್ಪನ ಶಿಷ್ಯ ದೇವದುರ್ಗ ಜೆಡಿಎಸ್ ಯುವ ಘಟಕದ ಅಧ್ಯಕ್ಷ ಸಿದ್ಧಲಿಂಗನಗೌಡ ನಾಗಡದಿನ್ನಿ, ಶಿವನಗೌಡ ಗಣದಿನ್ನಿ, ಆಕಲಕುಂಪಿ ಬಸವನಗೌಡ, ಗಂಗಾಧರಸ್ವಾಮಿ ಸಿರವಾರ ಎಂಬ ಸ್ಥಳೀಯ ಪುಡಾರಿಗಳೆಲ್ಲ ಬ್ಯಾಂಕ್ ಹಗಲು ದರೋಡೆಯ

ರಾಯಚೂರು

ಹಿಂದಿದ್ದಾರೆ ಎಂಬುದು ರಾಯಚೂರು ಜಿಲ್ಲೆಗೇ ಗೊತ್ತಾಗಿ ಹೋಗಿದೆ. ಇವರಲ್ಲಿ ಡಾ. ಬಸವರಾಜಪ್ಪ 2004 ರಲ್ಲಿ ಮೊದಲ ಬಾರಿಗೆ ಪ್ರಕರಣ ಬಯಲಿಗೆ ಬಂದಾಗ, ದೂರು ನೀಡಿದ್ದ ರೈತ ಹುಚ್ಚಪ್ಪನಿಗೆ ವಿಷದ ಇಂಜೆಕ್ಷನ್ ನೀಡಿ ಕೊಲ್ಲಲು ಯತ್ನಿಸಿದ್ದ ಎಂಬ ಆರೋಪಗಳಿವೆ. ಈ ಕುರಿತು ಈಗ ಹುಚ್ಚಪ್ಪ ದೂರು ನೀಡಲು ರೆಡಿಯಿದ್ದರೂ ಪೋಲೀಸರು ಮಾತ್ರ ಹಿಂದೇಟು ಹಾಕುತ್ತಿದ್ದಾರೆ. ಬಂಧನದ ಭೀತಿಯಲ್ಲಿರುವ ಡಾ. ಬಸವರಾಜಪ್ಪನೇ 'ಗುಳೆ' ಹೋಗಿಬಿಟ್ಟಿದ್ದಾನೆ!

ಈ ಪ್ರಾಂತ್ಯದ ಜನರ ಕಷ್ಟ ಎಷ್ಟಿದೆಯೆಂದರೆ ಎಂಟು ಎಕರೆ ಭೂಮಿ ಇರುವ ರೈತರೂ ಬೆಂಗಳೂರಿಗೆ ದುಡಿಯಲು ಹೋಗಬೇಕಾಗಿದೆ. ಏಕೆಂದರೆ ಹಲ್ಕಾ ರಾಜಕಾರಣಿಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿಲ್ಲ.

ಕೃಷ್ಣೆ, ತುಂಗಭದ್ರೆಯ ಹತ್ತಿರವೇ ಇದ್ದರೂ ಬರ ಎದುರಿಸುತ್ತಿರುವ ರೈತರು, ಕೃಷಿ ಕಾರ್ಮಿಕರೆಲ್ಲ ಬೆಂಗಳೂರಿಗೆ ಕೂಲಿ ಕೆಲಸಕ್ಕೆ ಪ್ರತಿವರ್ಷ ಗುಳೆ ಹೋಗುತ್ತಿದ್ದಾರೆ.

ಈಗ ಸಚಿವ ಅಲ್ಕೋಡ್ ಹನುಮಂತಪ್ಪ, ಮಾಜಿ ಸಚಿವ ಮುನಿಯಪ್ಪ ಮುದ್ದಪ್ಪ, ಮಾಜಿ ಶಾಸಕ ಗಂಗಾಧರ ನಾಯಕ್‌ರಿಗೆಲ್ಲ ರೈತರು-ಕೃಷಿ ಕಾರ್ಮಿಕರು ಹಿಗ್ಗಾಮುಗ್ಗಾ ಉಗಿಯುತ್ತಿದ್ದಾರೆ. ಅನಾವಶ್ಯಕವಾಗಿ ಸಾಲ ಹೊತ್ತ ನೂರಾರು ರೈತರು ದೂರು ಕೊಡಲು ಹೋದರೆ ಮಾನ್ವಿಯಿಂದ ರಾಯಚೂರಿಗೆ ಅಲೆಸುತ್ತಿರುವ ಪೋಲೀಸ್ ಇಲಾಖೆ ಬಗ್ಗೆಯೇ ಅನುಮಾನ ಬರುತ್ತಿದೆ.

ಹೀಗೆ ಸುಮಾರು 15 ಕೋಟಿ ರೂ.ಗಳನ್ನು ಬ್ಯಾಂಕ್‌ಗೆ ವಂಚಿಸಿದ ಶಿವಲಿಂಗಯ್ಯ ಬೆಂಗಳೂರು ಪಾಲಾಗಿದ್ದಾನೆ. ಈಗ ಅಮಾನತುಗೊಂಡಿರುವ ಶಿವಲಿಂಗಯ್ಯ ರಾಯಚೂರು ಪೋಲೀಸರ ಕೈಗೆ ಸಿಗದೇ ಬೆಂಗಳೂರಲ್ಲೇ ತಲೆ ಮರೆಸಿಕೊಂಡಿದ್ದಾನೆ.

-ಅಶೋಕ್ ನೀಮಕರ್

ಹುಬ್ಬಳ್ಳಿ: ಕ್ರಿಕೆಟ್ ಬುಕ್ಕಿಗಳ ನಡುವೆ ಕಮೀಷನರ್ ನಡುmoney!

...ಪೋಲೀಸ್ ಕಮೀಷನರ್ ನಾರಾಯಣ ನಡಮನಿ ಆಡಳಿತದಲ್ಲಿ ನಕಲಿ ...ದ ಕ್ರಿಮಿಗಳಿಗೆ ಹೊಸ ಲಾಭಕರ ದಂಧೆಯೊಂದನ್ನು ದಯಪಾಲಿಸಲಾಗಿದೆ. ...ಕ್ರಿಕೆಟ್ ಬೆಟ್ಟಿಂಗ್! ಈ ಹಿಂದೆ ಡಿಸಿಪಿ ರವಿಕಾಂತೇಗೌಡರ ಹೊಡೆತದಿಂದ ...ಮದ್ಯದ ದಂಧೆ ಕ್ಷೀಣಗೊಂಡಿತ್ತು, ನಾರಾಯಣ ನಡಮನಿ ...ಷನರ್ ಆಗಿ ಬಂದಿದ್ದೇ ತಡ ಕಮರಿಪೇಟೆಯ ಕಾಲಾಪತ್ಥರ್ ...ದ ಹೀರೂ ಕಠಾರೆ, ಗಜಾನನ ಕಠಾರೆ, ದೊಂಡುಸಾ, ಇರಕಲ್, ...ಲ್ ಇರಕಲ್, ರಾಜು ಇರಕಲ್, ಅರ್ಜುನ್ ಶಿರಾಳಕರ್, ...ೇಶ ಬಾಕಳೆ, ಶಂಭು ಹಬೀಬ್, ಮೆಹರವಾಡೆ ಎಂಬ ...ಗಳು ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಹೇರಳವಾಗಿ ಮೇಯುತ್ತಿದ್ದಾರೆ. ...ೀಸರಿಗೆ ಪ್ರಾಮಾಣಿಕವಾಗಿ ಅವರ ಪಾಲನ್ನು ಒಪ್ಪಿಸುತ್ತಿದ್ದಾರೆ. ...ಲ್ಲ ಬುಕ್ಕಿಗಳ ದಿನದ ವಹಿವಾಟು 25 ಲಕ್ಷ ರೂಪಾಯಿಗಳನ್ನು ...ತ್ತದೆ. ಮೊಬೈಲ್ ಫೋನ್‌ಗಳಲ್ಲಿ ನಡೆಯುವ ಎಲ್ಲ ...ವಾರಗಳೂ ಗೊತ್ತಿದ್ದೂ ಗೊತ್ತಿಲ್ಲದಂತೆ ನಟಿಸುತ್ತದೆ ಪೋಲೀಸ್ ...ಪಾರ್ಟ್‌ಮೆಂಟ್. ಕ್ರಿಕೆಟ್ ಪಂದ್ಯಗಳ ಸಂದರ್ಭದಲ್ಲಿ ಕೆಲ ಬುಕ್ಕಿಗಳನ್ನು ...ಕರೆತಂದು ಪೋಲೀಸ್ ಠಾಣೆಗಳಲ್ಲಿ ಕೂಡಿಸುವ ನಾಟಕ ...ತ್ತದೆ. ಆದರೆ ಠಾಣೆಗೆ ಬರುವ ಮೊದಲೇ ಬೇಕಿಯವರಿಗೆ ಬೆಟ್ಟಿಂಗ್ ...ದಾರಿ ... ಬಂದಿರುತ್ತಾರೆ ಈ ಹಂಟರ್‌ಗಳು. ಹಿಂದೆಲ್ಲ ಬೇರೆಯವರ ... ಕ್ರಿಕೆಟ್ ಬುಕ್ಕಿಗಳಾಗಿ ಕೋಟ್ಯಾಧೀಶರಾಗಿದ್ದಾರೆ. ...ರಾಗಿದ್ದವರು, ನಕಲಿ ಮದ್ಯದವರೆಲ್ಲ ಬೆಟ್ಟಿಂಗ್ ದಂಧೆಯಲ್ಲಿ ಕುಬೇರರಾಗಿ ಹೋಗಿದ್ದಾರೆ.




ಇದೆಲ್ಲದರ ಮಧ್ಯೆ ಕಮೀಷನರ್ ನಡುಮನಿಯನ್ನೇ ಇಲ್ಲಿಂದ ಎತ್ತಂಗಡಿ ಮಾಡಿಸಲು ಡಿಸಿಪಿಗಳು, ಎಸಿಪಿಗಳು, ಪಿಎಸ್‌ಐಗಳೆಲ್ಲ ವ್ಯೂಹ ರಚಿಸುತ್ತಿದ್ದಾರೆ. ಏಕೆಂದರೆ ನಕಲಿ ಮದ್ಯ, ಮಟ್ಕಾ, ಬೆಟ್ಟಿಂಗ್‌ಗಳಂತಹ ಅಕ್ರಮ ದಂಧೆಗಳಿಂದ ಪ್ರತಿ ತಿಂಗಳು ಕಮೀಷನರೇಟ್‌ಗೆ 25 ಲಕ್ಷ ರೂ. ಕಪ್ಪ ಸಂಗ್ರಹವಾಗುತ್ತದೆಯಂತೆ. ಈ ಹಣದ ಬಹುಪಾಲು ನಡಮನಿಯ ಮನೆಗೇ ಹೋಗುತ್ತಿರುವುದರಿಂದ ಅವರ ಕಿರಿಯ ಸಹೋದ್ಯೋಗಿಗಳಿಗೆ ನಿರಾಶೆಯಾಗಿಬಿಟ್ಟದೆಯಂತೆ. ಹಿಂದಿನ ಆಯುಕ್ತರುಗಳಾದ ಗಗನದೀಪ್, ವೈ.ಆರ್. ಪಾಟೀಲ್, ಡಾ. ಡಿ.ವಿ. ಗುರುಪ್ರಸಾದ್, ಕೆ.ಎಸ್. ಮಡಗಾಂವ್ಕರ್, ನೇಗಿ, ಕೊರಟಕೂರು ಮುಂತಾದವರು ಪ್ರತಿ ತಿಂಗಳು ಸಂಬಂಧಪಟ್ಟ ಠಾಣೆಗಳಿಗೆ ಹಂಚಿಕೆ ಮಾಡಿಯೇ ಉಳಿದಿದ್ದನ್ನು ತಾವು ಸ್ವೀಕರಿಸುತ್ತಿದ್ದರು. ಲೇವಾದೇವಿ ವ್ಯವಹಾರದಲ್ಲಿ ಕಂತ್ರಿ ಕೆಲಸ ಮಾಡಿದ ಧಾರವಾಡದ ಆರ್‌ಎಸ್‌ಎಸ್ ಮುಖಂಡರು ಮತ್ತು ಮಾಜಿ ಮಂತ್ರಿ ಲೀಲಾದೇವಿ ಪ್ರಸಾದರ ಮಗನನ್ನು ಹಿಡಿದಿದ್ದೆ ದೊಡ್ಡ ಪರಾಕ್ರಮ ಎಂದುಕೊಂಡಿರುವ ನಡಮನಿ ನಕಲಿ ಮದ್ಯ, ಬೆಟ್ಟಿಂಗ್, ಮಟ್ಕಾಗಳ ಕುರಿತು ಮಾತೇ ಆಡುವುದಿಲ್ಲ.

ಈಗ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಜಗದೀಶ ಶೆಟ್ಟರ್‌ಗೂ ನಡಮನಿ ಬಗ್ಗೆ ಒಲವು ಇದ್ದಂತಿಲ್ಲ. ಇದೆಲ್ಲ ಸೇರಿ ಸದ್ಯದಲ್ಲೇ ನಡಮನಿ ಎತ್ತಂಗಡಿಯಾದರೆ...

...ಷ್ಯನ ಬೆಲೆ ಇರುವುದು ಅವನು ಸೃಷ್ಟಿಸುವ ಕೆಲವು ವಸ್ತುಗಳ ಮೇಲೆ ಹೊರತು ಅವನು ಕೂಡಿಡುವ ಅನೇಕ ವಸ್ತುಗಳ ಮೇಲಲ್ಲ. -ಖಲೀಲ್ ಗಿಬ್ರಾನ್

ಫ್ರಾನ್ಸಿನಲ್ಲಿ ಆಗ ಮರಣದಂಡನೆಯ ಶಿಕ್ಷೆಗೊಳಗಾದವರನ್ನು ಕೂಡಲೇ ಕೊಲ್ಲುತ್ತಿರಲಿಲ್ಲ. ಖೈದಿಗಳಿಗೆ ಆ ದಿನ ಯಾವುದೆಂದು ತಿಳಿಸುತ್ತಿರಲಿಲ್ಲ. ಏಕೆಂದರೆ ಖೈದಿಗೆ ತನ್ನ ಸಾವಿನ ದಿನ ತಿಳಿಸುವುದು ಅಮಾನವೀಯ ನಾಮದು ಎಂದು ಅವರು ನಂಬಿದ್ದರು! ಎಂದು ಬೆಳಗಿನ ಜಾವ ಬಂದು ಮಲಗಿದ್ದ ಖೈದಿಯನ್ನು ಎಬ್ಬಿಸಿ ಸಿದ್ಧವಾಗಲು ತಿಳಿಸುತ್ತಾರೋ ಅಂದೇ ಆ ಖೈದಿಯ ಕೊನೆಯ ದಿನ. ಅಲ್ಲದೆ ಆ ದಿನ ಖೈದಿಯನ್ನು ನಿದ್ದೆಯಿಂದ ಎಬ್ಬಿಸಲು ಬರುವಾಗ ಆದಷ್ಟು ಜೋರಾಗಿ ಮಾತನಾಡುತ್ತ ಗಲಾಟೆ ಮಾಡುತ್ತಾ ಬರುತ್ತಿದ್ದರು. ನಿದ್ದೆಯಲ್ಲಿದ್ದ ಖೈದಿಗೆ ಎಚ್ಚರವಾಗಿ ತನ್ನ ಸಾವು ಆ ದಿನವೇ ಎಂದು ಅಧಿಕಾರಿಗಳು ಹೇಳುವ ಮೊದಲೇ ತಿಳಿದುಬಿಡುತ್ತಿತ್ತು. ಇದರಿಂದ ಅಧಿಕಾರಿಗಳಿಗೆ ಖೈದಿಗೆ ಸಿದ್ಧವಾಗುವಂತೆ ತಿಳಿಸುವುದು ಸುಲಭವಾಗುತ್ತಿತ್ತು. ಮಾತಾ ಹರಿಗೆ ಅತ್ಯಂತ ಯಾತನೆಯ ದಿನಗಳವು. ಸಾವು ಖಾತ್ರಿಯಾಗಿದೆ, ಆದರೆ ಅದಕ್ಕಾಗಿ ಕಾಯುವುದು ಅತ್ಯಂತ ಘೋರ ಹಿಂಸೆ. ಪ್ರತಿ ರಾತ್ರಿ ಮಲಗುವಾಗಲೂ ಎಂಥದೋ ಆತಂಕ, ಹೆದರಿಕೆ. ನಾಳೆಯ ದಿನ ಕೊನೆಯ ದಿನವಾಗಿರಬಹುದೇ?



ಎಂದುಕೊಂಡೇ ಪ್ರತಿ ರಾತ್ರಿ ಮಲಗುತ್ತಿದ್ದಳು. ಹಿಂಸೆಯಿಂದ ಆಕೆಗೆ ನಿದ್ದೆಯೇ ಬರುತ್ತಿರಲಿಲ್ಲ. ಬಂಧೀಖಾನೆಯ ವೈದ್ಯರನ್ನು ಕೇಳಿ ನಿದ್ದೆ ಮಾತ್ರೆಗಳನ್ನು ನುಂಗುತ್ತಿದ್ದಳು. ಶನಿವಾರ ರಾತ್ರಿ ಮಲಗುವಾಗ ಮಾತ್ರ ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದಳು. ಏಕೆಂದರೆ ಫ್ರಾನ್ಸ್‌ನಲ್ಲಿ ಭಾನುವಾರ ರಜೆ, ಯಾವುದೇ ಖೈದಿಗಳನ್ನು ಕೊಲ್ಲುವುದಿಲ್ಲ. ಬಂಧೀಖಾನೆಯ ಪಿಷ್ಟದ ಆಹಾರ ತಿಂದು ಯಾವುದೇ ದೈಹಿಕ ಚಟುವಟಿಕೆಗಳಿಲ್ಲದೆ ಮಾತಾ ಹರಿ ದಪ್ಪವಾಗಿದ್ದಳು. ಆಕೆಯ ಕೊನೆಯ ದಿನದ ಫೋಟೋಗಳಲ್ಲಿ ಆಕೆ ದಪ್ಪವಾಗಿ ದುಃಖದಿಂದಿರುವುದು ಕಾಣುತ್ತದೆ.

ತಾನು ಬಸುರಿಯೆಂದು ಹೇಳಿ ಮರಣದಂಡನೆಯನ್ನು ತಡೆಯಲು ಕೋರುವಂತೆ ಆಕೆಯ ವಕೀಲ ತಿಳಿಸಿದ. ಆಕೆ ಅದಕ್ಕೆ ಒಪ್ಪಲಿಲ್ಲ. ಕೊನೆಯ ಪ್ರಯತ್ನವಾಗಿ ತಾನು ನಿರ್ದೋಷಿಯೆಂದೂ, ತನ್ನ ಮೇಲೆ ದಯೆತೋರಬೇಕೆಂದೂ ಕೋರಿ ಫ್ರೆಂಚ್ ಅಧ್ಯಕ್ಷರಿಗೆ ಅರ್ಜಿ ಸಲ್ಲಿಸಿದಳು.

ಆದಿನ 1917ರ ಅಕ್ಟೋಬರ್ 15, ಸೋಮವಾರ. ಆಕೆಯನ್ನು ಕರೆದುಕೊಂಡು ಬರುವ ಕಾರ್ಯವನ್ನು ಕ್ಯಾಪ್ಟನ್ ಬೋಷಾರ್ಡನ್‌ಗೆ ವಹಿಸಲಾಗಿತ್ತು. ನಿದ್ರೆ ಔಷಧಿಯ ಪ್ರಭಾವದಿಂದ ಮಾತಾ ಹರಿ ಗಾಢ ನಿದ್ರೆಯಲ್ಲಿದ್ದಳು. ಅಧಿಕಾರಿಗಳು, ಕ್ರೈಸ್ತ ಸಂನ್ಯಾಸಿನಿಯರು ಜೋರಾಗಿ ಮಾತನಾಡುತ್ತ, ಬೂಟುಗಾಲುಗಳ ಸಪ್ಪಳ ಮಾಡುತ್ತಾ ಬಂದರೂ ಆಕೆಗೆ ಎಚ್ಚರವಾಗಿರಲಿಲ್ಲ. ಸಂನ್ಯಾಸಿನಿಯರು ಆಕೆಯ ಭುಜ ಅಲುಗಾಡಿಸಿ ಎಬ್ಬಿಸಿದರು. ಇನ್ನೂ ನಿದ್ದೆಯ ಮಂಪರಿನಲ್ಲೇ ಇದ್ದ ಮಾತಾ ಹರಿಗೆ ಕ್ಯಾಪ್ಟನ್ ಬೋಷಾರ್ಡನ್, 'ಧೈರ್ಯ ತಂದುಕೊ. ನಿನ್ನ ದಯಾಕೋರಿಕೆ ಅರ್ಜಿಯನ್ನು ಫ್ರೆಂಚ್ ಅಧ್ಯಕ್ಷರು ತಿರಸ್ಕರಿಸಿದ್ದಾರೆ. ಈ ದಿನವೇ ನೀನು ಸಿದ್ಧವಾಗಿ ಹೊರಡಬೇಕು' ಎಂದು ಹೇಳಿದ.

ನಿದ್ದೆಯ ಮಂಪರಿನಲ್ಲಿದ್ದ ಮಾತಾ ಹರಿ ತಕ್ಷಣ ಬೆಚ್ಚಿ ಬೆವರಿದಳು. 'ಇಲ್ಲ, ಸಾಧ್ಯವೇ ಇಲ್ಲ!' ಎಂದು ಚೀರಿದಳು. ಕ್ರೈಸ್ತ ಸಂನ್ಯಾಸಿನಿಯರು ಆಕೆಯನ್ನು ಸಂತೈಸಿದರು. ಅಷ್ಟರಲ್ಲಿ ವಾಸ್ತವತೆಗೆ ಬಂದಿದ್ದ ಮಾತಾ ಹರಿ ಕಳೆದ ಮೂರು ತಿಂಗಳುಗಳಲ್ಲಿ ಸಾವಿಗೆ ಮಾನಸಿಕವಾಗಿ ಸಿದ್ಧವಾಗುವ ತಯಾರಿ ನಡೆಸಿಕೊಂಡಿದ್ದವಳು, ಸಾವರಿಸಿಕೊಂಡು, 'ಹೆದರಿಕೋ ಬೇಡಿ ಸಿಸ್ಟರ್, ನನಗೆ ಗೊತ್ತು ಸಾವಿಗೆ ಹೇಗೆ ಸಿದ್ಧವಾಗಬೇಕೆಂದು' ಎಂದು ಅವರಿಗೇ ಹೇಳಿದಳು. ತನ್ನಲ್ಲಿದ್ದ ಅತ್ಯುತ್ತಮ ಬಟ್ಟೆ ಧರಿಸಿದಳು, ಅತ್ಯುತ್ತಮ ಬೂಟು ಧರಿಸಿದಳು, ತಲೆಗೆ ಸ್ಕಾರ್ಫ್ ಕಟ್ಟಿಕೊಂಡಳು, ಕೈಗವಸು ತೊಟ್ಟಳು. ಧೈರ್ಯವಾಗಿ ತಲೆಯೆತ್ತಿ ಸಾವಿನ ಮೆರವಣಿಗೆಯಲ್ಲಿ ಹೊರಟಳು.

ಇಡೀ ಊರೆಲ್ಲಾ ನಿದ್ರಿಸುತ್ತಿತ್ತು, ಆಕೆಯನ್ನು ಕಾರಿನಲ್ಲಿ ಮಸುಕು ಕತ್ತಲಿನಲ್ಲಿ ಊರಾಚೆಯ ಚೀಟೋ ವಿನ್ಸೆನ್ಸ್‌ಗೆ ಕರೆದೊಯ್ಯಲಾಯಿತು. ಅಲ್ಲಿ ಫೈರಿಂಗ್ ಸ್ಕ್ವಾಡ್ ಸಿದ್ಧವಾಗಿತ್ತು, ಹನ್ನೆರಡು ಜನ ಬಂದೂಕುಧಾರಿಗಳು ಮರದ ಬೊಡ್ಡೆಯೊಂದಕ್ಕೆ ಮುಖ ಮಾಡಿ ನಿಂತಿದ್ದರು. ಮಾತಾ ಹರಿ ಆ ಮರದ ಬೊಡ್ಡೆಯವರೆಗೆ ಧೈರ್ಯವಾಗಿಯೇ ನಡೆದು ಹೋದಳು. ಸಂಪ್ರದಾಯದಂತೆ ಸ್ವಲ್ಪ ರಮ್ ಕೊಟ್ಟಾಗ ಅದನ್ನು ಕುಡಿದಳು. [illegible] ಬಂದವರಿಗೆ ಹೆದರಿಕೆಯಿಂದ ನಿಲ್ಲಲೇ ಸಾಧ್ಯವಾಗುವುದಿಲ್ಲ, ಹಾಗಾಗಿ ಅಂಥವರನ್ನು ಮರಕ್ಕೆ ಕಟ್ಟಿಬಿಡುತ್ತಾರೆ. ಮಾತಾ ಹರಿಯನ್ನು ಮರಕ್ಕೆ ಕಟ್ಟುತ್ತೇವೆಂದಾಗ ಬೇಡವೆಂದಳು; ಕಣ್ಣಿಗೆ ಬಟ್ಟೆ ಕಟ್ಟುತ್ತೇವೆಂದರೂ ತನಗೆ ಹೆದರಿಕೆಯಿಲ್ಲ, ಬೇಡವೆಂದಳು. ಸೂರ್ಯ ಉದಯಿಸಿ ರಾತ್ರಿಯ ಮಂಜನ್ನು ಕರಗಿಸುತ್ತಿದ್ದ. ಪಾದ್ರಿ ಮತ್ತು ಕ್ರೈಸ್ತ ಸಂನ್ಯಾಸಿನಿಯರು ತಮ್ಮ ಕರ್ತವ್ಯ ಮುಗಿಸಿ ಹಿಂದೆ ಸರಿದರು. ಫೈರಿಂಗ್ ಸ್ಕ್ವಾಡ್‌ನವರು ಬಂಧೂಕುಗಳನ್ನು ಗುರಿಯಿಟ್ಟು ಸಂಕೇತಕ್ಕಾಗಿ ಕಾಯುತ್ತಿದ್ದರು. ಹನ್ನೆರಡು ಬಂಧೂಕುಗಳು ತನ್ನ ಎದೆಯನ್ನೇ ನೋಡುತ್ತಿರುವುದನ್ನು ಕಂಡಳು. ಬಲಗೈಯನ್ನು ಚುಂಬಿಸಿ ಚುಂಬನವನ್ನು ಗಾಳಿಯಲ್ಲಿ ಬಂಧೂಕುದಾರಿಗಳೆಡೆ ಹಾರಿ ಬಿಟ್ಟು ಎದೆಯೊಡ್ಡಿ ನಿಂತಳು. ಸಂಕೇತ ದೊರೆತೊಡನೆಯೇ ಹನ್ನೆರಡು ಬಂಧೂಕುಗಳ ಸಪ್ಪಳ ಅದುವರೆಗೂ ಇದ್ದ ಮೌನವನ್ನು ಛಿದ್ರಿಸಿತು. ಆಕೆ ಚೀರಲಿಲ್ಲ, ಅರಚಲಿಲ್ಲ, ಎತ್ತಿದ ತಲೆ ಎತ್ತಿದಂತೆಯೇ ಇತ್ತು, ಮುಖ ನಿರ್ವಿಕಾರವಾಗಿತ್ತು. ಹನ್ನೆರಡರಲ್ಲಿ ಒಂದು ಗುಂಡು ಆವಳ ಹೃದಯ ಭೇದಿಸಿತ್ತು. ನಿಧಾನವಾಗಿ ಆಕೆಯ ದೇಹ ಮೊಣಕಾಲೂರಿ ಕೂರುವಂತೆ ಕಂಡಿತು, ಒಂದರೆಕ್ಷಣ ತನ್ನ ಮೇಲೆ ಗುಂಡು ಹಾರಿಸಿದವರನ್ನು ದಿಟ್ಟಿಸಿ ನೋಡುತ್ತಿರುವಂತೆ ಭಾಸವಾಯಿತು. ನೋಡನೋಡುತ್ತಿದ್ದಂತೆಯೇ ಆಕೆಯ ದೇಹ ಹಿಂದಕ್ಕೆ ಬಾಗಿ ದೊಪ್ಪನೆ ಕಾಲುಮಡಚಿರುವಂತೆಯೇ ಹಿಂದಕ್ಕೆ ಬಿತ್ತು. ಅವಳ ಕಣ್ಣು ಆಕಾಶ ದಿಟ್ಟಿಸುತ್ತಿತ್ತು. ಮತ್ತೊಂದು ಸಂಪ್ರದಾಯ ಉಳಿದಿತ್ತು. ಅಲ್ಲಿರುವ ಫ್ರೆಂಚ್ ಅಧಿಕಾರಿ ತನ್ನ ರಿವಾಲ್ವಾರ್‌ನಲ್ಲಿ ಖೈದಿಯ ತಲೆಗೆ ಗುಂಡು ಹಾರಿಸಿ ಖೈದಿಯ ಸಾವನ್ನು ಖಾತ್ರಿಪಡಿಸಬೇಕು. ಮಾತಾ ಹರಿ ಆಗಲೇ ಸತ್ತಿದ್ದು ಆಕೆಯ ವಿಷಯದಲ್ಲಿ ಅದು ಅವಶ್ಯಕತೆಯಿಲ್ಲದಿದ್ದರೂ ಸಂಪ್ರದಾಯದಂತೆ ಕೆಳಗುರುಳಿದ್ದ ಮಾತಾ ಹರಿಯ ದೇಹದ ಬಳಿ ಬಂದು ತನ್ನ ರಿವಾಲ್ವಾರ್‌ನ ಗುಂಡುಗಳನ್ನು ಆಕೆಯ ತಲೆಯಲ್ಲಿ ಹೊಗಿಸಿದ. ಸತ್ತಾಗ ಮಾತಾ ಹರಿಯ ವಯಸ್ಸು 42 ವರ್ಷ.

ಆಕೆಯ ಸಾವಿನಲ್ಲೂ ಅನೇಕ ದಂತಕತೆಗಳು ಹುಟ್ಟಿಕೊಂಡವು. ಪಿಯರ್ರೆ ದ ಮೋರ್ರಿಸ್ಸಾಕ್ ಎಂಬ ಆಕೆಯ ಅಭಿಮಾನಿ ಫೈರಿಂಗ್ ಸ್ಕ್ವಾಡ್‌ನವರಿಗೆ ಲಂಚ ನೀಡಿ ನಿಜವಾದ ತೋಟಾಗಳ ಬದಲಿಗೆ ಖಾಲಿ ತೋಟಾಗಳನ್ನು ತುಂಬಿಸುವಂತೆ ಮಾಡಲು ಪ್ರಯತ್ನಿಸಿದ್ದ, ಆದರೆ ಅದು ಸಫಲವಾಗಲಿಲ್ಲ ಎಂದರು ಕೆಲವರು. ಸಾಯುವ ಮುನ್ನ ಹಠಾತ್ತನೆ ತಾನು ತೊಟ್ಟಿದ್ದ ಕೋಟನ್ನು ಕಿತ್ತೆಸೆದು ಫೈರಿಂಗ್ ಸ್ಕ್ವಾಡ್‌ನವರಿಗೆ ತನ್ನ ನಗ್ನದೇಹ ತೋರಿಸಿ ಅವರನ್ನು ಬೆಚ್ಚಿಬೀಳಿಸಿದಳು ಎಂದರು ಹಲವರು. ಆದರೆ ಅದೆಲ್ಲಾ ಅಷ್ಟು ಮುಖ್ಯವಲ್ಲ, ಮಾತಾ ಹರಿಗೆ ಸಾವು ಬಂದಾಗಿತ್ತು, ಇಡೀ ಯೂರೋಪಿನ ಗಂಡಸರನ್ನೇ ಮೋಡಿ ಮಾಡಿದ್ದ ಮಾತಾ ಹರಿ ಮರದ ಬೊಡ್ಡೆಯ ಬಳಿ ಹೆಣವಾಗಿ ಬಿದ್ದಿದ್ದಳು. ಅವಳ ಬದುಕಿನ ಕತೆಗಳಲ್ಲಿ ಎಷ್ಟು ಸತ್ಯವಿತ್ತು ಎಷ್ಟು ಸುಳ್ಳಿತ್ತು ಎಂಬುದು ಇಂದಿಗೂ ಯಾರಿಗೂ ತಿಳಿದಿಲ್ಲ.

ಆಕೆ ಬದುಕಿದ್ದಾಗ ಅವಳ ಹಿಂದೆ ಜನ ಸುತ್ತುತ್ತಿದ್ದರು. ಅವಳ ನೃತ್ಯ ನೋಡಲು ಜನ ಕಿಕ್ಕಿರಿಯುತ್ತಿದ್ದರು. ಸಂತೋಷ ಕೂಟಗಳಿಗೆ ಅವಳನ್ನು ತಮ್ಮ ಜೊತೆಯಲ್ಲಿ ಕರೆದೊಯ್ಯಲು ಹೆಚ್ಚು ಹೆಚ್ಚು ಹಣ ಕೊಡಲು ತಯಾರಿದ್ದರು. ಆದರೆ ಮಾತಾ ಹರಿಯ ಹೆಣವನ್ನು ಪಡೆಯಲು ಯಾವ 'ವಾರಸುದಾರರು' ಮುಂದೆ ಬರಲಿಲ್ಲ, ಹಾಗಾಗಿ ಆಕೆಯ ದೇಹವನ್ನು ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ ವೈದ್ಯಕೀಯ ಶಾಲೆಯೊಂದಕ್ಕೆ ಕೊಡಲಾಯಿತು. ಆಕೆಯ ಆಸ್ತಿಯನ್ನೆಲ್ಲಾ ಮಾರಿ ಕೋರ್ಟಿನ ಶುಲ್ಕಕ್ಕೆ ವಜಾಮಾಡಿಕೊಂಡರು. ಮಾತಾ ಹರಿಯ ಗಂಡ ರುಡಾಲ್ಫ್ ಆಕೆಯ ಸಾವಿನ ಸುದ್ದಿ ಕೇಳಿ, 'ಆಕೆ ಬದುಕಿನಲ್ಲಿ ಏನೇನೋ ಮಾಡಿರಬಹುದು, ಆದರೆ ಆಕೆಗೆ ಇಂತಹ ಸಾವು ಬರಬಾರದಿತ್ತು' ಎಂದನಂತೆ.

ಕಾಕತಾಳೀಯವೆಂಬಂತೆ ಮಾತಾ ಹರಿಯ ಮಗಳು ನೋನ್, ತಾಯಿಯ ವಾತ್ಸಲ್ಯವಿಲ್ಲದೆ ಬೆಳೆದವಳು, ತಾಯಿಯನ್ನೇ ಬಹುವಾಗಿ ಹೋಲುತ್ತಿದ್ದವಳು ಇದ್ದಕ್ಕಿದ್ದಂತೆ ತನ್ನ ಇಪ್ಪತ್ತೊಂದನೆಯ ವಯಸ್ಸಿನಲ್ಲೇ ಹೃದಯಾಘಾತದಿಂದ ಸಾವನ್ನಪ್ಪಿದಳು. ಆಕೆಗೆ ಡಚ್ ಈಸ್ಟ್ ಇಂಡೀಸ್‌ಗೆ ಹೋಗಿ ಅಧ್ಯಾಪಕಿಯಾಗುವ ಆಸೆಯಿತ್ತು. ಆದರೆ ಒಂದು ರಾತ್ರಿ ಮಲಗಿದವಳು ಬೆಳಿಗ್ಗೆ ಏಳಲೇ ಇಲ್ಲ.

ಮಾತಾ ಹರಿಯ ತಲೆಯನ್ನು ಎಲ್ಲ ಪ್ರಖ್ಯಾತ ಅಪರಾಧಿಗಳ ತಲೆಯಂತೆ ಕತ್ತರಿಸಿ ಪ್ಯಾರಿಸ್ಸಿನ 'ಮೆಕಾಬರ್' ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿತ್ತು. ಎರಡನೇ ವಿಶ್ವಯುದ್ಧದ ಸಮಯದಲ್ಲಿ ಆ ತಲೆಯೂ ನಿಗೂಢವಾಗಿ ಮಾಯವಾಯಿತು.

1921ರಲ್ಲಿ ಹಾಲೆಂಡಿನ ಹೆನ್ರಿ ನೋಡ್‌ಮೇಕರ್ ಎಂಬಾತ ಆತ್ಮಹತ್ಯೆ ಮಾಡಿಕೊಂಡ. ಆತನ ಸಂಬಂಧಿಕರು ಹೇಳಿದಂತೆ ತನ್ನಿಂದಲೇ ಮಾತಾ ಹರಿ ಸತ್ತಿದ್ದು ಎಂಬ ಪಾಪಪ್ರಜ್ಞೆ ಆತನನ್ನು ಕಾಡುತ್ತಿತ್ತು. ಆತ ಬ್ರಿಟಿಷರಿಗೆ ಕೊಟ್ಟ ಸುಳ್ಳು ಮಾಹಿತಿಯಿಂದಲೇ ಮಾತಾ ಹರಿ ಗೂಢಚಾರಿಣಿಯೆಂಬ ಸಂಶಯ ಬಂದು ಆಕೆಯನ್ನು ಕೊಲ್ಲಲಾಯಿ ಎನ್ನುವ ಕೊರಗಿನಲ್ಲೇ ಇದ್ದು ಕೊನೆಗೊಂದು ದಿನ ಆತ್ಮ ಮಾಡಿಕೊಂಡ ಎಂದರು. ಆತ ಮಾತಾ ಹರಿಯ ಬ ಏಕೆ ಸುಳ್ಳು ಮಾಹಿತಿ ಕೊಟ್ಟಿದ್ದ?

ಅದಕ್ಕೆ ಕಾರಣ 1916ರಲ್ಲಿ ನಡೆದ ಒಂದು ಘಟ ಮಾತಾ ಹರಿ 1916ರಲ್ಲಿ ಹಾಲೆಂಡಿನಿಂದ ಫ್ರಾನ್ ಝೀಲ್ಯಾಂಡಿಯಾ ಎಂಬ ಹಡಗಿನಲ್ಲಿ ವಿಗೊ ಮ ಮ್ಯಾಡ್ರಿಡ್ ಮೂಲಕ ಹೋಗುತ್ತಿದ್ದಳು. ಅದೇ ಹಡಗಿ ಹಾಲೆಂಡಿನ ಹೆನ್ರಿ ನೋಡ್‌ಮೇಕರ್ ಸಹ ಇದ್ದ. ಆ ಬ್ರಿಟಿಷ್ ಏಜೆಂಟನಾಗಿದ್ದು ಮಾತಾ ಹರಿ ಹೊರಗೆ ಇದ್ದಾ ಆಕೆಯ ಕ್ಯಾಬಿನ್ ಪ್ರವೇಶಿಸಿ ಅದೂ ಇದು ಹುಡುಕಾ ನಡೆಸಿದ್ದ. ಇದನ್ನು ತಿಳಿದ ಮಾತಾ ಹರಿ ಎಲ್ಲರೆದು ಆಕೆಯ ಕ್ಷಮಾಪಣೆ ಕೇಳುವಂತೆ ಒತ್ತಾಯಿಸಿದಳು. ಆ ಒಪ್ಪದಿದ್ದಾಗ ಆಕೆ ಸಿಟ್ಟಿನಿಂದ ಆತನ ಕಪಾಳಕ್ಕೆ ಹೊಡೆದಿದ್ದ ಹೊಡೆತ ಎಷ್ಟು ತೀವ್ರವಾಗಿತ್ತೆಂದರೆ ಆತನ ಬಾಯಿಯಿಂ ರಕ್ತ ಸುರಿದಿತ್ತು. ಆಕೆಯ ಮೇಲಿನ ಸೇಡಿನಿಂ ನೋಡ್‌ಮೇಕರ್ ಬ್ರಿಟಿಷರಿಗೆ ಆಕೆಯ ಬಗ್ಗೆ ಸು ಮಾಹಿತಿ ನೀಡಿದ್ದ. ಅದರಿಂದಲೇ ಅವಳ ಸಾವುಂಟಾಯಿ ಎಂದೇ ಆತ ನಂಬಿದ್ದ.

ಮಾತಾ ಹರಿ ನಿರಪರಾಧಿ, ನಿರ್ದೋಷಿ ಎಂ ಈಗಲೂ ನಂಬಿರುವ ಹಾಲೆಂಡಿನ ಆಕೆಯ ಊ ಜನ 1976ರಲ್ಲಿ ಆಕೆಯ ನೆನಪಿನಲ್ಲಿ ಲ್ಯೂವಾರ್ಡೆ ಊರಿನಲ್ಲಿ ಆಕೆಯ ಕಂಚಿನ ವಿಗ್ರಹವನ್ನು ಸ್ಥಾಪಿಸಿದ್ದಾ ಅದೇ ಊರಿನ ಫ್ರೈಸ್ ಮ್ಯೂಸಿಯಂನಲ್ಲಿ ಆಕೆ ಕೈಬರಹವಿರುವ ಪುಸ್ತಕ ಹಾಗೂ ಆಕೆಯ ಅಭಿಮಾನಿ ನರ್ತನದ ಹೆಜ್ಜೆಯ ಗುರುತಿರುವ ಜಮಖಾನೆಯೊಂದ ಶಾಶ್ವತ ಪ್ರದರ್ಶನದಲ್ಲಿರಿಸಿದ್ದಾರೆ. ಇಂದಿಗೂ ಅವರು ಆಕೆ ಕೇಸ್‌ನ ಕಡತವನ್ನು ತೆರೆದು ಮರುಪರಿಶೀಲಿಸಲು ಫ್ರೆ ಸರ್ಕಾರವನ್ನು ಕೋರುತ್ತಿದ್ದಾರೆ. ಆಕೆಯನ್ನು ಬೇಹುಗಾರಿ ಮಾಡುವಂತೆ ಒತ್ತಾಯಿಸಿದ ಫ್ರೆಂಚ್ ಸೇನೆಯ ಕಮ್ಯಾಂಡೆಂಟ್ ಲಡೂಕ್ಸ್‌ನನ್ನು 1918 ಬೇಹುಗಾರಿಕೆ ಆರೋಪದ ಮೇಲೆ ಬಂಧಿಸಲಾಯಿತು.

ವಾಸ್ತವವಾಗಿ ಮಾತಾ ಹರಿ ಬದುಕನ್ನು ಆದಮ್ಯವಾ ಪ್ರೀತಿಸುವ ಹೆಣ್ಣಾಗಿದ್ದಳು. ಅವಳ ಬದುಕಿನ ಪ್ರೀತಿ ಮ 'ಪೌರುಷ' ಯುದ್ಧದ ಕ್ರೌರ್ಯ ಮುಖಾಮುಖಿಯಾ ನಿಲ್ಲಲು ಸಾಧ್ಯವೇ ಇರಲಿಲ್ಲ, ಯಾವುದಾದರೊಂದು ಸೋಲಲೇಬೇಕಿತ್ತು, ಆ ಕ್ರೌರ್ಯಕ್ಕೆ 'ಮುಂಜಾವಿನ ಕಣ್ಣು' ಮಾತಾ ಹರಿ ಬಲಿಯಾದಳು.



> ಫೈರಿಂಗ್ ಸ್ಕ್ವಾಡ್‌ನವರು ಬಂಧೂಕುಗಳನ್ನು ಗುರಿಯಿಟ್ಟು ಸಂಕೇತಕ್ಕಾಗಿ ಕಾಯುತ್ತಿದ್ದರು. ಹನ್ನೆರಡು ಬಂಧೂಕುಗಳು ತನ್ನ ಎದೆಯನ್ನೇ ನೋಡುತ್ತಿರುವುದನ್ನು ಕಂಡಳು. ಬಲಗೈಯನ್ನು ಚುಂಬಿಸಿ ಚುಂಬನವನ್ನು ಗಾಳಿಯಲ್ಲಿ ಬಂಧೂಕುದಾರಿಗಳೆಡೆ ಹಾರಿ ಬಿಟ್ಟು ಎದೆಯೊಡ್ಡಿ ನಿಂತಳು. ಸಂಕೇತ ದೊರೆತೊಡನೆಯೇ ಹನ್ನೆರಡು ಬಂಧೂಕುಗಳ ಸಪ್ಪಳ ಅದುವರೆಗೂ ಇದ್ದ ಮೌನವನ್ನು ಛಿದ್ರಿಸಿತು.

ಸ್ಪೈ ಸುಂದರಿ ಮಾತಾ ಹರಿ 6

ಸಾವಿನ ಮುಂದೆಯೂ ಮುತ್ತು ಕೊಟ್ಟ ಮಾತಾ!

ಜೆ. ಬಾಲಕೃಷ್ಣ

ದೇಶಿಯತೆ ಉಳಿಯಬೇಕಾದರೆ.......

ಮೊನ್ನೆ ಮೊನ್ನೆ ನಡೆದ ಬೀದರ್ ಸಾಹಿತ್ಯ ಸಮ್ಮೇಳನದಲ್ಲಿ ದೇಶಿಯತೆಯ ಬಗ್ಗೆ ಬಹಳ ಮಂದಿ ಮಾತಾಡಿದರು. ನಿರ್ಣಯ ತೆಗೆದುಕೊಳ್ಳುವಾಗ ಐಟಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಕೊಡಬೇಕು ಎಂದು ಆಯಿತು. ನ್ಯಾಯ ಬದ್ಧತೆಯ ದೃಷ್ಟಿಯಿಂದ ನಿರ್ಣಯ ಸರಿಯಾಗಿಯೇ ಇದೆ. ಆದರೆ ನಿರ್ಣಯವು ಐಟಿ ಕಂಪನಿಗಳ ಅಸ್ತಿತ್ವವನ್ನು ಮಾನ್ಯ ಮಾಡುತ್ತದೆ. ಎಲ್ಲಿಯ ತನಕ ಐಟಿ ಕಂಪನಿಗಳ ವ್ಯಾಪ್ತಿ ಇರಬೇಕು ಎಂಬುದನ್ನು ಸ್ಪಷ್ಟಪಡಿಸದೆ ಐಟಿ ಕಂಪನಿಗಳನ್ನು ಮಾನ್ಯ ಮಾಡುವುದೆಂದರೆ ದೇಶೀಯತೆಯ ನಾಶಕ್ಕೆ ಒಪ್ಪಿಗೆ ಕೊಡುವುದೇ ಆಗಿದೆ.

ಈ ಗೊಂದಲಗಳು ಇಡೀ ಭಾರತವನ್ನು ಕಾಡುತ್ತಿದೆ. ನಾನು ಪ್ರಬಂಧ ಮಂಡಿಸಿದ 'ಜಾಗತೀಕರಣ' ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ವಿ. ಶ್ರೀನಿವಾಸ ಪ್ರಸಾದ್ ಜಾಗತೀಕರಣಕ್ಕೆ ಆತಂಕ ಪಡಬೇಕಾಗಿಲ್ಲ, ಎನ್ನುತ್ತಲೇ ಖಾಸಗಿ ಘಟಕಗಳಲ್ಲಿ ದಲಿತರಿಗೆ ಮೀಸಲಾತಿ ಕೊಡಬೇಕೆಂದರು. ವಾಸ್ತವವಾಗಿ ಮೀಸಲಾತಿ ಎನ್ನುವುದು ಸಮಾಜವಾದಿ ಉಪಕ್ರಮವಾಗಿದ್ದು ಬಂಡವಾಳಶಾಹಿ ಉಪಕ್ರಮವಾದ ಜಾಗತೀಕರಣವು ಮೀಸಲಾತಿಯನ್ನು ಒಂದು ತತ್ವವಾಗಿ ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಇದು ಜೊತೆಗೆ ಐಟಿ ಕಂಪನಿಗಳು ಬಯಸುವ ಇಂಗ್ಲೀಷನ ನಮ್ಮ ಮಕ್ಕಳಿಗೆ ಚೆನ್ನಾಗಿ ಕಲಿಸಿ ಅಲ್ಲಿ ಉದ್ಯೋ ಪಡೆಯುವ ಹಂಬಲದ ಶಿಕ್ಷಣ ಉಪಕರಣಗಳ ಬಿರುಗಾಳಿಯಂತೆ ರಾಚುತ್ತಿವೆ.

ಆದರೆ ಈಗ ಇಂಗ್ಲಿಷ್ ಕಲಿಯುವ ಮಕ್ಕಳು ಉದ್ಯೋ ಕೇಳುವುದು ಇನ್ನು ಇಪ್ಪತ್ತು ವರ್ಷಗಳ ನಂತರ. ಆ ಐಟಿ ಕಂಪನಿಗಳು ಬೇರೆ ರೀತಿಯ ಇಂಗ್ಲಿಷ್ ಬಯಸುತ್ತ ಎನ್ನುವುದು ಒಂದು ಸಂಗತಿಯಾದರೆ ಐಟಿ ಕಂಪನಿಗಳ ಬೃಹತ್ ಪ್ರಮಾಣದ ಉತ್ಪಾದನ ಘಟಕಗಳಾಗಿದ್ದು 20 ವರ್ಷಗಳಲ್ಲಿ ಐಟಿ ಕಂಪನಿಗಳ ಉದ್ಯೋಗ ಸೃಷ್ಟಿಯ ಸಾಮರ್ಥ್ಯ ಕುಸಿದು ಹೋಗಲಿದೆ. ಯಾಕೆಂದರೆ ಉತ್ಪಾದನೆ ಬೃಹತ್ ಪ್ರಮಾಣದಲ್ಲಿದ್ದಾಗ ಬೇಡಿಕೆ ಮತ್ತು ಪೂರೈಕೆಯ ನಡುವೆ ಅಸಮತೋಲನ ಉಂಟಾಗುತ್ತದೆ.

ಹಾಗಂತ ದೊಡ್ಡ ಘಟಕಗಳು ಕಡಿಮೆ ಉತ್ಪಾದ ಮಾಡಿದರೆ ಅವುಗಳ ಉತ್ಪಾದನಾ ವೆಚ್ಚ ಅಧಿಕವಾ ಅವು ನಾಶವಾಗುತ್ತವೆ. ಆದ್ದರಿಂದ ಉತ್ಪಾದನೆ ಏರುತ್ತ ಇದ್ದರೂ ಬೇಡಿಕೆ ಇಳಿಕೆಯಾಗುತ್ತಾ ಆಗುತ್ತಾ ಅರ್ಥಶಾಸ್ತ್ರ ಟಿ.ಆರ್. ಮಾಲ್ತಸ್ ಹೇಳುವ ಥಿಯರಿ ಆಫ್ ಮಾರ್ಕೆಟ್ ಗ್ಲಟ್ ಅಷ್ಟೈ ಆಗಿ ಮಾರಾಟವಾಗದ ಸರಕುಗಳ ರಾಶಿರಾಶಿಯಾಗಿ ಉಳಿದು ಮುಂದೆ ಉತ್ಪಾದನೆ

ಹಠವಾದಿ- ತಾಯಿಯ ಮಮತೆ ಮತ್ತು ಬ್ರೇನ್ ಟ್ಯೂಮರ್

ಈ ಚಿತ್ರ ನೋಡಬೇಕೆ?

ಕವಿತಾ ಲಂಕೇಶ್



'ತೆನನಂ ತನನಂ' ಸಿನಿಮಾ ಮಾಡುವುದರಲ್ಲಿ ...ಯಾಗಿದ್ದರಿಂದ ನನಗೆ ಇತ್ತೀಚೆಗೆ ಸಿನಿಮಾ ವಿಮರ್ಶೆ ...ಡಲು ಸಾಧ್ಯವಾಗಿರಲಿಲ್ಲ. ಒಂದು ಸಿನಿಮಾ ...ಡುವಾಗ ಅದೆಷ್ಟು ಸಂತೋಷ, ಕಷ್ಟ, ಟೆನ್ಷನ್ ಇರುತ್ತ ...ವೆ ಅದು ಒಬ್ಬ ನಿರ್ದೇಶಕನಿಗೆ ಮಾತ್ರ ಗೊತ್ತಾಗುತ್ತದೆ. ...ಮಲಗಲೂ ಸಾಧ್ಯವಾಗದಷ್ಟು ಶೂಟಿಂಗಿನ ಗುಂಗು ...ಮುಸಿದಿರುತ್ತದೆ. ಆದ್ದರಿಂದಲೇ ಸಿನಿಮಾ ಮಾಡಲು ...ರಟಾಗ ಸಿನಿಮಾ ನೋಡುವುದನ್ನು ನಿಲ್ಲಿಸುತ್ತೇನೆ. ... ಶೂಟಿಂಗ್ ನಡುವೆ ಹತ್ತು ದಿನಗಳ ಕಾಲ ವಿರಾಮ ...ದ್ದರಿಂದ ಸಿನಿಮಾ ನೋಡಲು ಮನಸ್ಸು ಚಡಪಡಿಸುತ್ತಿತ್ತು, ...ವಾದಿ', ಅಥವಾ ರವಿಚಂದ್ರನ್ ಮತ್ತು ನಾಯಕಿ ...ಕಾ ಹೇಳುವ ಹಾಗೆ, 'ಅಠವಾದಿ' ಸಿನಿಮಾ ನೋಡಲು ...ರಟೆ. ತಮಾಷೆ ಯಾವುದೆಂದರೆ ಇವರಿಬ್ಬರಿಗೂ ...ಾರ ಗೊತ್ತಿಲ್ಲದಿರುವುದು. ಹಿಂದೊಮ್ಮೆ ಸಂದರ್ಶನ ...ದರಲ್ಲಿ ರಾಧಿಕಾ 'ನನಗೆ ತುಂಬ ಹೆಮ್ಮೆ' ಅನ್ನುವ ...ಲು 'ನನಗೆ ತುಂಬ ಎಮ್ಮೆ' ಅಂತ ಹೇಳಿದ್ದಳು!

...ತ್ರಿವೇಣಿ ಚಿತ್ರಮಂದಿರದ ಮುಂದೆ ಹಳದಿ, ಕೆಂಪು ...ಟಗಳನ್ನು ಹಾಕಿದ್ದರು. ಇವು ಈ ಸಿನಿಮಾದ ಪ್ರಚಾರಕ್ಕೆ ...ರೋದು ಅಂತ ನನಗೆ ಗೊತ್ತಾಗದೆ ಯಾವುದೋ ...ಕೀಯ ಪಕ್ಷ ಹಾಕಿರಬೇಕು ಅಂದುಕೊಂಡೆ. ...ಕೆಂದರೆ ಇತ್ತೀಚೆಗೆ ಸಿನಮಾ ಪೋಸ್ಟರ್‌ಗಳಿಗಿಂತ ...ಗಲ್ಲಿಗಳಲ್ಲಿ ಕುಮಾರಸ್ವಾಮಿ, ಯಡಿಯೂರಪ್ಪ ...ದಿ ರಾಜಕಾರಣಿಗಳ ಪೋಸ್ಟರ್‌ಗಳೇ ಹೆಚ್ಚು ...ತ್ತವೆ. ಸನ್ಮಾನದಿಂದ ಹಿಡಿದು ಹುಟ್ಟಿದ ಹಬ್ಬವನ್ನು ...ಸಿಕೊಳ್ಳುವ ಗೀಳು ನಮ್ಮ ರಾಜಕಾರಣಿಗಳಿಗೆ ...ಕೊಂಡಿದೆ. ಇಂತಹ ಪೋಸ್ಟರ್‌ಗಳನ್ನು ಹಚ್ಚಲು ...ನಗರ ಪಾಲಿಕೆಗೆ ಹಣ ಕಟ್ಟಿ ಒಪ್ಪಿಗೆ ಪಡೆಯಬೇಕು ... ಇವರಿಗೆ ಗೊತ್ತಿದೆಯೋ ಇಲ್ಲವೋ, ಅಥವಾ ...ಯಮ ಅವರಿಗೆ ಅನ್ವಯಿಸುವುದಿಲ್ಲವೋ ಗೊತ್ತಿಲ್ಲ.

'ಹಠವಾದಿ' ಸಿನಿಮಾ 'ಜೋಗಿ' ಮತ್ತು ...ೃತಧಾರೆ'ಯನ್ನು ನೆನಪು ...ುತ್ತೆ. ಗಾಂಧೀನಗರದವರ ತರಹ ...ವುದಾದರೆ 'ಜೋಗಿ' ಯಲ್ಲಿ ...ರ್ ಸೆಂಟಿಮೆಂಟ್ ಇತ್ತು. ...ೃತಧಾರೆ'ಯಲ್ಲಿ ಬ್ರೈನ್ ಟ್ಯೂಮರ್ ...ನ ಸೆಂಟಿಮೆಂಟ್ ಇತ್ತು. ...ವಾದಿ'ಯಲ್ಲಿ ಈ ಎರಡೂ ಹಿಟ್ ...ಮೆಂಟ್‌ಗಳ ಕಾಂಬಿನೇಷನ್ ಇದೆ.

...ಥೆ: ಕಾವೇರಿ (ಪದ್ಮಜಾ ರಾವ್) ತುಂಬು ಗರ್ಭಿಣಿ. ...ಿಯ ದಡದಲ್ಲೇ ಗಂಡು ಕೂಸನ್ನು ಹಡೆಯುತ್ತಾಳೆ. ... ಮತ್ತು ತಾಯಿಯ ಮೇಲೆ ಕನ್ನಡ ಧ್ವಜ ಹಾರಿ ... ಅವರನ್ನು ಹೊದೆಯುತ್ತೆ. ಗಂಟೆ ಹೊಡ್ಕೊಳುತ್ತೆ. ...ಹಾಗೆ ಈ ಕನ್ನಡ ಧ್ವಜವನ್ನು ಯಾರು ಡಿಸೈನ್ ...ದ್ದು? ನಿಮಗ್ಯಾರಿಗಾದರೂ ಗೊತ್ತಾ? ಆದರಷ್ಟು ...ಧ್ವಜವನ್ನು ನಾನೆಲ್ಲೂ ನೋಡಿಲ್ಲ. ಕೆಂಪು ಮತ್ತು ... ಬಣ್ಣದ ಎರಡು ತುಂಡು ಬಟ್ಟೆಗಳನ್ನು ಜೋಡಿಸಿ ...ದ ಹಾಗಿದೆ. ಈ ಧ್ವಜದಲ್ಲಿನ ಕುಂಕುಮ ಮತ್ತು ...ನಕ್ಕೂ, ಗಂಧದ ನಾಡಾದ ಕರ್ನಾಟಕಕ್ಕೂ ಏನು ...ಂಧ? ಇರಲಿ.

ಅಲ್ಲೇ ಕೂತು ತಪಸ್ಸು ಮಾಡುತ್ತಿರುವ ಋಷಿಯೊಬ್ಬ ಮಗುವಿಗೆ ಬಾಲು ಅಂತ ಹೆಸರಿಡುತ್ತಾನೆ. ಬಾಲುವಿನ ತಾಯಿ ಅವನಲ್ಲಿ ಸ್ಫೂರ್ತಿ, ಛಲ, ಹಠ ಎಲ್ಲಾ ತುಂಬಿ ಬೆಳೆಸುತ್ತಾಳೆ. ಬಾಲು ದೊಡ್ಡವನಾಗಿ ಹಾಡು ಹೇಳುವುದಕ್ಕೆ ಮತ್ತು ಸಂಗೀತ ನಿರ್ದೇಶಕನಾಗುವುದಕ್ಕೆ ಪೇಟೆಗೆ ಬರುತ್ತಾನೆ. ಆದರೆ ಅಲ್ಲಿ ಅವನಿಗೆ ಯಾರೂ ಚಾನ್ಸ್ ಕೊಡಲ್ಲ, ಒಂದು ವಠಾರದಲ್ಲಿ ವಾಸಿಸುತ್ತಾ ಅಲ್ಲಿರುವವರಿಗೆಲ್ಲಾ (ದೊಡ್ಡಣ್ಣ, ಚಿತ್ರಾ ಶೆಣೈ, ರೇಖಾ, ಇತ್ಯಾದಿ) ಬಾಲು ಬಟ್ಟೆ ಹೊಲೆಯೋದ್ರಿಂದ ಹಿಡಿದು, ಬಟ್ಟೆ ಇಸ್ತ್ರಿ ಮಾಡಿಕೊಡುವ ವರೆಗೂ ಎಲ್ಲವನ್ನು ಮಾಡಿ ಎಲ್ಲರ ಪ್ರೀತಿ ಗಳಿಸುತ್ತಾನೆ. ಈ ಜನರ ಗುಂಪಿನಲ್ಲಿ 'ಉಪೇಂದ್ರ' ಖ್ಯಾತಿಯ ದಾಮಿನಿಯೂ ಒಬ್ಬಳು. ಮೊನ್ನೆ ಮೊನ್ನೆ ತನಕ ಹೀರೋಯಿನ್ ಪಾತ್ರ ಮಾಡುತ್ತಿದ್ದ ದಾಮಿನಿ ಈ ಸಿನಿಮಾದಲ್ಲಿ ಗುಂಪಿನಲ್ಲಿ ಗೋವಿಂದವಾಗಿದ್ದಾಳೆ.

ಅಮೀಶ (ರಾಧಿಕಾ) ಕರೋಡ್‌ಪತಿ (ಅವಿನಾಶ್)ಯ ಮಗಳು. ಹಣ ಮಾಡುವುದರಲ್ಲೇ ಬ್ಯುಸಿಯಾಗಿರುವ ಅವಿನಾಶ್ ಮಗಳನ್ನು ನಿರ್ಲಕ್ಷ್ಯ ಮಾಡುತ್ತಿರುತ್ತಾನೆ. ಎಷ್ಟರ ಮಟ್ಟಿಗೆ ಅಂದರೆ ಅಪ್ಪ-ಮಗಳು ಅಕ್ಕಪಕ್ಕ ನಿಂತಿದ್ದರೂ ಮೊಬೈಲ್ ಫೋನಿನಲ್ಲೇ ಮಾತನಾಡುತ್ತಿರುತ್ತಾರೆ. ಒಂದು ದಿನ ಅವಳಿಗೆ ತಲೆ ನೋವು ಬರುತ್ತೆ. ಇದು ಯಾವುದೇ ಸಾರಿಡಾನ್‌ನಿಂದ ಅಥವಾ ತೈಲದಿಂದ ವಾಸಿ ಆಗುವ ತಲೆನೋವಲ್ಲ; ಯಾರೊಂದಿಗಾದರೂ ಮಾತನಾಡಿದ್ರೆ ಸರಿ ಹೋಗುವ ನೋವು ಇದು ಅಂತ ಸುಮ್ನೆ ಫೋನ್ ತಿರುಗಿಸುತ್ತಾಳೆ. ಫೋನಿನಲ್ಲಿ ಅಮೀಶಾಳಿಗೆ ಬಾಲು ಪರಿಚಯವಾಗುತ್ತಾನೆ. ಆದರೆ ತನ್ನ ಹೆಸರು ಬಾಲು ಅಂತ ಅವಳಿಗೆ ಹೇಳುವುದಿಲ್ಲ, ಬದಲಾಗಿ ಬರೀ 'ಫ್ರೆಂಡ್' ಅಂತ ಹೇಳುತ್ತಾನೆ. ಅಮೀಶ ಶ್ರೀಮಂತಳಾಗಿದ್ದರೂ ಕಾರನ್ನು ಫಾಲೋ ಮಾಡಲು ಹೇಳಿ ಓಪನ್ ಬಸ್ಸಿನಲ್ಲಿ ಒಮ್ಮೆ ಹೋಗುತ್ತಿರುತ್ತಾಳೆ. ಈ ಓಪನ್ ಬಸ್ಸುಗಳನ್ನು ನಾನೆಂದೂ ಬೆಂಗಳೂರಿನಲ್ಲಿ ನೋಡಿಲ್ಲ, ಆ ಬಸ್ಸನ್ನು ಫೈಟಿಂಗ್ ದೃಶ್ಯಕ್ಕೆ ಉಪಯೋಗಿಸಿದ್ದಾರೆ ಬಿಡಿ. ಬಸ್ಸಿನಲ್ಲಿ ಕಳ್ಳನೊಬ್ಬ ಅವಳ ಬ್ಯಾಗನ್ನು ಲಪಟಾಯಿಸುತ್ತಾನೆ. ಎಂದಿನಂತೆ ಹೀರೋ ಬಾಲು ಬಂದು, ಫೈಟ್ ಮಾಡಿ, ಬ್ಯಾಗನ್ನು ಅಮೀಶಾಳಿಗೆ ಹಿಂದಿರುಗಿಸುತ್ತಾನೆ. ಫೈಟ್ ನಡುವೆ ನಾಲ್ಕೈದು ಸಲ ಬಾಲು ಅವಳ ಮೈ ಮೇಲೆ ಸ್ಲೋ ಮೋಷನಿನ್ನಲ್ಲಿ ಬೀಳುತ್ತಾನೆ. ಇಬ್ಬರಲ್ಲೂ ಲವ್ ಶುರುವಾಗುತ್ತೆ. 'ಫ್ರೆಂಡೇ' ಬಾಲು ಅಂತ ಅವಳಿಗೆ ಗೊತ್ತಾಗೊಲ್ಲ, ಆದರೆ ಬಾಲುಗೆ ಅಮೀಶ ಮತ್ತು ಫ್ರೆಂಡ್ ಒಬ್ಬಳೆ ಅಂತ ಗೊತ್ತಾಗುತ್ತೆ.

ಇನ್ನೊಂದು ದಿನ ಒಬ್ಬ ಪುಟ್ಟ ಹುಡುಗನನ್ನು ಆಕ್ಸಿಡೆಂಟಿನಿಂದ ಬಾಲು ಪಾರು ಮಾಡುತ್ತಾನೆ. ಆದರೆ ಪಾರು ಮಾಡಿದ ನಂತರ ಅವನಿಗೆ ಅಲ್ಲೇ ತಲೆ ಸುತ್ತು ಬಂದು, ಹದ್ದು ಕುಂಯಿ ಕುಂಯಿ ಅಂತ ಅರಚುವುದು ಕೇಳಿಸಿ ಅಲ್ಲೇ ಟ್ರಾಫಿಕ್ ಮಧ್ಯ ಮೂರ್ಛೆ ಬೀಳುತ್ತಾನೆ. ಸದ್ಯ, ಹುಡುಗನ ತಾಯಿ (ವಿನಯಾ ಪ್ರಸಾದ್) ಡಾಕ್ಟರ್. ಆಕೆ ಬಾಲುನನ್ನು ಕರೆದುಕೊಂಡು ಹೋಗಿ ಬ್ರೈನ್, ಹೃದಯ, ಎಲ್ಲವನ್ನೂ ಪರೀಕ್ಷೆ ಮಾಡಿದಾಗ ಬಾಲುಗೆ ಬ್ರೈನ್ ಟ್ಯೂಮರ್ ಇದೆ ಅಂತ ಗೊತ್ತಾಗುತ್ತೆ. ಕಪ್ಪು ಬಟ್ಟೆ ಧರಿಸಿದ ಕೆಲವರು ಬಾಲುನನ್ನು ಸಾವಿನ ಲೋಕಕ್ಕೆ ಕರೆದುಕೊಂಡು ಹೋಗುತ್ತಿರುವ ಹಾಡು ಬರುತ್ತೆ. ಅದ್ಭುತವಾದ visuals, fantastic ಸಂಕಲನ, ಸಖತ್ತಾಗಿರುವ ಛಾಯಾಗ್ರಹಣ ಇವೆಲ್ಲಾ ಸೇರಿ ಎಲ್ಲಾ ಹಾಡುಗಳೂ ಸುಂದರವಾಗಿವೆ. ಆದರೆ ರವಿಚಂದ್ರನ್‌ರವರ ಸಾಹಿತ್ಯ ಎಂದಿನಂತೆ ಮಾತನಾಡುವ ಶೈಲಿಯಲ್ಲಿ ಇರುವುದರಿಂದ ಹಾಡುಗಳನ್ನು ನೆನಪಿಟ್ಟುಕೊಳ್ಳಲಾಗಲಿ ಅಥವಾ ಹಾಡುವುದಕ್ಕಾಗಲಿ ಸಲೀಸಾಗಿ ಬರಲ್ಲ.

ಅಮೀಶ ತನ್ನ ಅಪ್ಪನ ಹೆಸರಿನಲ್ಲಿ ಫೋರ್ಜರಿ ಮಾಡಿ ಒಬ್ಬ ಸಿನಿಮಾ ನಿರ್ದೇಶಕನನ್ನು ಬಾಲುಗೆ ಪರಿಚಯ ಮಾಡಿಸುತ್ತಾಳೆ. ಆದರೆ ಅವರು ಬಾಲುನನ್ನು ಅವಮಾನಿಸುತ್ತಾರೆ. ಹಾಡಲು ಅವಕಾಶ ಕೊಡುವ ಬದಲಾಗಿ ಅವನ ತಲೆ ಕೂದಲು ಕತ್ತರಿಸಿ, ನಾಮ ಹಾಕುತ್ತಾರೆ. (ಕೂದಲಿಲ್ಲದ ಬಾಲುನನ್ನು ನೋಡಿ ಮಲ್ಲ ಚಿತ್ರ ನೆನಪಾಗುತ್ತೆ) 'ನೀನು ಹಾಡು ಹೇಳುವಂತೆ, ಆದರೆ ಮೊದಲು ನಮ್ಮ ಸಿನಿಮಾದಲ್ಲಿ ರೌಡಿ ಪಾತ್ರ ಮಾಡು' ಅಂತ ಹೇಳಿ ಫೈಟ್ ಮಾಡಿಸುತ್ತಾರೆ. ಒಂದೆರಡು ಗೂಸ ತಿಂದ ನಂತರ ಬಾಲು ಸಿಡಿದೆದ್ದು 'ನನಗೆ ಅವಮಾನ ಮಾಡಿದ್ರೆ, ಕರ್ನಾಟಕಕ್ಕೇ ಅವಮಾನ ಮಾಡಿದ ಹಾಗೆ, ಕಾವೇರಿಯನ್ನು ಅವಮಾನ ಮಾಡಿದ್ರೆ, ತಾಯಿಯನ್ನೇ ಅವಮಾನ ಮಾಡಿದಂತೆ' ಅಂತ ಹೇಳಿ ಎಲ್ಲರನ್ನೂ ಹೊಡೆಯುತ್ತಾನೆ. ಅವರು ಪಶ್ಚಾತ್ತಾಪ ಪಡುವವರಂತೆ ನಟಿಸುತ್ತಾರೆ. ನಿನಗೆ ಸನ್ಮಾನ ಮಾಡುತ್ತೀವಿ ಅಂತ ಹೇಳಿ ಪುನಃ ಅವಮಾನ ಮಾಡಿ ಸ್ಟಾರ್ ಹೋಟೆಲಿನಿಂದ ಆಚೆ ಎಸೆಯುತ್ತಾರೆ. ಬಾಲು ಹಠವಾದಿ. ಉಸಿರುಬಿಡದೆ (breathless) ಹಾಡೊಂದನ್ನು ಹೇಳುತ್ತಾನೆ. ಜನರ ಮೆಚ್ಚುಗೆ ಪಡೆದು ಖ್ಯಾತ ನಿರ್ದೇಶಕನಾಗುತ್ತಾನೆ. ಅಲ್ಲಿಯವರೆಗೂ ಟ್ಯೂಮರ್ ಅವನ ಯಶಸ್ಸಿನ ಹಾದಿಗೆ ಅಡ್ಡ ಬಾರದೆ ತೆಪ್ಪಗಿರುತ್ತೆ.

ಬಾಲುವಿನ ಅಮ್ಮ ಕಾವೇರಮ್ಮ ಪೇಟೆಗೆ ಬರುತ್ತಾಳೆ. ಊರಿನಲ್ಲಿ ನಿನಗೆ ಸನ್ಮಾನ ಮಾಡುತ್ತೇವೆ ಬಾ ಎಂದು ಹೇಳಿ ಹೊರಡುತ್ತಾಳೆ. ಅಮೀಶ ಮತ್ತು ವಠಾರದ ಜನರಿಂದ ದೂರವಾದರೆ ತಾನು ಸತ್ತ ಮೇಲೆ ಅವರಿಗೆ ಕಡಿಮೆ ನೋವು ಆಗುತ್ತೆ ಅಂತ ಎಲ್ಲರಿಗೂ ತನ್ನ ಮೇಲೆ ಕೋಪ ಬರುವ ಹಾಗೆ ಬಾಲು ನಡೆದುಕೊಳ್ಳುತ್ತಾನೆ. ಆದರೆ ದೊಡ್ಡಣ್ಣ ಎಲ್ಲರಿಗೂ ಬಾಲುವಿಗೆ ಕಾಯುತ್ತಿರುವ ಸಾವಿನ ಬಗ್ಗೆ ತಿಳಿಸುತ್ತಾನೆ. ಸನ್ಮಾನ ಮಾಡಿಸಿಕೊಳ್ಳಲು ಊರಿಗೆ ಬಾಲು ಹೋಗುತ್ತಾನೆ. ಅಲ್ಲಿ ಹಾಡುತ್ತಾ ಕರ್ನಾಟಕದ ಮ್ಯಾಪ್ ಮೇಲೆ ಫ್ರೀಜ್ ಆಗುತ್ತಾನೆ. ಇದು ಕನಸುಗಾರನ ಕನಸು.

ಹಠಾವಾದಿ ಸ್ವಲ್ಪ confusing ಆಗಿದ್ದರೂ ಕಿಚಮಿಚವಾದರೂ, ಎಲ್ಲೂ ಬೋರ್ ಹೊಡೆಯೊಲ್ಲ. ರವಿಚಂದ್ರನ್‌ರವರು ಹೀರೋಯಿನ್ನಳ ಹೊಕ್ಕಳನ್ನು ಬಿಟ್ಟು 'ಮೇಲೆ' ಬಂದಿದ್ದಾರೆ. ರವಿಚಂದ್ರನ್‌ರವರ ಎಂದಿನ ಶೈಲಿಯಲ್ಲಿರುವ ಹಾಡುಗಳು visualization ಚೊಂಬಾಟಾಗಿವೆ. ರವಿಚಂದ್ರನ್ ಒಬ್ಬ ಕಲಾವಿದನ ನೋವು, ಆಸೆ, ಆಕಾಂಕ್ಷೆಗಳನ್ನು ಕೆಲವೇ ದೃಶ್ಯಗಳಲ್ಲಿ ಚೆನ್ನಾಗಿ ತೋರಿಸಿದ್ದಾರೆ. ಹಲವಾರು ಡೈಲಾಗ್‌ಗಳಿಗೆ ಶಿಳ್ಳೆ ಹೊಡೆಯಲು ಆಸ್ಪದವಿದೆ. ರಾಧಿಕಾ ಇದ್ದಕಿದ್ದಂತೆ ಅಳುವ ತಂಗಿಯಿಂದ ಮತ್ತು ಮೋಟು ಫ್ರಾಕಿನಿಂದ ಬಡ್ತಿ ಪಡೆದು ಎದೆ ತೋರಿಸಿದ್ದರೂ ಚೆನ್ನಾಗಿ ನಟಿಸಿದ್ದಾಳೆ. ಸಿನಿಮಾ ಪೂರ್ತಿ ಕ್ಯಾಮರಾ ಬಹಳಷ್ಟು ಕಡೆ ಅನಾವಶ್ಯಕವಾಗಿ ಚಲಿಸಾಡಿದೆ. ಸಿನಿಮಾ ಮುಗಿದಮೇಲೆ ಹೆಚ್ಚು ಕಡಿಮೆ ರೋಲರ್ ಕೋಸ್ಟರ್ ರೈಡ್‌ಗೆ ಹೋಗಿ ಬಂದಂತೆ ತಲೆ ತಿರುಗುತ್ತೆ. ರೋಲರ್ ಕೋಸ್ಟರ್ ರೈಡ್‌ಗಳು ಇಷ್ಟವಿಲ್ಲದಿದ್ದರೂ, ಅವನ್ನು ಕಂಡು ಭಯವಾದರೂ ಒಂದು ಸರ್ತಿ ಹೋಗೇಬಿಡೋಣ, ಮಜ ಇರುತ್ತೆ ಅನ್ನಿಸುತ್ತದಲ್ಲಾ? ಹಾಗೆ 'ಹಠವಾದಿ'ಯನ್ನೂ ಒಮ್ಮೆ ನೋಡಬಹುದು.



...ಶವಿಲ್ಲದ ಸ್ಥಿತಿಯುಂಟಾಗಿ ಉದ್ಯೋಗ ಸೃಷ್ಟಿ ಇಲ್ಲದ ...ಶ ನಿರ್ಮಾಣವಾಗುತ್ತದೆ.

...1929ರಲ್ಲಿ ಅಮೆರಿಕದಲ್ಲಿ ಈ ಸ್ಥಿತಿ ಉಂಟಾದಾಗ ...ಶಾಸ್ತ್ರಜ್ಞ ಜಾನ್ ಮೆನಾರ್ಡ್ ಕೇನ್ಸ್ ...ಯನ್ನನುಸರಿಸಿದ ಅಮೆರಿಕದ ಅಂದಿನ ಅಧ್ಯಕ್ಷ ...ನ್ ಡಿ ರೂಸ್‌ವೆಲ್ಟ್ ಕೆಲಸದ ಅವಧಿಯನ್ನು ಕಡಿಮೆ ... ನೌಕರರಿಗೆ ಹೆಚ್ಚು ವೇತನ ಕೊಡುವುದು, ರೈತರಿಗೆ ... ಬೆಳೆ ಬೆಳೆಯಲು ಹೇಳಿ ಹೆಚ್ಚು ಬೆಲೆಗೆ ಸರಕಾರವೇ ...ುಕೊಳ್ಳುವುದು ಮುಂತಾದ ಸಮಾಜವಾದಿ ಕ್ರಮ ... ಅನುಸರಿಸಿ ಮಾರುಕಟ್ಟೆಯಲ್ಲಿ ಸರಕುಗಳ ಪೂರೈಕೆ ...ಯಾಗಿ ಜನರ ಕೈಗೆ ಹೆಚ್ಚು ಹಣ ಬರುವಂತೆ ...ದರು. ಆಗ ಬೇಡಿಕೆ ಸೃಷ್ಟಿಯಾಯಿತು. ಉತ್ಪಾದನೆಗೆ ...ಶವಾಗಿ ಉದ್ಯೋಗ ಸೃಷ್ಟಿಯಾಯಿತು. 80ರ ದಶಕ ...ನ್ನ ಅಧಿಕ ಆರ್ಥಿಕ ಬೆಳವಣಿಗೆ ಒಂದು ಹಂತದಲ್ಲಿ ...ುಖವಾಗುತ್ತಿದ್ದಂತೆ ಜಾಗತೀಕರಣವೆಂಬ ನೀತಿಯನ್ನು ...ಶಗಳಿಗೆ ವಿಸ್ತರಿಸಿ ಆ ಮಾರುಕಟ್ಟೆಯನ್ನು ಕಬಳಿಸುವ ...ನ್ನು ಅಮೆರಿಕ ಮಾಡತೊಡಗಿತು. ಹಾಗಂತ ಈ ...ೂಡ ಅಮೆರಿಕವನ್ನು ಹೆಚ್ಚು ಕಾಲ ಉಳಿಸಲಾರದು ...ದಕ್ಕೆ ಅಮೆರಿಕ ತನ್ನ ರೈತರಿಗೆ ಕೊಡುತ್ತಿರುವ ಶೇ. ...ು ಸಬ್ಸಿಡಿಗಳು ಸಾಕ್ಷಿ ಒದಗಿಸುತ್ತವೆ.

...ಷ್ಟಲ್ಲಿ ಭಾರತದ ಆರ್ಥಿಕತೆಯ ಜೀವದ್ರವ್ಯ ಭಾರತದ ...ಗಳಲ್ಲಿದೆ ಎಂಬುದನ್ನು ಗಮನಿಸಬೇಕು. ಇಲ್ಲಿನ ... ಬಹುಸಂಸ್ಕೃತಿಗಳು ಬಹು ಆರ್ಥಿಕ ಘಟಕಗಳನ್ನು ...ದ್ದು, ಅವು ಸಣ್ಣ ಘಟಕಗಳಾಗಿರುವುದರಿಂದ ...ಜೆ, ಪೂರೈಕೆ ಮತ್ತು ಬೇಡಿಕೆಗಳ ನಡುವೆ ...ೋಲನ ಇರುತ್ತದೆ. ತತ್ಪರಿಣಾಮ ಉದ್ಯೋಗ ಸೃಷ್ಟಿ ...ವಾಗುತ್ತದೆ. ಈ ಘಟಕಗಳನ್ನು ಬಲಪಡಿಸಬೇಕು. ... ಸಾಂಸ್ಕೃತಿಕವಾಗಿ ಬಲಪಡಿಸ ಹೊರಟರೆ ಗಾಂಧಿಯ ... ಹಾಗಿನ ಬರುತ್ತದೆ. ಆಗ ಜಾತೀಯತೆಯಂತಹ ...ಗಳು ಹಾಗೇ ಉಳಿದು ಬಿಡುವ ಮತ್ತು ಆಧುನೀಕರಣದ ಸತ್ಫಲಗಳು ದಕ್ಕದೆ ಹೋಗಲು ಸಾಧ್ಯವಿದೆ. ಆದ್ದರಿಂದಲೇ ಈ ಘಟಕಗಳನ್ನು ಆರ್ಥಿಕವಾಗಿ ಬಲಪಡಿಸಬೇಕಾಗುತ್ತದೆ.

ಜಾಗತೀಕರಣದ ಭಯ ಬೇಡ ಎನ್ನುವವರೆಲ್ಲ ಐಟಿ ಕಂಪನಿಗಳನ್ನು ಬಲಪಡಿಸುವ ಧಾವಂತದಲ್ಲಿದ್ದಾರೆ ಹೊರತು ಈ ಘಟಕಗಳನ್ನಲ್ಲ, ಈ ಘಟಕಗಳು ಬಲಪಡಬೇಕಾದರೆ ಬಹುರೂಪಿ ಆರ್ಥಿಕ ಘಟಕಗಳಲ್ಲಿ ಬಹುರೂಪಿ ಸರಕು ಮತ್ತು ಸೇವೆಗಳು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆಯಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಪ್ರವೇಶಿಸಬೇಕು.



ನಮ್ಮ ಸಾಂಸ್ಕೃತಿಕ ಸಮುದಾಯಗಳು ಸಹಜವಾಗಿಯೇ ಹೊಂದಿರುವ ಕೌಶಲಗಳಿಗೆ ಪೈಪೋಟಿ ಒಡ್ಡುವ ಶಕ್ತಿ ಪಶ್ಚಿಮದ ಶ್ರೀಮಂತ ರಾಷ್ಟ್ರಗಳಿಗಿಲ್ಲ, ಯಾಕೆಂದರೆ ಅವರು ಇದೇ ಉತ್ಪಾದನೆ ಮಾಡಬೇಕಾದರೆ ಕೌಶಲವನ್ನು ಕಲಿಯಬೇಕಾಗುತ್ತದೆ. ಕಲಿತು ಮಾಡಿದ್ದರ ಗುಣಮಟ್ಟ ಸಹಜ ಪರಿಣತಿಯಿಂದ ಮಾಡಿದ್ದರ ಗುಣಮಟ್ಟಕ್ಕಿಂತ ಕಡಿಮೆಯೇ ಇರುವುದರಿಂದ ಭಾರತದ ಈ ಉತ್ಪನ್ನಗಳ ಜೊತೆ ಪಶ್ಚಿಮದ ಶ್ರೀಮಂತ ರಾಷ್ಟ್ರಗಳು ಪೈಪೋಟಿ ಮಾಡಿ ಗೆಲ್ಲಲಾರವು.

ಹಾಗೆಂದ ಮಾತ್ರಕ್ಕೆ ಆಧುನಿಕ ಬ್ಯಾಂಕು, ರೈಲು, ವಿಮಾನ, ಐಟಿ ಎಲ್ಲ ನಮಗೆ ಬೇಡವೆಂದಲ್ಲ, ಅವೆಲ್ಲವೂ ಬೇಕು. ಆದರೆ ಅವುಗಳ ಉತ್ಪಾದನೆಯ ಪ್ರಧಾನ ಉದ್ದೇಶ ದೇಶೀಯ ಬಳಕೆಯಾಗಿರಬೇಕೆ ಹೊರತು ರಫ್ತಲ್ಲ. ರಫ್ತಿನ ವಿಚಾರದಲ್ಲಿ ದೇಶೀಯ ಘಟಕಗಳ ಉತ್ಪಾದನೆಗೆ ಒತ್ತು ಸಿಗಬೇಕು. ಈ ಇನ್ನೊಂದು ನೆಲೆಯಿಂದ ಅಭಿವೃದ್ಧಿ ಪ್ರಕ್ರಿಯೆ ಆರಂಭವಾದ ತಕ್ಷಣ ಐಟಿ ಕಂಪನಿಗಳ ಹಾರಾಟ-ಸವಾರಿಗಳು ಇಳಿಮುಖವಾಗತೊಡಗುತ್ತದೆ. ಈ ನಿಟ್ಟಿನಲ್ಲಿ ಸದ್ಯ ಯುಪಿಎ ಸರಕಾರ ಸಾರ್ವಜನಿಕ ಚರ್ಚೆಗೆ ಬಿಟ್ಟಿರುವ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ಪ್ರಸ್ತಾಪಿಸಲಾಗಿರುವ "ದೇಶೀಯ ಜ್ಞಾನವನ್ನು ಶಾಲೆಗಳಲ್ಲಿ ಬಳಸುವುದು" ಎನ್ನುವುದಕ್ಕೆ ಹೆಚ್ಚು ಪ್ರಾಶಸ್ತ್ಯ ಸಿಗಬೇಕು.

ಇದೆಲ್ಲ ಆಗಬೇಕಾದರೆ ಮುಖ್ಯವಾಗಿ ನಾಲ್ಕು ಕೆಲಸಗಳು ಆಗಬೇಕು. ದೇಶೀಯ ಕೌಶಲಗಳೇನಿವೆಯೋ, ಯಾವ ಜನಪದೀಯ ಶಿಕ್ಷಣ ಪದ್ಧತಿಯಲ್ಲಿ ಅವು ಇವೆಯೋ ಅದಕ್ಕೆ ಸಾಂವಿಧಾನಿಕ ಮಾನ್ಯತೆ ದೊರೆತು ವ್ಯವಸ್ಥಿತವಾಗಿ ಶಾಲೆಗಳಲ್ಲಿ ಕಲಿಸಲ್ಪಡಬೇಕು. ಇಂಗ್ಲಿಷ್ ಶಿಕ್ಷಣ ಪದ್ಧತಿಗೆ ಸಾಂವಿಧಾನಿಕ ಮಾನ್ಯತೆ ದೊರೆತಾಗ ಆಡಳಿತಾಧಿಕಾರಿಯು ಯಾವ ಜಾತಿ ಹಿನ್ನೆಲೆಯವನೇ ಆದರೂ ಸಾಮಾಜಿಕ ಗೌರವ ಪಡೆಯಲು ಸಾಧ್ಯವಾಗುವ ಹಾಗೆಯೇ, ಜನಪದೀಯ ಶಿಕ್ಷಣ ಪದ್ಧತಿಗೆ ಸಾಂವಿಧಾನಿಕ ಮಾನ್ಯತೆ ದೊರೆತಾಗ ಬುಟ್ಟಿ ಹೆಣೆದು ಬದುಕುವವನು ಕೂಡ ಸಾಮಾಜಿಕ ಗೌರವ ಪಡೆಯಲು ಸಾಧ್ಯವಾಗುತ್ತದೆ. ಎರಡನೆಯದಾಗಿ ಇಲ್ಲಿ ಉತ್ಪಾದನೆಯಾದ ದೇಶೀಯ ಉತ್ಪನ್ನಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆ ಒದಗಬೇಕು. ಇವೆರಡೂ ಸರಕಾರವೇ ಮಾಡಬೇಕಾದ ಕೆಲಸಗಳು. ಮೂರನೆಯ ಮತ್ತು ಜಾಗತೀಕರಣ ಸಂದರ್ಭದಲ್ಲಿ ಮಹತ್ವದ ಸಂಗತಿಯೆಂದರೆ ನಮ್ಮ ದೇಶೀಯ ಜ್ಞಾನ ಮೂಲಕಗಳಿಗೆ ಆದಷ್ಟು ಬೇಗ ನಾವು ಪೇಟೆಂಟ್ ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ಸಾಮಾಜಿಕ ಅರಿವು ಬೆಳೆಸುವ, ಜನರಿಗೆ ಸಂದಾಯ ಮಾಡುವ ಕೆಲಸವನ್ನು ಸ್ವಯಂ ಸೇವಾ ಸಂಸ್ಥೆಗಳು, ಸಾಂಸ್ಕೃತಿಕ ವೇದಿಕೆಗಳು, ಮಾಧ್ಯಮಗಳು ಮಾಡಬೇಕು.

ದೇಶೀಯತೆ ಬಗ್ಗೆ ಮಾತನಾಡುವ ಯಾವ ದೊಡ್ಡ ಸಾಹಿತಿ-ಸಂಸ್ಕೃತಿ ಚಿಂತಕರು ಕೂಡ ಈ ನಿಟ್ಟಿನಲ್ಲಿ ತಲೆಕೆಡಿಸಿಕೊಳ್ಳದಿರುವುದು ಈ ಕಾಲಘಟ್ಟದ ಕ್ರೂರ ವ್ಯಂಗ್ಯವಾಗಿದೆ. ನಾಲ್ಕನೆ ಸಂಗತಿಯೆಂದರೆ ಸಾಹಿತ್ಯ ಪರಿಷತ್ತಿನಂತಹ ದೊಡ್ಡ ದೇಶೀಯ ಸಂಸ್ಥೆಗಳು ಈ ನಿಟ್ಟಿನಲ್ಲಿ ಜವಾಬ್ದಾರಿಯುತ ಪಾತ್ರವಹಿಸಬೇಕು. ಇತ್ತೀಚೆಗೆ ಕೇಂದ್ರ ಹಣಕಾಸು ಸಚಿವರು ಯಾವೆಲ್ಲ ಹೊಸ ಸಂಗತಿಗಳನ್ನು WTO ಒಡಂಬಡಿಕೆಗೆ ಸೇರಿಸಬಹುದೆಂದು ಸಂಘ-ಸಂಸ್ಥೆಗಳ ಸಲಹೆ ಕೇಳಿದರು. ಸಾಹಿತ್ಯ ಪರಿಷತ್ತು ಅಥವಾ ಅಂತಹ ಸಂಸ್ಥೆಗಳು ಸಲಹೆ ಕೊಟ್ಟಿವೆಯಾ? ಇಲ್ಲ, ಅವು ಕಲ್ಪನಾ ಸಾಮ್ರಾಜ್ಯದಲ್ಲಿ ದೇಶೀಯತೆಯ ಕನಸು ಕಾಣುತ್ತಿವೆ. ಇಂತಹ ಕೆಲಸವನ್ನು ಒಬ್ಬ ವ್ಯಕ್ತಿಯಾಗಿ ನನ್ನಂತವರು ಮಾಡಲು ಬರುವುದಿಲ್ಲ. ಒಬ್ಬ ವ್ಯಕ್ತಿ ಹೇಳಿದ ಮಾತಿಗೆ ಕವಡೆ ಕಾಸಿನ ಕಿಮ್ಮತ್ತೂ ಸಿಗುವುದಿಲ್ಲ. ಆದರೆ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗೆ ಆ ಶಕ್ತಿ ಇದೆ. ಅದರ ಆಶ್ರಯದಲ್ಲಿ ಹೇಳಹೊರಟಾಗ ಸರಕಾರ ಸ್ವಲ್ಪ ಎಚ್ಚರವಾದರೂ ಆಗುತ್ತದೆ. ದೇಶೀ ಪುಷ್ಟಿ ಉಳಿದರೆ ಸಂಸ್ಕೃತಿಗಳು ಉಳಿದಾವು. ಸಂಸ್ಕೃತಿಗಳು ಉಳಿದರೆ ಸಾಹಿತ್ಯ ಉಳಿದೀತು. ಸಾಹಿತ್ಯ-ಸಂಸ್ಕೃತಿ ಉಳಿಯಬೇಕಾದರೆ ಆಯಾ ಸಾಂಸ್ಕೃತಿಕ ಘಟಕಗಳು ಆರ್ಥಿಕ ಸಾಮಾಜಿಕ ದೃಢತೆ ಪಡೆಯಬೇಕು ಎನ್ನುವುದು ನಮ್ಮ ಸಾಹಿತಿಗಳಿಗೆ ಅರ್ಥವಾಗಬೇಕು.

-ಅರವಿಂದ ಚೊಕ್ಕಾಡಿ

ನಾವು ಮಾನವರಾಗಿ ಹುಟ್ಟಿದವರಲ್ಲ, ಮಾನವರಾಗಲೆಂದು ಹುಟ್ಟಿದವರು - ಯಶವಂತ ಚಿತ್ತಾಲ

ಅಣಕ

ಚಿನ್ನ ವೀಡಿಗರ ಸಂಕಷ್ಟ

'ನಾನು ಯಾರು?' ಎಂಬ ಪ್ರಶ್ನೆ ದಾರ್ಶನಿಕರನ್ನು ಮಾತ್ರವೇ ಅಲ್ಲ, ಲಾಂಗೂಲಾಚಾರ್ಯರಂತಹ ಲೇಖಕರನ್ನೂ ಕಾಡಿದ್ದುಂಟು. 'ನಾನು ನಾನೆ' ಎಂದು ತಿಳಿದಿದ್ದ ಆಚಾರ್ಯರಿಗೆ ಅಪರೂಪಕ್ಕೆ ಒಮ್ಮೆ ಭೇಟಿ ಕೊಟ್ಟ ಅಪ್ಪಯಿಂದ ಜ್ಞಾನೋದಯ ಆಯಿತಂತೆ. ಆ ಅಪ್ಪ ಆಚಾರ್ಯರನ್ನು ತವಕ ದೃಷ್ಟಿಯಿಂದ ನೋಡಿ 'ಕಣ್ಣು ಕಿವಿ, ಮೂಗು ಎಲ್ಲ ಅವರಪ್ಪನ ಪಡಿಯಚ್ಚು' ಎಂದು ಹೇಳಿದಾಗ 'ನಾನು ನಾನಲ್ಲ, ನಾನು ನಮ್ಮಪ್ಪ' ಎಂಬ ಸತ್ಯದ ಅರಿವಾಯಿತಂತೆ. ಈ ಪ್ರಪಂಚದಲ್ಲಿ ಒಬ್ಬರಂತೆ ಏಳು ಮಂದಿ ಇರುತ್ತಾರೆ ಎಂದು ಹೇಳಲಾಗುವುದು ಸರಿಯಷ್ಟೇ. ಲಾಂಗೂಲಾಚಾರ್ಯರನ್ನು ರಸ್ತೆಯಲ್ಲಿ ನೋಡಿದ ಆಗಂತುಕರೊಬ್ಬರು 'ನೀವು ಅವರಲ್ಲವೆ' ಎಂದು ಕೇಳಿ 'ಇವರು ಅವರಲ್ಲ' ಎಂದು ತಿಳಿದಾಗ ಬಹಳ ಬೇಸರಪಟ್ಟುಕೊಂಡರಂತೆ! ಇಂತಹದ್ದೇ ಪ್ರಶ್ನೆ ಇನ್ನೊಬ್ಬ ಲೇಖಕ ನಾ. ಕಸ್ತೂರಿಯವರನ್ನೂ ಕಾಡಿದ್ದುಂಟು. 'ನನ್ನ ಬೆನ್ನು' ಲೇಖನದಲ್ಲಿ ಅದನ್ನು ತೋಡಿ ಕೊಂಡಿದ್ದಾರೆ. ಅವರ ಬೆನ್ನನ್ನು ನೋಡಿ ಹಲವರು ಹಲವು ರೀತಿಯಲ್ಲಿ ಗುರುತಿಸಿದರಂತೆ. ಆದರೆ ಯಾರಿಗೂ ಅವರ ಬೆನ್ನು ಒಬ್ಬ ಪ್ರಸಿದ್ಧ ಪುರುಷನ ಬೆನ್ನಾಗಿ ಕಾಣಿಸಿಕೊಳ್ಳಲಿಲ್ಲ ಎಂಬುದೇ ಅವರ ಅಳಲು!

ಇದೆಲ್ಲ ಯಾಕೆ ಹೇಳಬೇಕಾಯಿತು ಅಂದರೆ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು 'ಯಾರ್ರೀ ಅನಂತಮೂರ್ತಿ' ಎಂಬ ಪ್ರಶ್ನೆಯನ್ನು ಸಮಸ್ತ ಕನ್ನಡಿಗರ ಎದುರು ಇಟ್ಟಿದ್ದಾರೆ. ಈಗಿನ ಸಮಸ್ಯೆ ಎಂದರೆ 'ನಾನು ಯಾರು?' ಎನ್ನುವುದಲ್ಲ, ಪರಂತು 'ಅವನು ಯಾರು?' ಎನ್ನುವುದಾಗಿದೆ. ಅವರು ಕೆಲವರಿಗೆ ಕನ್ನಡದ ಸ್ವಾಭಿಮಾನದ ಪ್ರತೀಕವಾಗಿ ಗೋಚರಿಸಿದರೆ ಇನ್ನು ಕೆಲವರಿಗೆ ಕನ್ನಡದ ಸಾಕ್ಷೀಪ್ರಜ್ಞೆಯಾಗಿ ಕಾಣಿಸುತ್ತಿದ್ದಾರೆ. ಹುಚ್ಚು ನಾಯಿಯಾಗಿಯೂ, ಕೊಳಕು ಮಂಡಲ ದಂತೆಯೂ, ಕನ್ನಡ ವಿರೋಧಿಯಾಗಿಯೂ ಕೆಲವರಿಗೆ ಕಾಣಿಸಿಕೊಂಡಿರುವುದೂ ಉಂಟು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚಂಪಾ ಅವರಿಗೆ ಅನುಕೂಲ ಮೂರ್ತಿಯಾಗಿಯೂ, ಘಟಸರ್ಪದಂತೆಯೂ ತೋರಿದೆಯಂತೆ. ಆ ಭಗವಂತನಂತೆ ನಾನಾ ರೂಪದಲ್ಲಿ ಕಾಣಿಸಿಕೊಳ್ಳುತ್ತಿರುವ ಈ ಅನಂತಮೂರ್ತಿ ಅನ್ನುವವರು ನಿಜಕ್ಕೂ ಯಾರು ಎಂಬ ಪ್ರಶ್ನೆ ಜನಸಾಮಾನ್ಯರನ್ನು ಕಾಡುತ್ತಿದೆ. ಅವರನ್ನೇ ಈ ಕುರಿತು ಕೇಳಬಹುದಾಗಿ ತ್ತಾದರೂ ರಾಜ್ಯಸಭೆ ಚುನಾವಣೆಯಲ್ಲಿ ತಲ್ಲೀನರಾಗಿರು ವುದರಿಂದ ಅವರ ಆತ್ಮಕ್ಕೆ ಶರಣಾಗಬೇಕಾಯಿತು. ರಾಜಕೀಯ ಆಕಾಂಕ್ಷಿಗಳ ಆತ್ಮ ಮೂಲದೇಹದಲ್ಲಿ ಇರುವುದಿಲ್ಲ ಅಧಿಕಾರದ ಗದ್ದುಗೆಯಲ್ಲಿರುತ್ತದೆ ಎಂಬುದು ಸಾಮಾನ್ಯರಿಗೂ ತಿಳಿದಿರುವ ಸಂಗತಿ. ಅದನ್ನು ಹುಡುಕಿ ಸಂದರ್ಶಿಸಿದೆ.

'ಅನಂತಮೂರ್ತಿ ಯಾರು?' ಕೇಳಿದೆ.

ಸಮ್ಮೋಹಕ ನಗು ಬೀರಿತು.

'ನೀವೇ ಹೇಳಿ' ಎಂದಿತು.

ನನಗೆ ತಿಳಿದಿರುವುದನ್ನೆಲ್ಲ ಹೇಳಿದೆ. ಅದಕ್ಕೆ ಹುಸಿ ನಗು ಒಂದೇ ಉತ್ತರ ಆಯಿತು. 'ಸೋತೆಯ' ಎಂದು ಕೇಳಿತು. ಸೋತೆ. ಅನ್ನದೆ ವಿಧಿಯೇ ಇರಲಿಲ್ಲ. ಸಂತುಷ್ಟವಾದ ಆತ್ಮ ನುಡಿಯಿತು -'ಮಧ್ಯವರ್ತಿ!'

ಗೊಂದಲಕ್ಕೀಡಾದೆ. ಯಾವುದಕ್ಕೆ ಮಧ್ಯವರ್ತಿ?

ಯಾರಿಗಾಗಿ ಈ ಅವತಾರ?

'ಶಾಸಕರ ಮಧ್ಯವರ್ತಿ ನಾನು' ಎಂದಿತು ಆತ್ಮ.


ಮತ್ತೆ ಗೊಂದಲದ ಮಾತು.

'ಅಮ್ಮಮ್ಮ ಎಂದರೆ ಒಬ್ಬ ಶಾಸಕರಿಗೆ ಎಷ್ಟು ಕೊಡುತ್ತಿದ್ದ ಆ ರಾಜೀವ ಚಂದ್ರಶೇಖರ್?' ಕೇಳಿತು ಆತ್ಮ.

ಎಷ್ಟು ಅಂತ ಹೇಗೆ ಹೇಳುವುದು? ಇಷ್ಟೇ ಬೇಕು ಅಂತ ಕಂಡಿಷನ್ ಹಾಕುವವರೂ ಇದ್ದಾರೆ. ಬಂದಷ್ಟೇ ಬರಲಿ ಅನ್ನುವ ಶಾಸಕರೂ ಇದ್ದಾರೆ. ಅಲ್ಲದೆ ಈ ರೇಟು ಹದಿನೈದು ಇಪ್ಪತ್ತು ಲಕ್ಷದಿಂದ ಒಂದು ಕೋಟಿಯವರೆವಿಗೂ ಹರಿದಾಡುತ್ತಿದೆ.

'ಹತ್ತು ಹದಿನೈದು ಲಕ್ಷಕ್ಕೇ ಬುಟ್ಟಿಗೆ ಹಾಕಿಕೊಳ್ಳಬೇಕು ಅಂದುಕೊಂಡಿದ್ದ. ನಾನು ಸ್ಪರ್ಧಿಸಲಾಗಿ....'

ಮುಂದೆ ಅನಂತಮೂರ್ತಿಯವರ ಆತ್ಮ



ಏನನ್ನೂ ಹೇಳಬೇಕಾಗಿರಲಿಲ್ಲ, ಅವರ ಸ್ಪರ್ಧೆಯಿಂದಾಗಿ ಶಾಸಕರ ರೇಟಿನಲ್ಲಿ ಹೆಚ್ಚಳ ಆಗಿದೆ!

ಅನಂತಮೂರ್ತಿ ಅವರು ಐದು ಸಾವಿರ ರೂಪಾಯಿಗಳನ್ನು ಎಲ್ಲಿಂದಲೋ ಸಾಲ ಪಡೆದು ತಂದು ಡಿಪಾಜಿಟ್ ಹಣ ಸಂದಾಯ ಮಾಡಿದೆ ಎಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿದ್ದೆ. ಅವರ ಸ್ಪರ್ಧೆಯಿಂದಾಗಿ ರೇಟು ಏರಿಸಿ ಕೊಂಡಿರುವ ಶಾಸಕ ಮಹಾಶಯರುಗಳು ಹೀಗೆ ಹೆಚ್ಚುವರಿ ಹಣಕ್ಕೆ ಕಾರಣೀಭೂತರಾದ ಅವರಿಗೆ ಕಮೀಷನ್ ನೀಡಿ ಸಾಲ ಮುಕ್ತರನ್ನಾಗಿ ಮಾಡುವರೆ ಎಂಬುದು ತಿಳಿದು ಬಂದಿಲ್ಲ, ಕೇಳಿ ತಿಳಿದುಕೊಳ್ಳೋಣ ಎಂದರೆ ಆತ್ಮವೂ ಅವಸರದಲ್ಲಿ ಮಾಯ ವಾಗಿತ್ತು!

'ಯಾರ್ರೀ ಅನಂತಮೂರ್ತಿ' ಎಂದು ಕೋಪೋದ್ರಿಕ್ತರಾಗಿ ಪ್ರಶ್ನಿಸಿದ ಮುಖ್ಯಮಂತ್ರಿಗಳನ್ನು ಕುರಿತು 'ಯಾರ್ರೀ ಈ ಕುಮಾರಸ್ವಾಮಿ' ಎಂದು ಕೇಳುವವರಿಲ್ಲವೆ. ಆದುದರಿಂದ ಕುಮಾರಸ್ವಾಮಿಯವರ ಆತ್ಮವನ್ನೂ ಸಂದರ್ಶಿಸಲಾಯಿತು. ಅವರ ಆತ್ಮ ಹುಡುಕಲು ಅಷ್ಟೇನೂ ಶ್ರಮ ಆಗಲಿಲ್ಲ, ವಿಧಾನಸೌಧದಲ್ಲೇ ಸಿಕ್ಕಿತು.

'ನೀವೂ....' ಎಂದೆ.

'ಮುಖ್ಯಮಂತ್ರಿಯ ಆತ್ಮ' ಎಂದಿತು.

ಏನು ನಯ, ಏನು ವಿನಯ ಅಂತೀರಿ. ಛೆ ಅದನ್ನು ಹೇಳಬಾರದು ಬಿಡಿ.

'ಕುಮಾರಸ್ವಾಮಿ ಯಾರು?'

'ಮಣ್ಣಿನ ಮೊಮ್ಮಗ.'

ಇಷ್ಟೇ ಇರಲಾರದು ಎನ್ನುವ ಅನುಮಾನ.

'ಇನ್ನೇನಾದರೂ ಇದೆಯ?' ಕೇಳಿದೆ.

'ದೇವರ, ಮಠಾಧೀಶರ ಆಶೀರ್ವಾದದ ಕೂಸು ಇದು.'

ಪ್ರಜಾ ಪ್ರಭುತ್ವ ಎಂದರೆ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರುವ ವ್ಯವಸ್ಥೆ ಎಂದು ಎಲ್ಲಿಯೋ ಓದಿದ ನೆನಪು. ಆದರೆ ಇಲ್ಲಿ ಜನರೇ ಇಲ್ಲ, ದೇವರು ಮಠಾಧೀಶರೇ ಎಲ್ಲ! ಪ್ರಜಾ ಪ್ರಭುತ್ವದ ಅರ್ಥವನ್ನೇ ಬದಲಾಯಿಸ ಬೇಕಾಗಿದೆ. ದೇವರು ಮಠಾಧೀಶ ರಿಂದ, ಅವರಿಗಾಗಿ ಹಾಗೂ ಅವರಿ ಗೋಸ್ಕರ ಇರುವುದೇ ಪ್ರಜಾಪ್ರಭುತ್ವ ಎನ್ನೋಣವೆ?! ಇದನ್ನು ಆತ್ಮಕ್ಕೆ ಕೇಳಿದೆ. ವಿನಯದ ಸಾಕಾರ ಮೂರ್ತಿಯಂತೆ ಇದ್ದ ಆತ್ಮ ಇದ್ದಕ್ಕಿದ್ದಂತೆ ರೌದ್ರಾವತಾರ ತಾಳಿತು.

'ಅವನು ಕಳಿಸಿರೋದು ಸಾರ್ ಇವನನ್ನ' ಎನ್ನುತ್ತಾ ಮರೆಯಲ್ಲಿ ಅವಿತು ಕುಳಿತಿದ್ದ ರಾಜೀವ್ ಚಂದ್ರಶೇಖರ್ ಆತ್ಮ ಬಹಿರಂಗವಾಯಿತು.

'ಯಾರ ಮೇಲೆ ಸಾರ್ ನಿಮ್ಮ ಅನುಮಾನ' ಅಂದೆ.

'ಅನುಮಾನ ಏನು ಬಂತು, ಅವನೇ ರೇಟು ಏರಿಸಿದೋನು'

'ಎಷ್ಟು ಏರಿತು ಸಾರ್?'


ಎರಡೂ ಆತ್ಮಗಳು ಕೆಕ್ಕರಿಸಿ ನೋಡಿದವು.

ಪಾಪ ಅವರವರ ಕಷ್ಟ ಅವರವರಿಗೆ!

ಇತ್ತೀಚೆಗೆ ಬಂದ ಸುದ್ದಿ ಏನು ಅಂದರೆ 'ಚಿನ್ನ ವೀಡು' ಇರುವ ಶಾಸಕ ಮಹಾಶಯರುಗಳಿಗೆ ಶಾನೆ ಕಷ್ಟ ಆಗಿದೆಯಂತೆ. 'ಇಷ್ಟೇ ಕಣೆ ದಕ್ಕಿದ್ದು' ಅಂತ ಎಷ್ಟು ಹೇಳಿದರೂ ಚಿನ್ನ ವೀಡಿನಾಕೆ ಕೇಳುವ ಸ್ಥಿತಿಯಲ್ಲೇ ಇಲ್ಲವಂತೆ. ಇನ್ನೂ ಸ್ವಲ್ಪ ಬೇರೆ ವೀಡಿಗೆ ಸಾಗಿಸಿರ ಬಹುದು ಅನ್ನೊ ಅನುಮಾನ ಅವರಿಗಂತೆ. ಹೆಂಗೋ ಮುಗುಮ್ಮಾಗಿ ನಡೆದು ಹೋಗುತ್ತಿತ್ತು, ಈ ಹಾಳಾದ ಅನಂತಮೂರ್ತಿ ಮಧ್ಯ ಬಂದು ನೆಮ್ಮದಿ ಕೆಡಿಸಿದನಲ್ಲ ಅಂತ ಶಾಸಕರು ಶಾಪ ಹಾಕುತ್ತಿದ್ದಾರಂತೆ!

-ಎಚ್.ಎಲ್. ಕೇಶವಮೂರ್ತಿ


ಮಾರಾಟವಾಗುತ್ತಿರುವ ನಿರ್ಲಜ್ಜ ನಾಯಕರು



ಮಲ್ಯ ಒಂದೆರಡು ಕೋಟಿ ಖರ್ಚು ಮಾಡಿ ರಾಜ್ಯಸಭೆಗೆ ಗೆದ್ದು ತನ್ನ ಬಿಸಿನೆಸ್ ಅನ್ನು ಉಳಿಸಿ ಕೊಂಡ ಮತ್ತು ಹೆಚ್ಚಿಸಿ ಯೂಕೊಂಡ. ಪಾಪ ನಮ್ಮ ಜ್ಞಾನಪೀಠಿಗಳಾದ ಮಾನ್ಯ ಅನಂತಮೂರ್ತಿಯವರು ಐದು ಸಾವಿರ ರೂಪಾಯಿ ಸಾಲ ಮಾಡಿದ್ದಾರೆ. ಶಾಸಕರು ಅವರನ್ನು ಗೆಲ್ಲಿಸಿ ಕನ್ನಡ ಸಾಹಿತ್ಯವೆಂಬ ಕ್ಷೇತ್ರವನ್ನು ಉಳಿಸಿ, ಬೆಳೆಸಿ, ಆದಷ್ಟೂ ಬೇಗ ತಮ್ಮ ಐದು ಸಾವಿರ ರೂಪಾಯಿ ಸಾಲವನ್ನು ಬಡ್ಡಿ ಸಮೇತ ತೀರಿಸಿ ಕೃತಾರ್ಥವಂತಾಗಲಿ ಎಂದು ಪ್ರಾರ್ಥಿಸುತ್ತೇನೆ.

-ಬಿ.ಎಸ್. ಇಮಾನುವೇಲ, ರಾಯಚೂರು

ಈ ವಾರದ ಸಂಚಿಕೆಯಲ್ಲಿ 'ಲೋಕಾಯುಕ್ತ ರೇಡ್, ಖಾಕಿ-ಇವರು ಬಾಕಿ' ಎಂಬ ವರದಿ ಓದಿ ಕೆಂಡಾ ಮಂಡಲನಾದೆ. ನಾಡನ್ನು ರಕ್ಷಣೆ ಮಾಡ ಬೇಕಾದ ಪೋಲೀಸ್ ಅಧಿಕಾರಿಗಳು ಜನರ ಜೇಬು ಕತ್ತರಿಸಿದ್ದನ್ನು ಕೇಳಿ ಕೋಪ ಬಂತು. ಕರ್ನಾಟಕಕ್ಕೆ ದಂಡುಪಾಳ್ಯದ ಕಳ್ಳ ಕಾಕರಿಗಳು, ದಕಾತಿಗಳು ಬರಬೇಕಾಗಿಲ್ಲ, ನಮ್ಮ ಪೋಲೀಸ್ ಇಲಾಖೆಯಲ್ಲಿ ದೊಡ್ಡ ದೊಡ್ಡ ತಿಮಿಂಗಿಲ ಗಳಿವೆ ಎಂಬುದಕ್ಕೆ ಪತ್ರಿಕೆ ವರದಿಯೇ ಸಾಕ್ಷಿ. ಖಾಕಿ ತೊಟ್ಟು ಟೋಪಿ ಹಾಕಿ ಲಾರಿ ಹಿಡಿದು ವಸೂಲಿ ಮೀರದಂತೆ ಪೋಜು ಕೊಟ್ಟು ಅಕ್ರಮವಾಗಿ ಕೋಟ್ಯಂತರ ರೂಪಾಯಿ ಕೊಳ್ಳೆ ಹೊಡೆದು ಇಡೀ ನಾಡಿನ ಮಾನ ಮರ್ಯಾದೆಯನ್ನು ಮೂರು ಕಾಸಿಗೆ ಹರಾಜಿಗಿಟ್ಟ ಭ್ರಷ್ಟ ಪೋಲೀಸ್ ಅಧಿಕಾರಿಗಳಿಗೆ ಮತ್ತು ಇಂಥ ಭ್ರಷ್ಟರನ್ನು ರಕ್ಷಣೆ ಮಾಡುತ್ತಿರುವ ನಾಲಾಯಕ್ ರಾಜಕಾರಣಿಗಳಿಗೆ ನನ್ನ ದಿಕ್ಕಾರವಿರಲಿ....



-ರಮಜಾನ್ ಕೆ. ಮೂರ್ತಿ, ಬಾದಾಮಿ

ಲಂಕೇಶ್ ದಿನಾಂಕ ಮಾರ್ಚ್ 22, 2006 ರ ಪತ್ರಿಕೆಯಲ್ಲಿ ವಾಯುವ್ಯ ಸಾರಿಗೆ ನಿಗಮದ ಬಗ್ಗೆ ಒಂದು ಲೇಖನ ಪ್ರಕಟವಾಗಿದೆ.

ಗುತ್ತಿಗೆ ಬಸ್‌ಗಳ ಬಗ್ಗೆ ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಯೂನಿಯನ್ನಿನ ಹಿಂದಿನ ಅಧ್ಯಕ್ಷ ಬಣಕಾರ "ದಸ್ ಬಸ್‌ಗಳ ಬಾಸ್ ಆಗಿ ಹೋಗಿದ್ದಾನೆ" ಎಂದು ಬರೆಯಲಾಗಿದೆ. ಈತ 19 ಬಸ್‌ಗಳನ್ನು ಬಾಡಿಗೆಗೆ ಕೊಟ್ಟಿದ್ದಾನೆ. ಕಳೆದ 12 ವರ್ಷಗಳಿಂದ ಈತ ನಮ್ಮ ಸಂಘಟನೆಯಲ್ಲಿಲ್ಲ, ಹಾಗೂ ಇವನೊಬ್ಬ ಆಡಳಿತ ವರ್ಗದ ಏಜೆಂಟ್ ಮತ್ತು ಕಾರ್ಮಿಕ ವಿರೋಧಿ ವ್ಯಕ್ತಿ.

ಶ್ರೀಯುತ ಎಂ.ಡಿ. ದೊಡ್ಡಗೌಡರ ಬಗ್ಗೆ ಬರೆಯುತ್ತಾ "ಈತನಿಗೆ ಇಸ್ಪೀಟು ಆಡಲು ಟೈಮ್ಮೇ ಸಾಲುತ್ತಿಲ್ಲ" ಎಂದು ತಿಳಿಸಲಾಗಿದೆ. ಇವರೊಬ್ಬ ಗೌರವಾನ್ವಿತ ಟ್ರೇಡ್ ಯೂನಿಯನ್ ಕಾರ್ಯಕರ್ತ. ಈತ ನಮ್ಮ ಸಂಘಟನೆಯ ನಾಯಕನಾದ ಕಾರಣ ಕೆಲಸದಿಂದ ವಜಾ ಮಾಡಲಾಗಿದೆ. ಆಡಳಿತ ವರ್ಗ ನಮ್ಮೊಂದಿಗೆ ಮಾತನಾಡುವುದನ್ನೇ ನಿಲ್ಲಿಸಿರುವಾಗ ಟ್ರೇಡ್ ಯೂನಿಯನ್ ನಾಯಕರು ಏನು ಮಾಡಲು ಸಾಧ್ಯ? ಕಾರ್ಮಿಕರು ಕೂಡ ಆಡಳಿತ ವರ್ಗದ ವಿರುದ್ಧ ಎದ್ದು ನಿಲ್ಲುವ ಶಕ್ತಿ ಇಂದು ಹೊಂದಿಲ್ಲ. ಸಾರಿಗೆ ನಿಗಮಗಳ ಖಾಸಗೀಕರಣದ ವಿರುದ್ಧ ಉತ್ತರ ಕರ್ನಾಟಕದ ಭಾಗದಲ್ಲಿ ಇವರು ಅನೇಕ ಹೋರಾಟಗಳನ್ನು ನಡೆಸಿದ್ದಾರೆ. ಈಗಲೂ ಸಕ್ರಿಯವಾಗಿ ಚಳವಳಿಗಳಲ್ಲಿ ತೊಡಗಿಸಿ ಕೊಂಡಿದ್ದಾರೆ.

ಇನ್ನು ಕವಳೇಕಾಯಿ "ಮಂಗಳೂರಿನಲ್ಲಿ ಕೆಲಸದ ಹೆಸರಿನಲ್ಲಿ ಸಂಬಳ ಪಡೆಯುತ್ತಾ ಹುಬ್ಬಳ್ಳಿಯಲ್ಲಿ ತನ್ನ ಸಖಿಯರೊಂದಿಗೆ ಸಲ್ಲಾಪದಲ್ಲಿ ಮುಳುಗುತ್ತಲೇ ತನ್ನದೆ ಟೆಂಪೊ ದಂಧೆ ನಡೆಸುತ್ತಾನೆ" ಎಂದು ಬರೆದಿದ್ದೀರ.

ಕಾ. ಕವಳೇಕಾಯಿ ನಮ್ಮ ಹುಬ್ಬಳ್ಳಿ ವಿಭಾಗದ ಪ್ರಧಾನ ಕಾರ್ಯದರ್ಶಿ. ಕಾನೂನುಬಾಹಿರವಾಗಿ ಇವರನ್ನು ಮಂಗಳೂರಿಗೆ ವರ್ಗಾವಣೆ ಮಾಡಿ ಅಲ್ಲಿ ಕೆಲಸಕ್ಕೆ ಹಾಜರಾಗಲೂ ಆಡಳಿತ ವರ್ಗ ಅವಕಾಶ ಕೊಟ್ಟಿರಲಿಲ್ಲ. ಹಲವಾರು ವರ್ಷಗಳ ಸಮರದ ನಂತರ ಅವರಿಗೆ ಅಲ್ಲಿ ಕೆಲಸಕ್ಕೆ ಹಾಜರಾಗಲು ಅನುಮತಿ ಸಿಕ್ಕಿತು. ಕುಂದಾಪುರ ಘಟಕದಲ್ಲಿ ಅವರು ಮೆಕಾನಿಕ್ ಆಗಿ ಕೆಲಸ ಮಾಡಿ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಹುಬ್ಬಳ್ಳಿಯಲ್ಲಿ ಅವರ ಪತ್ನಿ, ಮಕ್ಕಳು, ಸಹೋದರರು ಅವಿಭಕ್ತ ಕುಟುಂಬದಲ್ಲಿದ್ದಾರೆ. ಇವರಿಗೆ 'ಸಖಿಯರನ್ನು' ಇಟ್ಟುಕೊಳ್ಳುವಂತಹ ಒಳ್ಳೆಯ ಅಭಿರುಚಿ ಇಲ್ಲ. ನಮ್ಮ ಯೂನಿಯನ್‌ನ ನಾಯಕರ ಬಗೆಗಿನ ಈ ಸ್ಪಷ್ಟನೆಯನ್ನು ಪ್ರಕಟಿಸುತ್ತೀರಿ ಎಂದು ನಂಬಿರುವೆ.

-ಎಚ್.ವಿ. ಅನಂತಸುಬ್ಬ ರಾವ್, ಪ್ರಧಾನ ಕಾರ್ಯದರ್ಶಿ ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್

ಹೊಗಳಿಕೆ

ವಿಶೇಷಾಂಕದಲ್ಲಿ ಉತ್ತಮ ಲೇಖನಗಳು ಬಂದಿವೆ

'ನನ್ನ ಅಕ್ಕ-ತಂಗಿಯರೆಲ್ಲಿ?' ಎಂಬ ರಷ್ಮಿಯವರ ಲೇಖನವಂತೂ ಈಗಾಗಲೇ ದೇಶದಲ್ಲಿ ಸ್ತ್ರೀಯರ ಜನಸಂಖ್ಯೆ ಕಡಿಮೆಯಾಗುತ್ತಿದೆ; ವರದಕ್ಷಿಣೆಗಾಗಿ ಹೆಣ್ಣಿನ ಹತ್ಯೆ; ಬಡತನ ತಾಳಲಾರದೆ ಹೆಣ್ಣುಮಕ್ಕಳ ಆತ್ಮಹತ್ಯೆ, ಅಡುಗೆ ಸ್ಟವ್ ಸಿಡಿದು ಗೃಹಿಣಿಯ ಸಾವು.... ಇಂತಹ ಪರಿಸ್ಥಿತಿಯ ನಿರ್ಮಾಣವಾಗಿದೆ.

ಹೆಣ್ಣು ಭ್ರೂಣಹತ್ಯೆಯಂತೂ ಸಾಮಾನ್ಯ ಸಂಗತಿಯಾಗಿದೆ. ಉತ್ತರ ಭಾರತದ ಕೆಲವು ಪ್ರದೇಶಗಳಲ್ಲಿ ಒಂದೇ ಹೆಣ್ಣನ್ನು ಸಹೋದರರೆಲ್ಲಾ ವಿವಾಹವಾಗುವ ಪರಿಸ್ಥಿತಿ ಇದೆಯಂತೆ! ಮುಂದಿನ ಪೀಳಿಗೆಯು ಇದನ್ನು ಯಾವ ರೀತಿ ಎದುರಿಸ ಬಹುದು?


ಶಿವಸುಂದರ್ ಮತ್ತು ರಾಜಶೇಖರ್‌ರವರ ಲೇಖನಗಳು ಅತ್ಯುತ್ತಮವಾಗಿವೆ.

ಖುಷ್‌ವಂತ್ ಸಿಂಗರ 'ಕಪ್ಪು ಮಲ್ಲಿಗೆ' ಕಥೆಯು The Company of Women ಪುಸ್ತಕವನ್ನು ನೆನಪಿಸಿತು.

ಕೆ.ಟಿ. ಗಟ್ಟಿಯವರ ಲೇಖನವು ಪತ್ರಿಕೆಗಳ ಕರ್ತವ್ಯವೇನು ಎಂಬುದನ್ನು ಎಚ್ಚರಿಸುವಂತಿದೆ. (ಲಂಕೇಶ್ ಅದನ್ನು ಕಳೆದ 1 ವರ್ಷದಿಂದಲೂ ಮಾಡುತ್ತಾ ಬಂದಿದೆ).

-ಎಂ. ಸದಾಶಿವ, ತುಮಕೂರು

ನಾಲ್ಕು ಹೊಸ ಚಿತ್ರಗಳಿಗೆ ಸಹಿ ಹಾಕಿದರೆ, 'ಇನ್ನೂರು ಚಿತ್ರಗಳ
ದಾರ' ಎನ್ನುವ ಗೌರವಕ್ಕೆ ವಿಷ್ಣುವರ್ಧನ್ ಪಾತ್ರರಾಗುತ್ತಾರೆ.




ಅದೇನು ಅಂತಹ ಕಷ್ಟದ ಕೆಲಸ ಅಲ್ಲ, ಯಾಕೆಂದರೆ
ಷ್ಣು ಕಾಲ್‌ಶೀಟ್‌ಗಾಗಿ ಕನಿಷ್ಠ ಹತ್ತು ಜನ ನಿರ್ಮಾಪಕರು
ಗಲೂ ಅವರ ಮನೆ ಕದ ತಟ್ಟುತ್ತಲೇ ಇದ್ದಾರೆ.

ಹೀಗಾಗಿ ಈ ಇನ್ನೂರರ ಸಮಸ್ಯೆ ವಿಷ್ಣುಗೂ
ಅವರ ನಿರ್ಮಾಪಕರಿಗೂ ಇಲ್ಲ, ಇದರ ಬಗ್ಗೆ
ವಾಗಿ ಚರ್ಚೆ, ನಿರೀಕ್ಷೆ ಇಟ್ಟುಕೊಂಡವರು, ಟೆನ್ಷನ್
ಾಡಿಕೊಳ್ಳುವವರೆಂದರೆ ವಿಷ್ಣು ಅಭಿಮಾನಿಗಳು.

ವಿಷ್ಣು 200 ನಾಟ್‌ಔಟ್‌ನ್ನು ಅತ್ಯಂತ ವಿಜೃಂಭಣೆಯಿಂದ
ಚರಿಸಬೇಕೆಂದು ವಿಷ್ಣು ಅಭಿಮಾನಿಗಳು ಈಗಲೇ ಪ್ಲಾನ್ ಮಾಡು
ದ್ದಾರೆ. ರಾಜ್‌ಕುಮಾರ್ ಮತ್ತು ಅಂಬರೀಷ್ ಬಿಟ್ಟರೆ ಬೇರೆ ಯಾವ
ಯಕ ನಟ ಇನ್ನೂ ದ್ವಿಶತಕ ಬಾರಿಸಿಲ್ಲ.

ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಮಾತಾಡ್ ಮಾತಾಡ್
ಲ್ಲಿಗೆ' ಚಿತ್ರ ವಿಷ್ಣು ಅಭಿನಯದ 196 ನೇ ಚಿತ್ರವಾಗಲಿದೆ. ಹೀಗಾಗಿ
ಂದಿನ ನಾಲ್ಕು ಚಿತ್ರಗಳು ವಿಷ್ಣು ಅಭಿಮಾನಿಗಳ ಪಾಲಿಗೆ
ಂಬಾ ಮುಖ್ಯವಾಗುತ್ತವೆ.

ಹಾಗಾದರೆ ಇನ್ನೂರನೆ ಚಿತ್ರ ಯಾವುದು?



ವಿಷ್ಣು ಈಗಾಗಲೇ ಸುಮಾರು ಐದಾರು ಚಿತ್ರಗಳ
ತೆಯನ್ನು ಕೇಳಿ ಓಕೆ ಮಾಡಿದ್ದಾರೆ. ಆದರೆ ಇದ್ಯಾವುದರ
ಗ್ಗೆಯೂ ಅವರು ಅಂತಿಮ ತೀರ್ಮಾನ ಕೈಗೊಂಡಿಲ್ಲ.

ಕಮಲ್-ವಿಷ್ಣು ಜೋಡಿ

ರಮೇಶ್ ನಿರ್ದೇಶನದ ಚಿತ್ರವೊಂದಕ್ಕೆ ವಿಷ್ಣು ಅಲ್‌ಮೋಸ್ಟ್
ಎಸ್' ಅಂದಿದ್ದಾರೆ. ಈ ಚಿತ್ರದ ವಿಶೇಷತೆಯೆಂದರೆ ವಿಷ್ಣು ಜೊತೆಗೆ
ಮಲ್ ಹಾಸನ್ ಕೂಡಾ ನಟಿಸುತ್ತಿರುವುದು. ಈ ಚಿತ್ರ 200 ನೇ
ತ್ರವಾದರೆ 'ವಿಷ್ಣು 200' ಸಂಭ್ರಮ ಕಮಲ್ ಮುಖಾಂತರ ಇಡೀ

ಇಲ್ಲೊಂದು ವಿಶೇಷವೆಂದರೆ, ಈ ಮೂರು ಚಿತ್ರಗಳಲ್ಲೂ ವಿಷ್ಣುವಿನ ಎದುರು ಪ್ರಥಮ ಬಾರಿಗೆ ಮತ್ತೊಬ್ಬ ಜನಪ್ರಿಯ ನಾಯಕ ನಟ ನಟಿಸುವ ಪ್ರಸ್ತಾಪ ಇರುವುದು. ಉಪೇಂದ್ರ, ಕಮಲ್ ಹಾಸನ್ ಅಥವಾ ಶಿವಣ್ಣ ಇವರ್ಯಾರೂ ಒಂದೇ ಚಿತ್ರದಲ್ಲಿ ಒಟ್ಟಿಗೆ ಅಭಿನಯಿಸಿದ್ದೇ ಇಲ್ಲ. ಕಮಲ್ ಚಿತ್ರವೊಂದರಲ್ಲಿ ವಿಷ್ಣು ನಟಿಸಿದ್ದರೂ ಅದು ಇಲ್ಲಿ ನಗಣ್ಯ. ಹೀಗಾಗಿ ವಿಷ್ಣುವಿನ 200 ನೇ ಚಿತ್ರ ಅತ್ಯಂತ ಅದ್ದೂರಿಯ 'ಮಲ್ಟಿ ಸ್ಟಾರ್' ಚಿತ್ರವಾಗುವುದರಲ್ಲಿ ಸಂಶಯವೇ ಇಲ್ಲ.

ಈ ಮಧ್ಯೆ ಜೆಮಿನಿ ಫಿಲಂಸ್‌ನವರು ವಿಷ್ಣುವರ್ಧನ್ ಕಾಲ್‌ಶೀಟ್‌ಗಾಗಿ ಭಗೀರಥ ಪ್ರಯತ್ನ ನಡೆಸುತ್ತಲೇ ಇದ್ದಾರೆ. ಇದು ತೆಲುಗಿನ ರೀಮೇಕ್ ಆಗಲಿದ್ದು, ಇದರ ಬಗ್ಗೆ ಅಭಿಮಾನಿಗಳಿಗೆ ಅಂತಹ ಉತ್ಸಾಹವೇನೂ ಇಲ್ಲ.


ಸುದೀಪ್ ಬೆನ್ನು ತಟ್ಟಿದ ವಿಷ್ಣು

'ಮೈ ಆಟೋಗ್ರಾಫ್' ಚಿತ್ರದ ಯಶಸ್ಸಿನಿಂದ ಆತ್ಮವಿಶ್ವಾಸ ಪಡೆದಿರುವ ಸುದೀಪ್ ಒಂದು ಅದ್ಭುತ ಕತೆಯನ್ನು ವಿಷ್ಣುವಿಗಾಗಿ ಬರೆದದ್ದು ಮಾತ್ರವಲ್ಲ; ಅದನ್ನು ಓದಿ ಕೂಡಾ ಹೇಳಿದ್ದಾರೆ. ಸುದೀಪ್ ಕಥೆಯನ್ನು ಅಪಾರವಾಗಿ ಮೆಚ್ಚಿ ಆತನ ಪ್ರತಿಭೆಯನ್ನು ಕೊಂಡಾಡಿರುವ ವಿಷ್ಣು ಈಗಾಗಲೇ ಸುದೀಪ್‌ಗೆ ಒಂದು ಕಾಲ್‌ಶೀಟ್ ನೀಡಿದ್ದಾರೆ.

ವಿಷ್ಣುವರ್ಧನ್ ಅಂತಹ ಹಿರಿಯ ನಟರನ್ನು ಹೊಸ ತಲೆಮಾರಿನ ಯುವಕ ಸುದೀಪ್ 'ನಿರ್ದೇಶಿಸುವ ಸುದ್ದಿ ಅಭಿಮಾನಿಗಳಲ್ಲಿ ಥ್ರಿಲ್ ಹುಟ್ಟಿಸಿದೆ. ಆದರೆ ಈ ಚಿತ್ರ ಒಂದೆರಡು ತಿಂಗಳಲ್ಲೇ ಸೆಟ್ಟೇರಲಿದ್ದು 200 ರ ಚಿತ್ರವಾಗುವ ಸಾಧ್ಯತೆ ತುಂಬಾ ಕಡಿಮೆ.

ವಿಷ್ಣು ಎಂಬ ಗೆಲ್ಲುವ ಕುದುರೆ

ಕಳೆದ ಎರಡ್ಮೂರು ವರ್ಷಗಳಿಂದ ವಿಷ್ಣು ಮುಟ್ಟಿದ್ದೆಲ್ಲಾ ಚಿನ್ನವಾಗಿದೆ. ವಿಷ್ಣು ಚಿತ್ರಗಳ ನಿರ್ಮಾಪಕರಲ್ಲಿ ಸೂರಪ್ಪ ಬಾಬು




ಕಮಲ್, ಉಪ್ಪಿ, ಶಿವಣ್ಣ ಯಾರೊಂದಿಗೆ ವಿಷ್ಣು ೨೦೦ನೇ ಚಿತ್ರ....?

ನಾಲ್ಕು ಹೊಸ ಚಿತ್ರಗಳಿಗೆ ಸಹಿ ಹಾಕಿದರೆ, 'ಇನ್ನೂರು ಚಿತ್ರಗಳ ಸರದಾರ' ಎನ್ನುವ ಗೌರವಕ್ಕೆ ವಿಷ್ಣುವರ್ಧನ್ ಪಾತ್ರರಾಗುತ್ತಾರೆ. ರಾಜ್‌ಕುಮಾರ್ ಮತ್ತು ಅಂಬರೀಷ್ ಬಿಟ್ಟರೆ ಬೇರೆ ಯಾವ ನಾಯಕ ನಟನೂ ಇನ್ನೂ ದ್ವಿಶತಕ ಬಾರಿಸಿಲ್ಲ ಎಂಬುದೇ ವಿಶೇಷ.....

ಕ್ಷಿಣ ಭಾರತೀಯ ಚಿತ್ರರಂಗಕ್ಕೆ ತಿಳಿಯುತ್ತದೆ ಎಂಬುದು ಅಭಿಮಾನಿಗಳ
ಸೆ.


ವಿಷ್ಣು ಮತ್ತು ಉಪ್ಪಿ 200 ರ ಜೋಡಿ



ವಿಷ್ಣು ನಟಿಸಲು ಒಪ್ಪಿರುವ ಇನ್ನೊಂದು ಮಲ್ಟಿ ಸ್ಟಾರ್
ತ್ರವೆಂದರೆ, ರಾಕ್‌ಲೈನ್ ವೆಂಕಟೇಶ್ ನಿರ್ಮಾಣದ 'ಸಂಭ
ಮಿ ಯುಗೇ ಯುಗೇ.' ಈ ಚಿತ್ರದಲ್ಲಿ ವಿಷ್ಣು-
ಪೇಂದ್ರ ಜೊತೆಯಾಗಿ ನಟಿಸಲಿದ್ದಾರೆ. ನಾಗಾಭರಣ
ಚಿತ್ರದ ನಿರ್ದೇಶಕರು. ಕಳೆದ ಒಂದು
ರ್ಷದಿಂದ ನಾಗಾಭರಣ ಈ ಚಿತ್ರದ ಸ್ಕ್ರಿಪ್ಟ್
ಾಡುತ್ತಲೇ ಇದ್ದಾರೆ.

ಈ ಚಿತ್ರ ಕನಿಷ್ಠವೆಂದರೂ ಏಳೆಂಟು ಕೋಟಿ ರೂಪಾಯಿ
ಚ್ಚದ ಚಿತ್ರವಾಗಿದ್ದು, ಒಬ್ಬ ನಟನ 200 ನೇ ಚಿತ್ರ ಇಂತಹ
ದ್ದೂರಿ, ಸ್ವಮೇಕ್ ಚಿತ್ರವೇ ಆಗಬೇಕೆಂಬುದು ಅನೇಕರ ಒತ್ತಾಸೆ.
ೀಗಾಗಿ ಇದು ಒಂದು ರೀತಿಯಲ್ಲಿ ಐತಿಹಾಸಿಕವೂ ಆಗಿರುವುದರಿಂದ
ಷ್ಣು 200' ಅರ್ಥಪೂರ್ಣವಾಗುತ್ತದೆ ಎನ್ನುವುದು ವಿಷ್ಣುವಿನ ಅನೇಕ
ಸ್ತರ ಆಶಯ.

ವಿಷ್ಣು-ಶಿವಣ್ಣ ಜೋಡಿಯ ಮೋಡಿ?



ಈ ಮಧ್ಯೆ ವಿಷ್ಣು ಮತ್ತು ಶಿವರಾಜ್‌ಕುಮಾರ್ ಅವರನ್ನು
ಂದೇ ಚಿತ್ರದಲ್ಲಿ ಹಾಕುವ ಪ್ರಯತ್ನವೂ ನಡೆಯುತ್ತಿದೆ.
ಂತಹ ಚಿತ್ರಕ್ಕೆ ಕಥೆಯನ್ನು ಒದಗಿಸಿಕೊಡುವ
ವಾಬ್ದಾರಿಯನ್ನು ನಿರ್ದೇಶಕ ಎಸ್. ನಾರಾಯಣ್‌ಗೆ
ಡಲಾಗಿದೆ.

ಈ ಹಿಂದೆ ಶಿವರಾಜ್‌ಕುಮಾರ್ ನಟಿಸಿದ 'ದೊರೆ'
ತ್ರದಲ್ಲಿ ಭಾರತಿ ವಿಷ್ಣುವರ್ಧನ್ ನಟಿಸಿದ್ದನ್ನು ನೆನಪಿಸಿಕೊಂಡರೆ,
ಷ್ಣು-ಶಿವರಾಜ್‌ಕುಮಾರ್ ಸಮಾಗಮ ಅಂತಹ ಕಷ್ಟವೇನಲ್ಲ. ಒಂದು
ಳೆ ಇವರಿಬ್ಬರ ಕಾಂಬಿನೇಶನ್ ಚಿತ್ರ ಸೆಟ್ಟೇರಿದರೆ, 'ಗಂಧದ ಗುಡಿ'ಯ
ನೆನಪು ಮರಳಿ ಹೋದಂತಾಗುತ್ತದೆ. ಆ ಕಪ್ಪು ಅಧ್ಯಾಯ
ಬಾ ಹಲವರ ಆಕಾಂಕ್ಷೆಯ ವಿಷಯ ಮರೆಮಾಚಲು ಈ
ವಿಷ್ಣು 200 ರ ಚಿತ್ರವಾಗಿಸಬೇಕೆಂದು ಕೆಲವರು ಅಭಿಪ್ರಾಯ
ಪಡಿಸಿದ್ದಾರೆ.

ಹೊರತುಪಡಿಸಿದರೆ ಬೇರೆ ಯಾರೂ ಫುಟ್‌ಪಾತ್‌ಗೆ ಬರಲಿಲ್ಲ. ಪ್ರತಿಯೊಬ್ಬ ನಿರ್ಮಾಪಕನೂ ಚೆನ್ನಾಗಿ ಮನೆ, ಮಠ, ಚಿನ್ನ ಮಾಡಿಕೊಂಡಿದ್ದಾರೆ.

ಹೀಗಾಗಿ 'ಯಶಸ್ಸಿನ ಕುದುರೆ'ಯಾಗಿರುವ ವಿಷ್ಣು ಪಾಲಿಗೆ 200 ರ ಗಡಿ ತಲುಪುವ ಈ ಸಂದರ್ಭದಲ್ಲಿ ಯಾವುದೇ ಉದ್ವೇಗ, ಟೆನ್ಷನ್ ಇಲ್ಲವೇ ಇಲ್ಲ. ಕ್ರಿಕೆಟ್‌ನಲ್ಲಿ ಮಹೇಂದ್ರ ಸಿಂಗ್ ಧೋನಿ ತೊಂಭತ್ತರ ಗಡಿ ದಾಟಿದ ನಂತರವೂ ಹೇಗೆ ಯಾವುದೇ ಟೆನ್ಷನ್ ಇಲ್ಲದೆ, ನಿರಾಯಾಸವಾಗಿ ಬ್ಯಾಟ್ ಬೀಸಿ ಶತಕ ತಲುಪುತ್ತಾನೋ ಅಂತಹ ಸ್ಥಾನದಲ್ಲಿ ಈಗ ವಿಷ್ಣುವರ್ಧನ್ ಇದ್ದಾರೆ.


ಸಿಂಹ ನುಡಿಯುವ ಫಿಲಾಸಫಿ

ಮೂರೂವರೆ ದಶಕಗಳಿಂದ ನಿರಂತರವಾಗಿ ನಟಿಸುತ್ತಾ, ಜನರನ್ನು ರಂಜಿಸುತ್ತಾ ಬಂದಿರುವ ವಿಷ್ಣು ಇಂದು ಜನಮನದಲ್ಲಿ ಬರೀ ನಟನಾಗಿ ಉಳಿದಿಲ್ಲ, ಅವರೊಂದು ಶಕ್ತಿ ಮಾತ್ರವಲ್ಲ, ಅವರ ಫಿಲಾಸಫಿ ಮಾತುಗಳಿಂದಾಗಿ ಅವರ ಅಭಿಮಾನಿಗಳು ಧನ್ಯತಾ ಮನೋಭಾವದಿಂದ ಅವರನ್ನು ನೋಡುತ್ತಿದ್ದಾರೆ. ಹೀಗಾಗಿ 'ವಿಷ್ಣು ನಾಟ್‌ಔಟ್ 200' ಸಂದರ್ಭವನ್ನು ಅಭಿಮಾನಿಗಳು ಅತ್ಯಂತ ಅದ್ದೂರಿಯಾಗಿಯೇ ಜರುಗಿಸಲು ಕಾತುರರಾಗಿದ್ದಾರೆ. ಪರರಾಜ್ಯಗಳಲ್ಲಿ ನಟನೊಬ್ಬ 200 ಚಿತ್ರಗಳ ಘಟ್ಟ ತಲುಪಿದರೆ, ಎಲ್ಲರೂ ಒಟ್ಟಾಗಿ ಹಬ್ಬದ ವಾತಾವರಣ ಸೃಷ್ಟಿಸುತ್ತಾರೆ. ಆದರೆ ವಿಷ್ಣುಗೆ ಡಾಕ್ಟರೇಟ್ ಗೌರವ ಸಿಕ್ಕಿದಾಗ ಉದ್ಯಮ ಮತ್ತು ಚೇಂಬರ್‌ನವರು ನಿರುತ್ಸಾಹ ತೋರಿದ್ದರಿಂದ 'ವಿಷ್ಣು ದ್ವಿಶತಕ' ಸಮಾರಂಭವನ್ನು ತಾವೇ ಅದ್ದೂರಿಯಾಗಿ ನಡೆಸುತ್ತೇವೆ ಎನ್ನುತ್ತಾರೆ ಅಭಿಮಾನಿಗಳು.

ಅಂತೂ, ಇಂತೂ ಈ ವರ್ಷದ ಕೊನೆಯಲ್ಲಿ ಸಾಹಸ ಸಿಂಹ ವಿಷ್ಣುವರ್ಧನ್ 'ಮ್ಯಾಜಿಕ್ ಫಿಗರ್' ಇನ್ನೂರು ತಲುಪಲಿದ್ದಾರೆ. ಅದರ ಕೌಂಟ್‌ಡೌನ್ ಈಗಲೇ ಶುರುವಾಗಿದೆ. ಆ ಇನ್ನೂರರ ಚಿತ್ರ ಯಾವುದು ಎಂಬುದಷ್ಟೇ ಸದ್ಯಕ್ಕೆ ಉಳಿದಿರುವ ಕುತೂಹಲ. ಅದೇನೆ ಇರಲಿ, ವಿಷ್ಣು 200 ತಲುಪಿದ ನಂತರ, ಇನ್ನೂ ಭರ್ಜರಿಯಾಗಿ ಬ್ಯಾಟಿಂಗ್ ಮುಂದುವರಿಸುವಂತಾಗಲಿ ಎಂಬುದೇ ನಮ್ಮ ಆಶಯ.


-ಸದಾಶಿವ ಶೆಣೈ

ಶಾಟ್ ಕಟ್




ಏ ಸಬ್ ಕ್ಯಾ Zee?

ಸುಭಾಷ್ ಚಂದ್ರನ 'Zee TV ಕನ್ನಡ' ಮುಂದಿನ ತಿಂಗಳಿಂದ ಶುರುವಾಗುತ್ತಿದೆ. "ರಾಹುಲ್ ದ್ರಾವಿಡ್ ಬಾಯಿಂದ ಬೇಂದ್ರೆ ಪದ್ಯ ಕೇಳಿಸುವ" ಭರವಸೆಯ ಜಾಹೀರಾತು ಬರುತ್ತಿವೆ. ಇದನ್ನು ನೋಡಿದ ವಾಮನ ಬೇಂದ್ರೆ Zee TV ಯವರಿಗೆ ಒಂದು ಶರತ್ತು ಹಾಕಿದ್ದಾರಂತೆ. "ದ್ರಾವಿಡ್ ನಮ್ಮಪ್ಪನ ಪದ್ಯ ಹೇಳುವುದಾದರೆ, ಕ್ರಿಕೆಟ್ ಕುರಿತು ಒಂದು ಸೀರಿಯಲ್ ಮಾಡಲು ನನಗೂ ಅನುಮತಿ ನೀಡಿ" ಎಂದಿದ್ದಾರಂತೆ.



ಏನಾಗುತ್ತಿದೆ ಇಲ್ಲಿ? ಏ ಸಬ್ ಕ್ಯಾ Zee?



ಬ್ರೈನ್ ಡ್ರೈನ್!

'ಹೆಳವಾದಿ' ಚಿತ್ರದ ಟೈಟಲ್ ಕಾರ್ಡಿನಲ್ಲಿ ನಾಗ್ತಿಹಳ್ಳಿ ಚಂದ್ರಶೇಖರ್‌ಗೆ ಥ್ಯಾಂಕ್ಸ್ ಇರುವುದನ್ನು ನೋಡಿದಾಗ ಏನಿದು ಎಂದು ಆಶ್ಚರ್ಯವಾಗಬಹುದು. ಆದರೆ ಚಿತ್ರ ನೋಡುತ್ತಿದ್ದಂತೆ ಕಾರಣ ಗೊತ್ತಾಗುತ್ತದೆ.

ಚಿತ್ರದಲ್ಲಿ 'ಬ್ರೈನ್ ಟ್ಯೂಮರ್' ಕಾನ್ಸೆಪ್ಟ್ ಬಳಸಿರುವುದರಿಂದ ನಾಗ್ತಿಗೆ ಥ್ಯಾಂಕ್ಸ್ ಹೇಳಲಾಗಿದೆ. ಇನ್ನು ಮುಂದೆ 'ಬ್ರೈನ್ ಟ್ಯೂಮರ್' ಪದವನ್ನು ಸಿನಿಮಾದಲ್ಲಿ ಬಳಸಿಕೊಳ್ಳುವವರೆಲ್ಲ ನಾಗ್ತಿ ಅನುಮತಿ ಪಡೆದು ಅವರಿಗೆ ಥ್ಯಾಂಕ್ಸ್ ಹೇಳಬೇಕಂತೆ. ಏಕೆಂದರೆ 'ಬ್ರೈನ್ ಟ್ಯೂಮರ್' ಎಂಬುದೀಗ ನಾಗ್ತಿಯವರ **copyright!**

ಕನ್ನಡ ಚಿತ್ರರಂಗದ 'ಕ್ಯಾತ'ನಾಮರಿಗೆಲ್ಲ ತುರ್ತಾಗಿ 'ಬ್ರೈನ್ ಮ್ಯಾಪಿಂಗ್' ಮಾಡಿಸಬೇಕಾಗಿದೆ!

ಶರೋನ್ ಸ್ಟೋನ್: ಕಾಲ ಮೇಲೆ ಕಾಲು....



ಇಲ್ಲಿರುವ ಫೋಟೋ ನೋಡಿದಿರಲ್ಲ?

1992 ರಲ್ಲಿ ಯುವಕರಿಗೆಲ್ಲ ಬಿಸಿ ಏರಿಸಿದ್ದ ಥ್ರಿಲ್ಲರ್ ಚಿತ್ರ 'ಬೇಸಿಕ್ ಇನ್‌ಸ್ಟಿಂಕ್ಟ್' ನೆನಪಿಯಿದೆಯಲ್ಲ..... ಹಾಂ, ಈಗ ಇನ್ನೊಂದು 'ಬೇಸಿಕ್ ಇನ್‌ಸ್ಟಿಂಕ್ಟ್ 2' ಬಂದಿದೆ. ಅವತ್ತು ಯುವಕರಲ್ಲಿ ಸಾವಿರ ವ್ಯಾಟ್ ವಿದ್ಯುತ್ ಸಂಚಾರ ಮೂಡಿಸಿದ್ದ ಸೆಕ್ಸಿ ಸುಂದರಿ ಶರೋನ್ ಸ್ಟೋನ್ 'ಬೇಸಿಕ್ ಇನ್‌ಸ್ಟಿಂಕ್ಟ್ 2'ನಲ್ಲೂ ಮೈಮಾಟ ಮೆರೆದಿದ್ದಾಳೆ.

92 ರ 'ಬೇಸಿಕ್ ಇನ್‌ಸ್ಟಿಂಕ್ಟ್'ನಲ್ಲಿ ಪೋಲೀಸ್ ಅಧಿಕಾರಿ (ಮೈಕೆಲ್ ಡಗ್ಲಾಸ್) ಟ್ರಾಮೆಲ್ (ಶರೋನ್ ಸ್ಟೋನ್)ಳ ವಿಚಾರಣೆ ನಡೆಸುವ ಸಂದರ್ಭ... ಮಿನಿ ಮಿನಿ ಫ್ರಾಕ್ ತೊಟ್ಟು ಸುಂದರಾಂಗಿ ಸ್ಟೋನ್ ಕುರ್ಚಿಯ ಮೇಲೆ ಕಾಲ ಮೇಲೆ ಕಾಲು ಹಾಕಿ ಕೂರುವ ಆ ಮಿಲಿಯನ್ ಡಾಲರ್ ದೃಶ್ಯ ಚಿತ್ರದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಈಗ 'ಬೇಸಿಕ್ ಇನ್‌ಸ್ಟಿಂಕ್ಟ್ 2' ಮೂಲಕ ಮತ್ತೆ ಸ್ಟೋನ್ ಬಂದಿದ್ದಾಳೆ. ಕಲ್ಲು ಕರಗಿಸುವ ಸ್ಟೋನ್‌ಳನ್ನು ಇನ್ನೊಮ್ಮೆ ನೋಡುವಿರಾ?

R.B.P. LANKESH, Kannada Weekly Price Rs. 10/- 5-4-2006 RNI No. KARKAN2005/14648 Regd.No.KA/BG(S)/2036/2005-0



ಶ್ರೀದೇವಿ: ಕೌನ್ ಸಚ್ಚಾ ಕೌನ್ ಝೂಟಾ?

ರವಿವಾರ ಸಹಾರಾ ಚಾನೆಲ್‌ನಲ್ಲಿ 'ನೋ ಎಂಟ್ರಿ' ಚಿತ್ರ ಪ್ರಸಾರವಾಗಬೇಕಿತ್ತು, ಆದರೆ ಮುಂಬೈ ಕೋರ್ಟ್ `stop it' ಎಂದು 'ನೋ ಎಂಟ್ರಿ' ಬೋರ್ಡ್ ತೋರಿಸಿದೆ.

ಬೋನಿ ಕಪೂರ್-ಶ್ರೀದೇವಿ ದಂಪತಿಗಳಿಗೆ ಹಾಗೂ ಅವರ ಎಸ್.ಕೆ. ಫಿಲ್ಮ್ ಎಂಟರ್‌ಪ್ರೈಸಸ್‌ಗಳಿಗೆ ನೋಟಿಸ್ ಜಾರಿಯಾಗಿದೆ. ಕಪೂರ್ ದಂಪತಿಗಳಿಂದ... sorry ಬಾಬಾ... ಶ್ರೀದೇವಿ ದಂಪತಿಗಳಿಂದ ತನಗಿನ್ನೂ 4 ಕೋಟಿ ರೂಪಾಯಿ ಬಾಕಿ ಬರುವುದಿದೆ ಎಂದು 'ನೋ ಎಂಟ್ರಿ' ಚಿತ್ರದ ಫೈನಾನ್ಷಿಯರ್ ಪ್ರೇಮಕುಮಾರ್ ಅಗರವಾಲ್ ಕೋರ್ಟ್ ಮೆಟ್ಟಿಲೇರಿ ಸಹಾರ ಚಾನೆಲ್‌ನಲ್ಲಿನ ಚಿತ್ರದ ಟೆಲಿಕ್ಯಾಸ್ಟ್‌ಗೆ ಕೊಕ್ಕೆ ಹಾಕಿದ್ದಾನೆ. ಚಿತ್ರ 2005 ಅಕ್ಟೋಬರ್‌ನಲ್ಲೇ ಬಿಡುಗಡೆಯಾಗಿ ಬಾಕ್ಸ್ ಆಫೀಸಿನಲ್ಲಿ ಕೊಳ್ಳೆ ಹೊಡೆದಿದ್ದರೂ 4 ಕೋಟಿ ರೂಪಾಯಿಗಳನ್ನು ಹಿಂದಿರುಗಿಸದೆ ಅಗರ್‌ವಾಲ್‌ನನ್ನು ಸತಾಯಿಸಿದ್ದಾರೆ ಶ್ರೀದೇವಿ ದಂಪತಿಗಳು.

ಕಳೆದ ವರ್ಷ ಕಾಮಿಡಿ ಚಿತ್ರಗಳಿಗೆ ಒಳ್ಳೆ response ಇದ್ದಿದ್ದರಿಂದ ಶ್ರೀದೇವಿ ದಂಪತಿಗಳು 'ನೋ ಎಂಟ್ರಿ' ಎಂಬ ಸೆಕ್ಸ್ ಕಾಮಿಡಿ ಚಿತ್ರ ಮಾಡಿ ಗೆದ್ದಿದ್ದರು. ಅನಿಲ್‌ಕಪೂರ್, ಸಲ್ಮಾನ್, ಫರ್ದಿನ್ ಖಾನ್‌ರೊಂದಿಗೆ ಲಾರಾದತ್ತಾ, ಸೆಲಿನಾ ಜೆಟ್ಲಿ, ಇಶಾ ಡಯೋಲ್ ಎಂಬ 'ಡಾಲ್'ಗಳೆಲ್ಲ ಇದ್ದ ಚಿತ್ರದಲ್ಲಿ ಕ್ಲಬ್ ಡ್ಯಾನ್ಸರ್ ಆಗಿ ಬಿಪಾಷಾ ಬೇಬಿ ರಂಜಿ ಸಿದ್ದಳು. ನೈಟ್‌ಕ್ಲಬ್‌ನ ಡ್ಯಾನ್ಸರ್ ಬಿಪಾಷಾಳ ನೂರಾರು ಅಭಿಮಾನಿಗಳಲ್ಲಿ ಸಲ್ಮಾನ್‌ಗೆ flirt ಮಾಡುವುದೇ ನಿತ್ಯ ಕಾಯಕ. ಅವನ ಗರತಿ ಪತ್ನಿ ಇಶಾ ಡಯೋಲ್‌ಗೆ ಗಂಡನ ಮೇಲೆ ಎಳ್ಳಷ್ಟೂ ಅನುಮಾನವಿಲ್ಲ. ಆದರೆ ಪತ್ನಿವ್ರತ ಅನಿಲ್‌ಕಪೂರ್ ಮೇಲೆ ಆತನ ಪತ್ನಿ ಲಾರಾದತ್ತಾಗೆ ವೃಥಾ ಸಂಶಯ. 'ಜೀವನ ಮಜಾ ಮಾಡ್ಬೇಕು' ಎಂಬ ಸಲ್ಮಾನ್ ಸಲಹೆ ಒಪ್ಪುವ ಅನಿಲ್‌ಕಪೂರ್ ಬಿಪಾಷಾಳ ಸಂಗಕ್ಕೆ ಬೀಳುತ್ತಾನೆ. ಅಲ್ಲಿಗೆ ಪತ್ನಿ ಇಶಾ ಬರುವುದರೊಂದಿಗೆ ಚಿತ್ರ ನಗಿಸುತ್ತಲೇ ಸಾಗುತ್ತದೆ. ಅನೀಸ್ ಬಾಜ್ಮಿಯ ನಿರ್ದೇಶನ ಕಚಗುಳಿ ಇಡುತ್ತದೆ.

ಕಳೆದ ವರ್ಷ ಮುನ್ನಾಭಾಯಿ ಎಂಬಿಬಿಎಸ್, ಬಂಟಿ ಔರ್ ಬಬ್ಲೂ, ಮೈನೆ ಪ್ಯಾರ್ ಕ್ಯೂಂ ಕಿಯಾ, ಗರಂಮಸಾಲ ಮುಂತಾದ ಕಾಮಿಡಿ ಚಿತ್ರಗಳೆಲ್ಲ ಹಿಟ್ ಆಗಿತ್ತು, ಬೋನಿ ಕಪೂರ್ ಸಹೋದರ ಅನಿಲ್ ಕಪೂರ್‌ಗೂ ಭೂಗತಲೋಕದ ಸಂಪರ್ಕವಿರುವ ಸುದ್ದಿಗಳು ಆಗಾಗ ತೇಲಿ ಬಂದಿವೆ. ಈಗ ಅಗರ್‌ವಾಲ್‌ಗೆ ನಾಲ್ಕು ಕೋಟಿಯ ವಂಚನೆಗೆ ಕಾರಣವಾಗಿರುವ ಬೋನಿ ಕಪೂರ್‌ನಿಂದ ಶ್ರೀದೇವಿ ಎಂಬ ಸಂಪನ್ನೆಯೂ ಕೋರ್ಟ್ ಮೆಟ್ಟಿಲೇರಬೇಕಾಗಿದೆ. ಮೊದಲಿಗೆ ಅಗರ್‌ವಾಲ್ ಚಿತ್ರದ ಟಿವಿ ರೈಟ್ಸ್‌ನ್ನು Zee ಟೀವಿಗೆ ನೀಡಲು ಸಲಹೆ ಮಾಡಿದ್ದ. ಆದರೆ ಬೋನಿಕಪೂರ್ ತನ್ನೆಲ್ಲ ಚಿತ್ರಗಳ ರೈಟ್ಸ್‌ನ್ನು ಸಹಾರಾಕ್ಕೆ ನೀಡಿದ್ದರಿಂದ ಅಗರ್‌ವಾಲ್‌ಗೆ ಸಿಟ್ಟು ಬಂದಿದೆ.

ಚಿತ್ರ ಹಿಟ್ ಆದರೂ ಫೈನಾನ್ಷಿಯರ್‌ಗೆ ಚಾರ್ ಕರೋಡ್ ಬಾಕಿ ಕೊಡದಿರುವುದು 'ಚಾರ್ ಸೋ ಬಿಸ್' ಕೆಲಸ ಅಲ್ಲವೆ ಶ್ರೀದೇವಿ?

ಕೋರ್ಟ್‌ಗೆ ಹೋದ ಅಗರ್‌ವಾಲ್ 'ಹಿಮ್ಮತ್ ವಾಲಾ' ಎನಿಸಿಕೊಂಡರೆ, ಬೋನಿಕಪೂರ್ 'ಮವಾಲಿ' ಎನಿಸಿಕೊಂಡಿದ್ದಾನೆ. 'ಚಾಂದ್ ಕಾ ತುಕಡಾ' ಶ್ರೀದೇವಿ ಮಾತ್ರ "ಕೌನ್ ಸಚ್ಚಾ ಕೌನ್ ಝೂಟಾ?" ಎನ್ನುತ್ತಿದ್ದಾಳೆ!

-ಮಲ್ಲಿ





ಪ್ರಕಾಶ್ ರೈ ನಿರ್ದೇಶನಕ್ಕೆ

ರಂಗಭೂಮಿ ಹಿನ್ನೆಲೆಯ ಪ್ರಕಾಶ್ ರೈ ನಿರ್ದೇಶನಕ್ಕೆ ಇಳಿಯುತ್ತಿದ್ದಾರೆ. ತಮಿಳು ಚಿತ್ರರಂಗಕ್ಕೆ ಹೋಗಿ ಅಲ್ಲಿ ಖ್ಯಾತಿ ಗಳಿಸಿದ ಪ್ರಕಾಶ್ ರೈ ಆರೇಳು ಚಿತ್ರಗಳನ್ನೂ ನಿರ್ಮಿಸಿದ್ದರು.

ಈ ತಮಿಳು ಚಿತ್ರದ ಕಥಾವಸ್ತು ದೆವ್ವದ ಸುತ್ತ ಇರುತ್ತದಂತೆ. ಅವರ ಮಗನ ಸಾವು ಉಂಟು ಮಾಡಿದ ನೋವು, ತಲ್ಲಣ, ವಿಷಾದಗಳೆಲ್ಲವೂ ಈ ಚಿತ್ರದಲ್ಲಿ ಮೂಡಿಬರಲಿವೆ. ಅವರ ಮಗನಿಗೆ ಈ ಚಿತ್ರ ಅರ್ಪಿಸಲಾಗುತ್ತಿದೆ. ಪ್ರಕಾಶ್ ಪ್ರತಿಭೆ ಬಲ್ಲವರಿಗೆ ನಿರ್ದೇಶಕನಾಗಿ ಆತ ಗೆಲ್ಲುವುದು ಗ್ಯಾರಂಟಿ ಎಂದು ಗೊತ್ತು.

ಪ್ರಕಾಶ್‌ಗೀಗ ಮೊದಲ ಬಾರಿ ನಿರ್ದೇಶನ ಮಾಡುವ ಖುಷಿ ಒಂದು ಕಡೆಯಾದರೆ, ಅವರ ಮಗನ ಸಾವಿನ ನೆನಪುಗಳು ತರುವ ವಿಷಾದ ಒಂದು ಕಡೆ.

ಪ್ರಕಾಶ್‌ಗೆ ನಿರ್ದೇಶನದಲ್ಲಿ ಜಯ ಸಿಗಲಿ.



'ಭೀಷ್ಮ'ನಾದ ಶಿವು!

ಅಭಿಮಾನಿಗಳ ಒತ್ತಾಯಕ್ಕೆ ಮಣಿದು ಶಿವರಾಜ್ ಈಗ 'ಭೀಷ್ಮ'ನಾಗಿದ್ದಾರೆ. ಆರ್.ಎಸ್.ಎನ್. ಗೌಡ ನಿರ್ಮಾಣದ 'ದಾದಾಗಿರಿಯ ದಿನಗಳಲ್ಲಿ' ಎಂಬ ಟೈಟಲ್‌ನ್ನು ಅಭಿಮಾನಿಗಳ ಆಶೆಯಂತೆ 'ಭೀಷ್ಮ' ಎಂದು ಬದಲಾಯಿಸಲಾಗಿದೆ. ಉಪ್ಪಿಯ 'ನಾಗರಹಾವು' ನಿರ್ದೇಶನದ ನಂತರ ಈಗ 2 ನೇ ಬಾರಿಗೆ ಮುರಳಿ 'ಭೀಷ್ಮ' ನಿರ್ದೇಶಿಸಲಿದ್ದು, ಮುಂದಿನ ತಿಂಗಳು ಚಿತ್ರ ಸೆಟ್ಟೇರಲಿದೆ.



'ಟೈ-2' ಚಿತ್ರದಲ್ಲಿ ಸುನೀತಾ ರಾವ್

ಎರಡು ಪ್ರಶಸ್ತಿ ಸಮಾರಂಭಗಳು:

ಒಂದು ಕಪ್ಪು ಚುಕ್ಕಿ ಇನ್ನೊಂದು ಬೆಳ್ಳಿ ಚುಕ್ಕಿ



24 ಗಂಟೆಗಳ ಅವಧಿಯಲ್ಲಿ ಎರಡು ಪ್ರಶಸ್ತಿ ಪ್ರದಾನ ಸಮಾರಂಭಗಳು ಜರುಗಿದವು. ಸರ್ಕಾರದ ಕಾರ್ಯಕ್ರಮ ಅಸ್ತವ್ಯಸ್ತದ ಉತ್ತುಂಗ ತಲುಪಿದರೆ, ಈಟಿವಿಯ ಕಾರ್ಯಕ್ರಮ ಶಿಸ್ತು, ಸಂಭ್ರಮಗಳ ಸಂಗಮವಾಗಿತ್ತು.

ಇಡೀ ಸರ್ಕಾರಿ ಯಂತ್ರವೇ ಬೆನ್ನಿಗಿದ್ದರೂ ಸರ್ಕಾರಿ ಚಲನಚಿತ್ರ ಸಮಾರಂಭಕ್ಕೆ ಅದು ವರದಾನ ಆಗುವ ಬದಲು ಶಾಪವಾಯಿತು. ಮೊದಲ ಬಾರಿ ತಾಲ್ಲೂಕು ಪ್ರದೇಶದಲ್ಲಿ ನಡೆದ ಸಮಾರಂಭ ಎಂಬ ಒಣ ಹೆಗ್ಗಳಿಕೆಯಷ್ಟೇ ಈ ಸಮಾರಂಭದಲ್ಲಿತ್ತು. ಮುಖ್ಯಮಂತ್ರಿಯಾದ ಮೇಲೆ ತಾವು ರಾಮನಗರವನ್ನು ಮರೆತಿಲ್ಲ ಎಂಬುದನ್ನು ಪ್ರದರ್ಶಿಸಲೆಂದೇ ಕುಮಾರಸ್ವಾಮಿ ಈ ಕಾರ್ಯಕ್ರಮ ಆಯೋಜಿಸಿದಂತಿತ್ತು.

ಕುಮಾರಸ್ವಾಮಿಯ ಅಭಿಮಾನಿಗಳ ಸಭೆಯಂತಾಗಿ ಹೋದ ಈ ಸಮಾರಂಭದ ವೇದಿಕೆಯ ಮೇಲೆ ಎಣಿಸಲಾಗದಷ್ಟು ಗಣ್ಯರು, ನಗಣ್ಯರೆಲ್ಲ ಇದ್ದರು.

ಚಿತ್ರರಂಗಕ್ಕೂ ಈ ಪ್ರಶಸ್ತಿ ಸಮಾರಂಭಕ್ಕೂ ಸಂಬಂಧವೇ ಇಲ್ಲವೇನೋ ಎಂಬಂತಹ ವಾತಾವರಣ ನಿರ್ಮಾಣವಾಗಿತ್ತು. ರಾಜ್, ವಿಷ್ಣು, ಅಂಬರೀಷ್, ಶಿವರಾಜ್, ರವಿಚಂದ್ರನ್, ಶಶಿಕುಮಾರ್, ರಮೇಶ್, ರಮ್ಯಾ, ರಕ್ಷಿತಾ, ರಾಧಿಕಾ ಎಲ್ಲರೂ ಗೈರು ಹಾಜರು! ಕುಮಾರಸ್ವಾಮಿಯವರಿಂದ ಅನಂತಮೂರ್ತಿ ವಿಷಯ ಪ್ರಸ್ತಾಪ! ಚಿತ್ರರಂಗ, ಸರ್ಕಾರ ಎರಡಕ್ಕೂ ಸಂಬಂಧಿಸಿದ ಮುಖ್ಯಮಂತ್ರಿ ಚಂದ್ರು ಗಂಭೀರತೆಗೆಲ್ಲ ಗುಡ್‌ಬೈ ಹೇಳಿ ಏನೇನೋ ಮಾತಾಡಿ ಶುದ್ಧ ಕೋಡಂಗಿಯಂತಾಡಿದರು. ವೇದಿಕೆಯ ಮೇಲೆ ಜಯಂತಿ, ತಾರಾ, ಹೇಮಾ ಚೌಧರಿ, ಜಯಮಾಲಗಳೆಲ್ಲ ಸುಮ್‌ಸುಮ್ನೆ ಅತ್ತಿಂದಿತ್ತ ಓಡಾಡುತ್ತ ಮಕ್ಕಳಾಟ ನೆನಪಿಸಿಬಿಟ್ಟರು.

ಹಣ, ಆಡಳಿತ ಯಂತ್ರ ಎಲ್ಲ ಇದ್ದೂ ಚೈತನ್ಯ, ಶಿಸ್ತು, ಇಲ್ಲದಿದ್ದರೆ ಎಂತಹ ಕಾರ್ಯಕ್ರಮವೂ ಅಸ್ತವ್ಯಸ್ತಗೊಳ್ಳುತ್ತದೆ ಎನ್ನುವುದಕ್ಕೆ ಈ ಸಮಾರಂಭ ನೆನಪಾಗಿ ಉಳಿಯುತ್ತದಷ್ಟೇ. ಮುಖ್ಯಮಂತ್ರಿಗಳ ಸಂಧಾನದ ನಂತರವೂ ಗಿರೀಶ್ ಕಾಸರವಳ್ಳಿ, ಪಿ. ಶೇಷಾದ್ರಿಯವರು ಪ್ರಶಸ್ತಿ ಸ್ವೀಕರಿಸಲು ನಿರಾಕರಿಸಿದ್ದು, ಸರ್ಕಾರ ಹಾಗೂ ಪ್ರಶಸ್ತಿ ಆಯ್ಕೆ ಸಮಿತಿಗಳಿಗೆ ಮುಜುಗರ ತಂದಿದ್ದಂತೂ ಸತ್ಯ.

ಆದರೆ ಮೊದಲ ಪ್ರಯತ್ನದಲ್ಲೇ ಈಟಿವಿಯವರು ಗೆದ್ದಿದ್ದಾರೆ. ಪ್ರೊಫೆಷನಲ್ ಆಗಿ ಕಾರ್ಯಕ್ರಮ ನಡೆಸಿದ ಈಟಿವಿ ಬಳಗದ ಪ್ರಶಸ್ತಿ ಸಮಾರಂಭಕ್ಕೆ ಇಡೀ ಉದ್ಯಮವೇ ಸಹಕರಿಸಿತ್ತು. ನಾಯಕ, ನಾಯಕಿಯರೇ ನೃತ್ಯಗಳಲ್ಲಿ ಭಾಗವಹಿಸಿ ಹಬ್ಬದ ವಾತಾವರಣ ಮೂಡಿಸಿದರು. ಪ್ರಶಸ್ತಿಗಳನ್ನು ಮೊದಲೇ ಅನೌನ್ಸ್ ಮಾಡಿರದಿದ್ದ ಈ ಕಾರ್ಯಕ್ರಮದ ಶಿಸ್ತು, ಸುವ್ಯವಸ್ಥೆಯನ್ನು ನಮ್ಮ ಸರ್ಕಾರದ ಅಧಿಕಾರಿಗಳು ನೋಡಿ ಕಲಿಯಬೇಕಿದೆ.

ಈಟಿವಿಯ ಸಮಾರಂಭಕ್ಕೆ ಧನಾತ್ಮಕವಾಗಿ ಪ್ರತಿಕ್ರಿಯಿಸಿದ ಉದ್ಯಮ ಸರ್ಕಾರಿ ಸಮಾರಂಭಕ್ಕೆ ಬೈ ಹೇಳಿದ್ದೇಕೆ? ಅಭಿರುಚಿಹೀನ ಅಧಿಕಾರಿಗಳನ್ನು ನೋಡಿದರೆ ಇದಕ್ಕೆ ಉತ್ತರ ಸಿಗುತ್ತದೆ.

[PRI]NTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore-4, Phone : 26676427 Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44